ಮಧ್ವಾಚಾರ್ಯರ ಆತ್ಮಚರಿತ್ರೆ ಅಧ್ಯಯನ

(ಶಾಂಕರಭಾಷ್ಯ, ಕಾಳಿದಾಸ್ತ್ರಿ, ಬೆಳಗು ಕೃತಿಗಳನ್ನು ಹೊರತುಪಡಿಸಿ)

ಕನ್ನಡ ವಿಶ್ವವಿದ್ಯಾನಿಲಯಕ್ಕೆ ಸಾದರ ಪಡಿಸಿದ ಎಂ.ಫಿಲ್ ಪದವಿಗಾಗಿ ಪ್ರಬಂಧ

ಸಂಶೋಧಕ

ಕರಿಬಸವನಗೌಡ ಬಿ.

ಮಾರ್ಗದರ್ಶಕರು

ಡಾ. ಎಸ್. ಅಮರೇಶ ನುಗುಡೋಣಿ

ಸ್ನಾತಕರು

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ಶಿವಪುರ ವಿಜಯ

೨೦೦೫-೦೬

ಪರಾಮರ್ಶೆಗೆ ಮಾತ್ರ

"ಸಿರಿಗನ್ನಡ" ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ಜಿಲ್ಲೆ ೨೮೬

ಮಧುರಚೆನ್ನರ ಆತ್ಮಶೋಧ ಅಧ್ಯಯನ

(ಪೂರ್ವರಂಗ, ಕಾಳರಾತ್ರಿ, ಬೆಳಗು ಕೃತಿಗಳನ್ನು ಅನುಲಕ್ಷಿಸಿ)

ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರ ಪಡಿಸಿದ ಎಂ.ಫಿಲ್ ಸಂಪ್ರಬಂಧ

ಸಂಶೋಧಕ

ಕರಿಬಸವನಗೌಡ ಜಿ.

ಮಾರ್ಗದರ್ಶಕರು

ಡಾ. ಎನ್. ಅಮರೇಶ ನುಗುಡೋಣಿ

ಪ್ರವಾಚಕರು

'ಸಿರಿಗನ್ನಡ' ಗ್ರಂಥಾಲಯ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ಜಿಲ್ಲೆ ೨೭೬

೨೦೦೬

AKSHARA GRANTHALAYA

ACC.NO. 129753

810.9
G0U m

129753

ಮಾರ್ಗದರ್ಶಕರ ಪ್ರಮಾಣಪತ್ರ

ಜಿ. ಕರಿಬಸವನಗೌಡ ಇವರು **ಮಧುರಚೆನ್ನರ ಆತ್ಮಶೋಧ ಅಧ್ಯಯನ** (ಪೂರ್ವರಂಗ, ಕಾಳರಾತ್ರಿ, ಬೆಳಗು ಕೃತಿಗಳನ್ನು ಅನುಲಕ್ಷಿಸಿ) ಎಂಬ ತಲೆಬರಹವುಳ್ಳ ಸಂಶೋಧನಾ ಪ್ರಬಂಧವನ್ನು ನನ್ನ ಜತೆ ಸಮಾಲೋಚನೆ ನಡೆಸಿ ಸಿದ್ಧಪಡಿಸಿರುತ್ತಾರೆ. ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗುತ್ತಿರುವ ಪ್ರಸ್ತುತ ಪ್ರಬಂಧವನ್ನು ಅಥವಾ ಪ್ರಬಂಧದ ಯಾವುದೇ ಭಾಗವನ್ನು ಜಿ. ಕರಿಬಸವನಗೌಡರವರು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ.

ಸ್ಥಳ : ವಿದ್ಯಾರಣ್ಯ
ದಿನಾಂಕ : ೨೩/೦೬/೦೬

ಡಾ. ಎನ್. ಅಮರೇಶ ನುಗುಡೋಣಿ
ಪ್ರಾವಾಚಕರು ಹಾಗೂ ಮಾರ್ಗದರ್ಶಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಂಶೋಧಕರ ಪ್ರಮಾಣ ಪತ್ರ

ಮಧುರಚೆನ್ನರ ಆತ್ಮಶೋಧ ಅಧ್ಯಯನ (ಪೂರ್ವರಂಗ, ಕಾಳರಾತ್ರಿ, ಬೆಳಗು ಕೃತಿಗಳನ್ನು ಅನುಲಕ್ಷಿಸಿ) ಎಂಬ ಸಂಶೋಧನ ಪ್ರಬಂಧವನ್ನು ಡಾ. ಎನ್. ಅಮರೇಶ ನುಗಡೋಣಿ ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಎಂ.ಫಿಲ್ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಈ ಪ್ರಬಂಧದ ವಿಷಯವನ್ನು ಅಥವಾ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಲಿ ಅಥವಾ ಉದ್ದೇಶಗಳಿಗಾಗಲಿ ಬಳಸಿಕೊಂಡಿಲ್ಲವೆಂದು ತಿಳಿಯಪಡಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ : ೨೩/೦೬/೨೦೦೬.

ಜಿ. ಕರಿಬಸವನಗೌಡ
ಸಂಶೋಧಕ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿಷಯಸೂಚಿ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ, ಮಹತ್ವ / ೧

ಅಧ್ಯಯ ೨

ಮಧುರಚೆನ್ನರ ಸಾಹಿತ್ಯವನ್ನು ಕುರಿತು ಬಂದಿರುವ ಅಧ್ಯಯನಗಳ ತಾತ್ವಿಕ ಸಮೀಕ್ಷೆ / ೧೦

ಅಧ್ಯಾಯ ೩

ಮಧುರಚೆನ್ನರ ಕೃತಿ ರಚನೆಗೆ ಕಾರಣವಾದ ಸಾಂಸ್ಕೃತಿಕ ಹಿನ್ನಲೆಗಳು / ೨೭

೩.೧ ಸಾಹಿತ್ಯಿಕ ಹಿನ್ನಲೆ

೩.೨ ರಾಷ್ಟ್ರೀಯ ಆಂದೋಲನ ಮತ್ತು ಕರ್ನಾಟಕದ ಏಕೀಕರಣದ ಹಿನ್ನಲೆ

೩.೩ ಸುಧಾರಣ ಪಂಥದ ಪ್ರಭಾವದ ಹಿನ್ನಲೆ

೩.೪ ವೈಯಕ್ತಿಕ ಹಿನ್ನಲೆ

ಅಧ್ಯಾಯ ೪

ಮಧುರಚೆನ್ನರ ಕೃತಿಗಳ ಸಮೀಕ್ಷೆ / ೩೪

೪.೧ ಪೂರ್ವರಂಗ

೪.೨ ಕಾಳರಾತ್ರಿ

೪.೩ ಬೆಳಗು

ಅಧ್ಯಾಯ ೫

ಕೃತಿಗಳ ತಾತ್ವಿಕ ವಿಮರ್ಶೆ / ೭೧

ಅಧ್ಯಾಯ ೬

ಉಪಸಂಹಾರ / ೭೬

ಅನುಬಂಧಗಳು / ೮೨

೧. ಮಧುರಚೆನ್ನರ ಸಮಗ್ರ ಸಾಹಿತ್ಯ

೨. ಪಾರಿಭಾಷಿಕ ಪದಕೋಶ

೩. ಪ್ರಾಥಮಿಕ ಆಕರ ಗ್ರಂಥಗಳು

೪. ಪರಾಮರ್ಶನ ಗ್ರಂಥಗಳು

ನೆನಕೆಗಳು

ಕನ್ನಡ ವಿಶ್ವವಿದ್ಯಾಲಯದಲ್ಲಿ ಎಂ.ಫಿಲ್. ಮಾಡಲು ಅವಕಾಶ ಮಾಡಿಕೊಟ್ಟ ಕುಲಪತಿಗಳಾದ ಡಾ.ಬಿ.ಎ. ವಿವೇಕ ರೈ ಹಾಗೂ ಆಗಿನ ಕುಲಸಚಿವರಾದ ಡಾ. ಕರೀಗೌಡ ಬೀಚನಹಳ್ಳಿಯವರಿಗೂ, ಪ್ರಸ್ತುತ ಕುಲಸಚಿವರಾದ ಶಂಕರ್ ಅವರಿಗೆ, ಅಧ್ಯಯನಾಂಗದ ನಿರ್ದೇಶಕರಾದ ಟಿ.ಆರ್. ಚಂದ್ರಶೇಖರ ಅವರಿಗೆ, ಪ್ರಸಾರಾಂಗದ ನಿರ್ದೇಶಕರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್ ಅವರಿಗೆ, ಅಧ್ಯಯನದ ಕ್ರಮವನ್ನು ಶೋಧಿಸಿ ಪ್ರೀತಿಯಿಂದ ಕಾಳಜಿ ವಹಿಸಿ ಮಾರ್ಗದರ್ಶನ ನೀಡಿದ ಡಾ.ಎನ್. ಅಮರೇಶ ನುಗುಡೋಣಿ ಅವರಿಗೆ.

ಅಧ್ಯಯನದ ಅವಧಿಯಲ್ಲಿ ಪೂರಕ ಅಂಶಗಳನ್ನು ನೀಡಿ ಬರವಣಿಗೆಯನ್ನು ಗಮನಿಸಿ ಪ್ರೋತ್ಸಾಹಿಸಿದ ಡಾ.ಎನ್. ಅಮರೇಶ ನುಗುಡೋಣಿ, ಕನ್ನಡ ಸಾಹಿತ್ಯ ಅಧ್ಯಯನ ವಿಭಾಗದ ಮುಖ್ಯಸ್ಥರಾದ ಡಾ.ಆರ್. ವೆಂಕಟೇಶ ಇಂದ್ವಾಡಿ, ಡಾ. ರಹಮತ್ ತರೀಕೆರೆ, ಡಾ. ಬಿ.ಎಂ. ಪುಟ್ಟಯ್ಯ ಎಲ್ಲಾ ಗುರು ವೃಂದಕ್ಕೂ,

ವಿಭಾಗದಲ್ಲಿ ಹಿರಿಯರಾದ ಶಿವಪ್ಪಕೋಳೂರು, ಹನುಮಂತಪ್ಪ ಬಿ. ಇವರಿಗೆ, ನನ್ನ ಸಹಪಾಠಿಗಳಾದ, ಪುಷ್ಪಲತಾ ಎಸ್., ಸುನೀತಾ ಹೆಚ್., ಕನ್ನಡ ವಿಶ್ವವಿದ್ಯಾಲಯದ ಗ್ರಂಥಪಾಲಕರಿಗೂ ಹಾಗೂ ಸಿಬ್ಬಂದಿಗಳಿಗೂ.

ನನ್ನ ಬಾಳಿನಲ್ಲಿ ಜ್ಞಾನದ ದೀಪ ಹಚ್ಚಿದ ವಿಜಯಲಕ್ಷ್ಮಿ ಮೇಡಂ, ನೆಚ್ಚಿನ ಶಿಕ್ಷಕರಾದ ಮುಸ್ಟೂರಪ್ಪ ಕೆ.ಎನ್., ಊರ ಶಾಲೆಯ ಎಲ್ಲಾ ಶಿಕ್ಷಕ ವೃಂದಕ್ಕೂ ಹಾಗೆ ಸದಾ ಸ್ಫೂರ್ತಿ ತುಂಬುತ್ತಿದ್ದ ಹಳೆಮನೆ ರಾಜಶೇಖರ್ ಅವರಿಗೂ.

ವಿದ್ಯಾಭ್ಯಾಸಕ್ಕೆ ಒತ್ತಾಸೆಯಾಗಿ ನಿಂತ ಅಣ್ಣ ಮೋಹನ್, ಅಮ್ಮ ವೀರಮ್ಮ, ತಂದೆ ಗಂಗನಗೌಡ, ತಂಗಿ ರಾಜೇಶ್ವರಿ ಅಕ್ಕಂದಿರಿಗೂ.

ಈ ಸಂಪ್ರಬಂಧವನ್ನು ಅಲ್ಪ ಕಾಲದಲ್ಲಿ ಅಂದವಾಗಿ ಅಕ್ಷರ ಸಂಯೋಜಿಸಿ ಕೊಟ್ಟ ವೈ.ಎಂ.ಮರಿಸ್ವಾಮಿ ಅವರಿಗೆ ಕೃತಜ್ಞತೆಗಳು.

ಕರಿಬಸವನಗೌಡ ಜಿ.

ಅಧ್ಯಾಯ ೧

ಅಧ್ಯಯನ ಉದ್ದೇಶ, ವ್ಯಾಪ್ತಿ ಮತ್ತು ಮಹತ್ವ

ಆಧುನಿಕ ಕನ್ನಡ ಸಾಹಿತ್ಯ ಸಂದರ್ಭ, ಕನ್ನಡ ಸಾಹಿತ್ಯ ಚರಿತ್ರೆಯಲ್ಲಿಯೆ ಅತ್ಯಂತ ಮಹತ್ವ ಪೂರ್ಣವಾದುದು. ಹಳಗನ್ನಡ ಸಾಹಿತ್ಯದ ಪ್ರೇರಣೆ, ಪರಿಕರಗಳನ್ನು ಸ್ವೀಕರಿಸಿಕೊಂಡು ಬೇರೆಯಾಗಿ, ನಿರಂತರವಾಗಿ ಪರಂಪರೆಯ ಪ್ರಜ್ಞೆಯಲ್ಲಿಯೇ ಹೊಸ ಹೊಸ ಮಜಲುಗಳನ್ನು, ತಿರುವುಗಳನ್ನು ಅರಿಸಿಕೊಂಡು ಸ್ವತಂತ್ರವಾಗಿ-ಶ್ರೀಮಂತವಾಗಿ ಬೆಳೆದುಬಂದಿದೆ. ಸುಮಾರು ಆರೇಳು ದಶಕಗಳ ಅವಧಿಯಲ್ಲಿ ನವೋದಯ, ಪ್ರಗತಿಶೀಲ, ನವ್ಯ, ದಲಿತ, ಬಂಡಾಯ ಕಾಲಘಟ್ಟಗಳ ಸನ್ನಿವೇಶಗಳನ್ನು ನಿರ್ಮಾಣ ಮಾಡಿಕೊಳ್ಳುತ್ತ ಸುದೀರ್ಘವಾಗಿ ಹರಿದುನಿಂತಿದೆ. ಈ ಹೊಸ ಸಾಹಿತ್ಯದ ಘಟ್ಟಗಳು ಅನೇಕ ಪ್ರತಿಭಾವಂತ ಸಾಹಿತಿಗಳನ್ನು, ಕನ್ನಡಕ್ಕೆ ಕಾಣಿಕೆಯಾಗಿ ನೀಡಿದ ಗಳಿಗೆ ಸ್ಮರಣೀಯವಾದದ್ದು. ಇಷ್ಟೊಂದು ಬಹುಸಂಖ್ಯೆಯ ಸಾಹಿತಿಗಳು ಕನ್ನಡ ಸಾಹಿತ್ಯ ಚರಿತ್ರೆಯ ಯಾವ ಕಾಲಘಟ್ಟಗಳಲ್ಲಿಯೂ ಇಲ್ಲ. ಹೊಸಗನ್ನಡ ಪ್ರತಿಭಾವಂತ ಸಾಹಿತಿಗಳ ಪ್ರತಿಭೆಯಿಂದ ಕಾವ್ಯ, ನಾಟಕ, ಕಾದಂಬರಿ, ಪ್ರವಾಸ, ಪ್ರಬಂಧ, ಜೀವನ ಚರಿತ್ರೆ ಇತ್ಯಾದಿ ರೂಪಗಳು ಪ್ರಬುದ್ಧವಾಗಿ ನೆಲೆಗೊಂಡಿವೆ. ಇಲ್ಲಿ ಆತ್ಮಚರಿತ್ರೆಯ ಮಾತು ಬಂದಾಗ ಆಧುನಿಕ ಸಾಹಿತ್ಯದಲ್ಲಿ ಹೆಚ್ಚಿನ ಮನ್ನಣೆಯನ್ನು ಪಡೆದುಕೊಂಡಿತು. ಆತ್ಮಚರಿತ್ರೆ ವ್ಯಕ್ತಿಯೊಬ್ಬನ ಇಡೀ ಬದುಕಿನ ಚಿತ್ರಣವಾಗಿರುತ್ತದೆ.

ಅಂತಹ ಆತ್ಮಚರಿತ್ರೆಕಾರರಲ್ಲಿ ಮಧುರಚೆನ್ನರು ಒಬ್ಬರು. ನವೋದಯ ಲೇಖಕರಾಗಿದ್ದು, ನವೋದಯದ ಸಂದರ್ಭದಲ್ಲಿ ಅವರನ್ನು ಕಂಡ ಬಗೆ ಹೇಗೆ? ಸಾಹಿತ್ಯದಲ್ಲಿ ಅವರ ಪ್ರಸ್ತುತತೆ ಏನಿದೆ? ಎಂಬ ಪ್ರಶ್ನೆಗಳು, ಮಧುರಚೆನ್ನರ ವಿಶೇಷತೆಯನ್ನು ಕುರಿತು ಅಧ್ಯಯನ ಮಾಡಲು ಆಯ್ಕೆ ಮಾಡಿಕೊಳ್ಳಲಾಗಿದೆ.

ಹಾಗೆಯೇ ಆತ್ಮಚರಿತ್ರೆಗಳಿದ್ದರೂ ಕೂಡಾ ಮಧುರಚೆನ್ನರ ಆತ್ಮಚರಿತ್ರೆ ವಿಶಿಷ್ಟವಾಗಿದೆ. ಏಕೆ ವಿಶಿಷ್ಟ? ಹೇಗೆ ವಿಶಿಷ್ಟವಾಗಿದೆ? ಸಾಮಾನ್ಯ ಆತ್ಮಚರಿತ್ರೆಗಳಿಗೂ ಇವರ ಆತ್ಮಚರಿತ್ರೆಗೂ ಏನಾದರೂ ವ್ಯತ್ಯಾಸಗಳಿವೆಯೇ ಎಂಬುದನ್ನು ಕುರಿತು ಹೊಸ ರೀತಿಯ ಹೊಳಹುಗಳನ್ನು ಮತ್ತು ಮಿತಿಗಳನ್ನು ತೋರಿಸಿಕೊಡುತ್ತವೆ. ಹಾಗಾಗಿ ಮಧುರಚೆನ್ನರ ಆತ್ಮಚರಿತ್ರೆಯನ್ನು ಅಧ್ಯಯನ ಮಾಡುವ ಅಗತ್ಯವಿದೆ.

ಆತ್ಮಚರಿತ್ರೆಯನ್ನು ಹೊಸದೃಷ್ಟಿಕೋನಗಳನ್ನು ಕುರಿತು ಈ ಕೆಳಗಿನಂತೆ ಚರ್ಚಿಸಬಹುದು. ಮಧುರಚೆನ್ನರ ಹಿಂದೆ ಇರುವ ಕನ್ನಡ ಸಾಹಿತ್ಯ ಪರಂಪರೆಯಲ್ಲಿ ವಿವಿಧ ಧರ್ಮಕ್ಕೆ ಸೇರಿದ ಕವಿಗಳ ಕೃತಿಗಳಿವೆ. ಅವುಗಳಲ್ಲಿ ಆಂಶಿಕವಾಗಿ ಮಾತ್ರ ಅನುಭಾವದ ಹೊಳಹುಗಳಿವೆ. ಆದರೆ ಮಧುರಚೆನ್ನರ ಆತ್ಮಕಥನಗಳಲ್ಲಿ ದ್ವೈತಿಕತೆಯ ಅನ್ವೇಷಣೆಯ ಹಾದಿಯ ಉತ್ಕಟವಾದ ತಳಮಳಗಳು ಒಂದು ನೆಲೆಯಾದರೆ, ಅಲ್ಲಮಪ್ರಭುವಿನ ಅನುಭಾವಸ್ತರದೊಳಗಿನ ಪ್ರಶಾಂತ ಹಾಗೂ ಗೂಢಚರವಾಗುವ ಇನ್ನೇ ಶತಮಾನದ ಕೆಲ ಸಂತರಲ್ಲಿ ಹಾಗೂ ತತ್ವಪದಕಾರರಲ್ಲಿ ಅಭಿವ್ಯಕ್ತವಾಗುವ ಅನುಭಾವದ ಮೂಲ ನೆಲೆಗಳ ಅಮೂರ್ತ ಜಗತ್ತನ್ನು ಅದುವರೆಗಿನ ಮತಬಂಧನದಿಂದ ಬಿಡಿಸಿ ಗದ್ಯಪದ್ಯ ರೂಪಗಳಲ್ಲಿ ಮಧುರಚೆನ್ನರು ಮೂರ್ತಗೊಳಿಸಿದ್ದಾರೆ.

೨೦ನೇ ಶತಮಾನದ ಆದಿಯಲ್ಲಿ ಕನ್ನಡಸಾಹಿತ್ಯವು ನೂತನ ಆಯಾಮದ ಬಾಗಿಲನ್ನು ತಟ್ಟಿದ ಸಂದರ್ಭ. ನವೋದಯ ಎಂಬ ಹೆಸರಿನಿಂದ ನೆಲೆಸಿಲ್ಲುವ ಹವಣಿಕೆಯಲ್ಲಿರುವ ಕನ್ನಡಸಾಹಿತ್ಯವು ಹೊಸ ಪರಂಪರೆಗೆ ನಾಂದಿ ಹಾಡಿತು. ಜೊತೆಗೆ ರಾಷ್ಟ್ರೀಯ ಆಂದೋಲನದ ಕರೆ, ಕನ್ನಡನಾಡು ನುಡಿ ಚಿಂತನೆಯು ಗಾಳಿ ದಟ್ಟವಾಗಿ ಹಬ್ಬಿದ ಕಾಲವದು. ಸಾಹಿತ್ಯಕ ಹಾಗೂ ಸಾಂಸ್ಕೃತಿಕ ದಿಕ್ಕಿನೆಡೆಗೆ ಕನ್ನಡಿಗರು ದಾಪುಗಾಲಿಡುತ್ತಿರುವ ಮನ್ವಂತರ ಕಾಲವದು. ಅಂದಿನ ಕನ್ನಡ ಪ್ರೇಮಿಗಳು ಹಾಗೂ ಸಾಹಿತಿಗಳು ತಮ್ಮ ತಮ್ಮ ನೆಲೆಯಲ್ಲಿ ನಿಂತು ಕನ್ನಡ ಜಾಗೃತಿಯ ಕೇಂದ್ರಗಳನ್ನು ಹುಟ್ಟುಹಾಕಿದರು. ನವೋದಯದ ಹರಿಕಾರರೆಂದೇ ಪ್ರಸಿದ್ಧಿಯಾದ ಬಿ.ಎಂ.ಶ್ರೀ ನವೋದಯಕ್ಕೆ ಪರಂಪರೆಗೆ ಇಂಗ್ಲಿಷ್ ಪ್ರಖ್ಯಾತ ಕವಿಗಳಾದ ವರ್ಡ್ಸ್‌ವರ್ತ್, ಪಿ.ಬಿ. ಶೆಲ್ಲಿ, ಕೀಟ್ಸ್ ಮುಂತಾದವರ ಸಾಹಿತ್ಯಕ ಆಯಾಮಗಳನ್ನು ಅಳವಡಿಸಿಕೊಂಡಿತು. ಪ್ರಕೃತಿ ಪ್ರೀತಿ ಮುಂತಾದವು ಇದರ ಮುಖ್ಯ ಸಂಗತಿಗಳಾದವು ನವೋದಯ ಪ್ರಭಾವ ಪ್ರೇರಣೆಗೆ ಒಳಗಾದ ಸಾಹಿತ್ಯಕ ಪಡೆಗಳು ಅಲ್ಲಲ್ಲಿ ಹುಟ್ಟಿಕೊಂಡವು. ೧. ಆಚಾರ್ಯ ಬಿ.ಎಂ.ಶ್ರೀಯವರ ಮೈಸೂರು ಕೇಂದ್ರ; ಮಾಸ್ತಿ ಡಿ.ವಿ. ಗುಂಡಪ್ಪ, ಪು.ತಿ. ನರಸಿಂಹಾಚಾರ್, ಕೆ.ಎಸ್. ನರಸಿಂಹಸ್ವಾಮಿ, ಈ ಕೇಂದ್ರದ ಮುಖ್ಯ ಸಾಹಿತಿಗಳು, ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಕೇಂದ್ರ; ಗೋವಿಂದಪೈ, ಪಂಜೆಮಂಗೇಶರಾಯ, ಕಡೆಂಗೋಡ್ಲು ಶಂಕರಭಟ್ಟ ಮುಖ್ಯ ಕವಿಗಳು, ಗೆಳೆಯರ ಗುಂಪಿನ ಆನಂದಕಂದ, ಸಾಲಿರಾಮಚಂದ್ರರಾಯರು ಇವರನ್ನೊಳಗೊಂಡ ಧಾರವಾಡ ಕೇಂದ್ರ. ಇವುಗಳ ಜೊತೆಗೆ ಮಧುರಚೆನ್ನರ ಬಳಗದ ಸಿಂಪಿಲಿಂಗಣ್ಣ, ಕಾಪಸೆರೇವಪ್ಪ ಇವರನ್ನೊಳಗೊಂಡ ಹಲಸಂಗಿ ನವೋದಯದ ನಾಲ್ಕನೇ ಕೇಂದ್ರಗಳು ಹುಟ್ಟಿಕೊಂಡವು.

ಹಲಸಂಗಿ ಕೇಂದ್ರದ ಪ್ರಮುಖ ಲೇಖಕರಲ್ಲಿ ಮಧುರಚೆನ್ನರು ಒಬ್ಬರಾಗಿದ್ದಾರೆ. ನವೋದಯದ ಪ್ರಮುಖ ಲೇಖಕರಾದ ಕುವೆಂಪು, ಬೇಂದ್ರೆ, ಪು.ತಿ.ನ. ಮಧುರಚೆನ್ನರು ಧರ್ಮ ನಿರಪೇಕ್ಷ ನಿಲುವಿನಿಂದ ತಮ್ಮ ಸೃಜನಶೀಲತೆಯ ಹಂತಗಳಲ್ಲಿ ಧರ್ಮವನ್ನು ಮೀರಬಲ್ಲವರಾಗಿದ್ದಾರೆ. ಮಧುರಚೆನ್ನರ ಓರಗೆಯ ಕವಿಗಳು ಕರ್ನಾಟಕದ ಹಾಗೂ ಭಾರತೀಯ ಬದುಕಿನ ಪರಿವರ್ತನೆಗಳಿಗೆ, ವಿವಿಧ ಸಾಂಸ್ಕೃತಿಕ, ರಾಜಕೀಯ, ಸಾಮಾಜಿಕ ಸ್ಪಂದನಗಳಿಗೆ ಮುಖವಾಣಿಯಾದವರು. ನವೋದಯ ಸಾಹಿತ್ಯದ ಸೀಮಾ ರೇಖೆಗಳನ್ನು ತಮ್ಮ ಬಹುಮುಖ ಪ್ರತಿಭೆಯಿಂದ ವಿಸ್ತರಿಸಿದವರು. ಕುವೆಂಪು ಅವರಲ್ಲಿ 'ದೇವರು ರುಜು ಮಾಡಿದನು' ಎಂಬ ಕವಿತೆಯಿಂದ ಮೊದಲುಗೊಂಡು ನಿಸರ್ಗದಲ್ಲಿ ಅವರು ವಿಶ್ವ ಚೈತನ್ಯದೊಂದಿಗೆ ನಡೆಯಿಸುವ ಸಂವಾದ ಮತ್ತು ಅದ್ಭೈತ ಅನುಭವಗಳನ್ನು ವರ್ಣಿಸುವ ಎಷ್ಟೋ ಕವಿತೆಗಳಲ್ಲಿ 'ಅನುಭಾವಪರತೆ'ಯನ್ನು ಗುರುತಿಸಬಹುದು. ಮೂಲತಃ ಭಾಗವತ ಪರಂಪರೆಯ ಭಕ್ತಿಯ ನೆಲೆಯಲ್ಲಿ ನಿಲ್ಲುವ ಪು.ತಿ.ನ. ಅವರ ದೇವಾಲಯ ಮತ್ತು ನಿಸರ್ಗದ ನಡುವೆ ಆನಂದಾನುಭೂತಿಗಳಲ್ಲಿ ಅನುಭಾವದ ಸ್ಪರ್ಶವಿದೆ. ಬೇಂದ್ರೆಯವರಂತೂ ಕರ್ನಾಟಕ ಸಂತ ಪರಂಪರೆಯೊಂದಿಗೆ ತಮ್ಮನ್ನು ಬೆಸೆದುಕೊಳ್ಳುವ ಮೂಲಕ ಸಂತರ ಮುಖವಾಣಿಯೂ ಆಗುತ್ತಾ ಅನೇಕ ಕವಿಗಳಲ್ಲಿ ಎಚ್ಚರದೊಳಗಿನ ಎಚ್ಚರವನ್ನು ಅಭಿವ್ಯಕ್ತಿಸಿದ್ದಾರೆ. ಈ ರೀತಿಯ ಆಧ್ಯಾತ್ಮಿಕ ಕವಿತೆ

ಅನುಭಾವವಾದ ತುಡಿತಗಳು ಕಾಣಿಸಿಕೊಂಡರು. ಅದೊಂದೆ ಕೇಂದ್ರ ಕಾಳಜಿಯಾಗಿರಲಿಲ್ಲ. ಈ ಒಸ್ಲೆಲೆಯಲ್ಲಿ ನೋಡಿದರೆ ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಯೋಗ ಸಾಧನೆಯ ಕರ್ಮಮಾರ್ಗ ಅವನ್ನು ತಮ್ಮ ಬದುಕಿನ ಕೇಂದ್ರವನ್ನಾಗಿ ಮಾಡಿಕೊಂಡು ನಿಜವಾದ ಅರ್ಥದಲ್ಲಿ 'ಅನುಭಾವಿಕವಿ' ಎಂದು ಕರೆಯಿಸಿಕೊಳ್ಳುವವರು ಮಧುರಚೆನ್ನರೊಬ್ಬರೇ ಎಂದು ಹೇಳಬಹುದು.

ನವೋದಯೇತರ ಮಹತ್ವದ ಕವಿಗಳಲ್ಲಿ ಅವರವರ ಕಾವ್ಯದ ಹಲವು ಮುಖಗಳಲ್ಲಿ ಒಂದಾಗಿದ್ದರೆ ಮಧುರಚೆನ್ನರಲ್ಲಿ ಎಲ್ಲವೂ ಅನುಭಾವವೇ ಆಗಿದೆ. ಅದು ಅವರ ಕಾವ್ಯದ ಮೊದಲು ಹೌದು, ತುದಿಯೂ ಹೌದು. ಅಷ್ಟೆ ಅಲ್ಲ, ಅದು ಮೂಲತಃ ಸಾಧಕನಾದ ಹಾಗೂ ಆತ್ಮಶೋಧಕನಾದ ವ್ಯಕ್ತಿತ್ವವೊಂದರ ಆಧ್ಯಾತ್ಮಿಕ ಪ್ರಯಾಣದ ಅಂತರಾನುಭವಗಳ ಸ್ವಗತ ಲಹರಿಯಾಗಿದೆಯೇ ಹೊರತು ಸಾಹಿತ್ಯ ನಿರ್ಮಿತಿಯ ಉದ್ದೇಶ ಅಥವಾ ತುರ್ತಿನಿಂದ ರಚಿತವಾದದ್ದಲ್ಲ. ಆದಕಾರಣವೇ ಅದು 'ಈ ಜನ್ಮದಲ್ಲಿ ಪರಮಾತ್ಮನ ಪ್ರತ್ಯಕ್ಷ ಅನುಭವವನ್ನು ಪಡೆಯುವುದಕ್ಕಿಂತ ಹೆಚ್ಚಿನದೇನು ಇಲ್ಲ' ಎಂಬ ಎಚ್ಚರವೊಂದರ ಹಾದಿಯಲ್ಲಿ ಹೊರಟ ಪಯಣಿಗನ ಹಂಬಲ, ವ್ಯಾಕುಲ, ಸಂಘರ್ಷ, ಸತ್ಯದ ದರ್ಶನದಿಂದ ಒದಗುವ ಸಂಭ್ರಮ ತದನಂತರ ಘಟನೆ ಕವಿದುಕೊಳ್ಳುವ 'ಕಾಳರಾತ್ರಿಯ ತಲ್ಲಣಗಳು ಮತ್ತು ಮುಂದಿನ ಅರುಣೋದಯ ಬೆಳಕಿನ ಆನಂದ ಕಥನ ಮಾತ್ರವಾಗುತ್ತದೆಯೇ ಹೊರತು, ಸಾಮಾಜಿಕ ಪ್ರಜ್ಞೆ ವಾಸ್ತವಿಕತೆ, ರಾಷ್ಟ್ರೀಯತೆ, ನಿಸರ್ಗ ಸೌಂದರ್ಯನಿಷ್ಠದಂತಹ ಸಾಹಿತ್ಯಕ ಕಾಳಜಿಗಳು ಮುಖ್ಯವಾಗುವುದಿಲ್ಲ. ಯಾಕೆಂದರೆ ಯಾವಚೇತನಕ್ಕೆ ಈ ಎಚ್ಚರದೊಳಗೊಂದು ಹೊಸ ಎಚ್ಚರ ಹುಟ್ಟಿ ಆ ಎಚ್ಚರ ಮೂಲವನ್ನು ಅರಿಯುವ ಹಾಗೂ ಅದರೊಂದಿಗೆ ಬೆರೆಯುವ ಅನುಭಾವದ ಹಂಬಲವೊಂದೇ ಹಾಸಲುಂಟು, ಹೊದೆಯ ಹೊದೆಯುಂಟು ಎಂಬ ಉತ್ಕಟವಾದ ಅವಸ್ಥೆ ವಿಶೇಷವಾಗುತ್ತದೋ, ಅದಕ್ಕೆ ತಾನುಂಟು, ತನ್ನ ದೈವ ಉಂಟು ಎಂಬುದರ ಹೊರತು ಮತ್ತಾವುದು ಬೇಕಾಗುವುದಿಲ್ಲ. ಇದರಿಂದ ಮಧುರಚೆನ್ನರು ಹೇಗೆ ಭಿನ್ನ ಎಂಬುದನ್ನು ತಿಳಿಯುತ್ತದೆ. 'ಮಧುರಚೆನ್ನರ' ಆತ್ಮಚರಿತ್ರೆಯು ಇತರೆ ಆತ್ಮಚರಿತ್ರೆಗಳಿಗಿಂತ ಹೇಗೆ ಭಿನ್ನವಾಗಿದೆ? ಎಂಬುದನ್ನು ನೋಡಬಹುದು. ಸಾಮಾನ್ಯ ಆತ್ಮಚರಿತ್ರೆಗಳ ಲಕ್ಷಣವನ್ನು ವಿಶ್ಲೇಷಿಸಿದರೆ ಮಧುರಚೆನ್ನರ ಆತ್ಮಚರಿತ್ರೆಯ ವಿಶಿಷ್ಟತೆಯನ್ನು ಅರ್ಥ ಮಾಡಿಕೊಳ್ಳಲು ಸಹಾಯವಾಗಬಹುದು.

"ಆತ್ಮಕಥೆಯು ಗದ್ಯಶೈಲಿಯದ್ದಾಗಿ ಲೇಖಕನ ಕಥಾನಾಯಕನಾಗಿರಬೇಕು ಮತ್ತು ಲೇಖಕನ ಬದುಕೇ ಕಥಾವಸ್ತುವಾಗಿರಬೇಕು. ಬಾಲ್ಯ ಘಟನೆಯಿಂದ ಹಿಡಿದು ವೃದ್ಧಾಪ್ಯದವರೆಗಿನ ಎಲ್ಲಾ ವಿವರಗಳನ್ನು ಆ ಕಾಲದ ಪರಿಸರ ತನ್ನ ಬದುಕಿನ ಸಂಜೆಗಣ್ಣಿನ ಹಿನ್ನೋಟವನ್ನು ಕೃತಿಯ ಅಂತ್ಯದಲ್ಲಿ ನೋಡಿ ಜೀವನ ವೈವಿಧ್ಯದಲ್ಲಿ ಮನುಷ್ಯ ಸಂಬಂಧಗಳು ವ್ಯಕ್ತಿತ್ವದ ಮಹತ್ವ, ಸಾಮಾಜಿಕ ಸ್ಥಿತ್ಯಂತರಗಳು ಜೀವನದ ಇತಿಹಾಸ ಹೊಂದಿ ಅವರ ಸಾಂಸ್ಕೃತಿಕ ಪರಿಸರ ಎಲ್ಲವನ್ನೂ ಒಳಗೊಂಡಿರುವ ವಾಸ್ತವ ಬದುಕಿನ ಪ್ರಾಮಾಣಿಕ ಅಭಿವ್ಯಕ್ತಿಯಾಗಿರಬೇಕು.

ಆತ್ಮಚರಿತ್ರೆಯಲ್ಲಿ ವ್ಯವಹಾರದ ಸಾಧನಸಿದ್ಧಿಗಳು ಮೌಲ್ಯಗಳ ಬಗೆಗೆ ಸಂದರ್ಭೋಚಿತ ವಸ್ತುನಿಷ್ಠತೆ ಇರಬೇಕು. ಇವೆರೆಡರ ಸಮತೋಲನ ಆತ್ಮಚರಿತ್ರೆಗೆ ಗೌರವವನ್ನು ದೊರಕಿಸುತ್ತದೆ. ಸಾಹಿತ್ಯಕ ಭಾಷೆ, ಒಳ್ಳೆಯ ನಿರೂಪಣೆ ಕೂಡಿದಾಗ ಅಂಥ ಆತ್ಮಕತೆ ಉತ್ತಮ ಸಾಹಿತ್ಯವೂ, ಇತಿಹಾಸವೂ, ಆಗುವುದು. ವ್ಯಕ್ತಿಯ ಬದುಕು ಅವನ ಆದರ್ಶ ನಂಬಿಕೆ. ಮುಚ್ಚುಮರೆಯಿಲ್ಲದೆ ಪ್ರಾಮಾಣಿಕ ಅಭಿವ್ಯಕ್ತಿಯು ಇತರರಿಗೂ ಮಾದರಿಯಾಗಬೇಕು.[೨]

ಈ ಲಕ್ಷಣಗಳು ಆತ್ಮಚರಿತ್ರೆಯ ಸ್ವರೂಪವನ್ನು ಹೋಲುವಂತಿದ್ದರೂ ಕೂಡಾ ಮಧುರಚೆನ್ನರ ಆತ್ಮಚರಿತ್ರೆಯು ಪೂರ್ವಸೂರಿಗಳ ಪೂರ್ವಪರಿಗೆ ಪೂರಕವಾಗಿ ನಿಲ್ಲುವಲ್ಲಿಯೆ ಹೊರತು ಈ ಲಕ್ಷಣಗಳೆ ಆತ್ಮಚರಿತ್ರೆಗೆ ಅನ್ವಯಿಸಲಾರವು. ಏಕೆಂದರೆ ಸಾಮಾನ್ಯ ಸ್ವರೂಪದಲ್ಲಿ ಸ್ವಪ್ರತಿಷ್ಠೆಯನ್ನು, ಸಾಧನ ಸಿದ್ಧಿಶಿಖರಗಳನ್ನು ಹೇಳಿಕೊಳ್ಳುವುದು ಹೊರತು ಬೀಳುಗಳನ್ನಲ್ಲ ವ್ಯಕ್ತಿಕೇಂದ್ರಿತ ಮತ್ತು ಬಾಹ್ಯ ತಳಮಳಗಳನ್ನು ಕುರಿತು ಹೇಳುವುದಾಗಿದೆ.

ಆದರೆ ಮಧುರಚೆನ್ನರ ಆತ್ಮಚರಿತ್ರೆಯು ಆಧ್ಯಾತ್ಮ ಕೇಂದ್ರಿತ ವ್ಯಕ್ತಿ ಮತ್ತು ಲೌಕಿಕ ಅಲೌಕಿಕದ ನಡುವಿನ ಪ್ರಪಂಚವನ್ನು ಕುರಿತು ಹೇಳುವುದಾಗಿದೆ. ಮಧುರಚೆನ್ನರ ಆತ್ಮಶೋಧದ ವೈಶಿಷ್ಟ್ಯಗಳಾದ "ಜೀವನ ಚರಿತ್ರೆಯಂತೆ ಒಬ್ಬ ಲೇಖಕನಿಂದ ಬರೆಯಲ್ಪಟ್ಟ, ಹುಟ್ಟು, ಯೌವ್ವನ, ಗೃಹಸ್ಥ, ಜೀವನ ಮೊದಲಾದವುಗಳ ಕ್ರಮಬದ್ಧ ಜೀವನ ನಿರೂಪಣೆ ವ್ಯಕ್ತಿ ತನ್ನ ಚರಿತ್ರೆಯನ್ನು ತಾನೇ ಬರೆದ ನೇರವಾದ ವೃತ್ತಾಂತದಲ್ಲಿ ಒಂದು ರೀತಿಯಿಂದ ಇವೆರಡರ ಮಿಶ್ರಣದಂತೆ ಇಲ್ಲಿಯ ತಂತ್ರವಿರುತ್ತದೆ.ಕೃತಿಯ ವಸ್ತು ಸ್ವತಃ ಲೇಖಕನೇ ಆಗಿದ್ದರೂ ಅವನಿಗೆ ಸಂಬಂಧಿಸಿದ ಹೆಸರು ಸಾಂಕೇತಿಕ ರೂಪವನ್ನು ತಳೆದಿರುತ್ತವೆ. ಬಾಹ್ಯ ಜೀವನದ ಚಿತ್ರಣಕ್ಕಿಂತ ಆಂತರಿಕ ವಿಕಾಸಕ್ಕೆ ಇಲ್ಲಿ ವಿಶೇಷ ಗಮನ ಕೊಡಲಾಗಿದೆ. ಲೇಖಕನು ತನ್ನಿಂದ ತಾನು ಬೇರ್ಪಡಿಸಿ ಸಾಕ್ಷಿಪ್ರಜ್ಞೆಯಿಂದ ತನ್ನ ಜೀವನದ ಏರುಪೇರುಗಳನ್ನು ಗಮನಿಸುತ್ತಾ ಹೋಗುತ್ತಾನೆ. ತನ್ನ ಎಲ್ಲಾ ಸಾಧನೆಗಳನ್ನು ರೂಪಕದ ಪಾಕದಲ್ಲಿ ಭಟ್ಟಿ ಇಳಿಸುವ ಪ್ರಯತ್ನ ಇಲ್ಲಿ ನಡೆಯುತ್ತದೆ. ಅಷ್ಟಾಗಿಯೂ ಒಮ್ಮೊಮ್ಮೆ ಬರವಣಿಗೆಯ ಆತ್ಮಕಥನದ ತಂತ್ರಕ್ಕೆ ಲೇಖಕನಿಗೆ ಅರಿಯದಂತೆ ಹೊರಳುವ ಸಂಭವವಿಲ್ಲದಿಲ್ಲ. ಆದರೆ ಅದು ಇಲ್ಲಿ ನಿರ್ದಿಷ್ಟವಾಗಿ ಉಳಿಯುವುದಿಲ್ಲ. ಇಲ್ಲಿಯ ನಾಯಕ ಕಾದಂಬರಿಯ ನಾಯಕನಂತೆ ಕಾಣುತ್ತಾನೆ. ಕನ್ನಡದಲ್ಲಿ ಈ ಬಗೆಯ ಕೃತಿಗಳು ಬಂದಿಲ್ಲ . ಗೋಕಾಕರ ಚೆಲುವಿನ ನಿಲುವು, ಕೆಲಮಟ್ಟಿಗೆ ಮಧುರಚೆನ್ನರ ಕೃತಿಗಳನ್ನು ಹೋಲುತ್ತದೆಯಾದರೂ, ಅವರ ಉದ್ದೇಶ ಭಿನ್ನವಾಗಿದೆ. ಜಿ.ಪಿ. ರಾಜರತ್ನಂ ಅವರ ೧೦ ವರ್ಷದ ಕೆಲಮಟ್ಟಿಗೆ ಪೂರ್ವರಂಗದ ತಂತ್ರವನ್ನು ಹೋಲುತ್ತದೆಯಾದರೂ ಅಲ್ಲಿಯ ಕತೆ ಜೀವನ ಚರಿತ್ರೆಯಂಥದು. ಆದಕಾರಣದಿಂದ 'ಪೂರ್ವರಂಗ'ದಂತಹ ಕೃತಿಗಳು ಕನ್ನಡದಲ್ಲಿ ಇಲ್ಲವೆಂದೆ ಹೇಳಬೇಕು.[೩]

ದೇವರ ದರ್ಶನದ ಬಗೆಗೆ ಅವರಿಗಿರುವ ಉತ್ಕಟ ಹಂಬಲ, ವಾಸ್ತವದೃಷ್ಟಿ, ಪ್ರಾಮಾಣಿಕ ಹಾಗೂ ಅನುಭವ ಗಮ್ಯವಾದ ವಿಚಾರಗಳು. ಆಳವೂ ವಿಸ್ತಾರವೂ ಆದ ವ್ಯಾಸಂಗ. ಈ ಗ್ರಂಥಗಳಲ್ಲಿ ಹಾಸುಹೊಕ್ಕಾಗಿವೆ. ಆಧ್ಯಾತ್ಮಿಕ ವಿಷಯದಲ್ಲಿ ಆಸಕ್ತಿ ಉಳ್ಳವರಿಗೆ ದಾರಿ ತೀರುವಂಥವುಗಳಾಗಿವೆ.

ಈ ಕೃತಿಗಳು ಮಧುರಚೆನ್ನರು ತಮ್ಮ ಸಾಧನೆಗೆ ನೀಡಿದ ಹಲವಾರು ಮಹತ್ವದ ಗ್ರಂಥಗಳ ಸಾರವನ್ನು ಸಂಗ್ರಹಿಸಿದ್ದಾರೆ. ಜಿಜ್ಞಾಸುಗಳನ್ನು ತಣಿಸುವ ವ್ಯಾಸಂಗದ ಕ್ರಮವನ್ನು ಸೂಚಿಸುವ ಅಮೂಲ್ಯ ಜ್ಞಾನಮೌಲ್ಯನಿಧಿಯಾಗಿದೆ ಎಂದು ಹೇಳಬಹುದು. ಈ ಕಾರಣದಿಂದ ಮಧುರಚೆನ್ನರ ಕೃತಿಗಳು ಅಭ್ಯಾಸಯ ಕೃತಿಗಳಾಗಿವೆ. ಪೂರ್ವರಂಗ ಕಾಳರಾತ್ರಿ, ಬೆಳಗು, ಇವು ಹೊಸ ಸಾಹಿತ್ಯ ಬಗೆಗಳು ಎನಿಸಿದರೆ ಆತ್ಮಸಂಶೋಧನೆಯ ಸಾಮಾನ್ಯ ಆತ್ಮಕತೆಯಂತಿರದೆ, ತಾಂತ್ರಿಕ ಭಿನ್ನತೆಯಿಂದ ಕೂಡಿದೆ. ನಾಲ್ಕು ಗ್ರಂಥಗಳು ಒಂದೇ ವಸ್ತುವನ್ನು ಆಧರಿಸಿದ ಒಬ್ಬ ನಾಯಕನಿಗೆ ಸಂಬಂಧಿಸಿದ ಕೃತಿಗಳು. ಆದ್ದರಿಂದ ಅವುಗಳ ಕೇಂದ್ರಭಾವದಲ್ಲಿ ಒಂದು ಅಖಂಡತೆಯಿದೆ.

ತಾವು ನಡೆಸಿದ ಹೋರಾಟವನ್ನು ಅತ್ಯಂತ ವ್ಯಾಪಕವಾದ ವ್ಯಾಸಂಗ ಪರಿಚಯವನ್ನು, ಸಾಧನೆಯಲ್ಲಿ ಪಡೆದ ಆನಂದವನ್ನು ಶಾಂತಿಯನ್ನು ಗದ್ಯಗ್ರಂಥಗಳಲ್ಲಿ ಅವರಿಗೆ ಸೂಕ್ಷ್ಮವಾಗಿ ತೋರಿದ್ದರಿಂದ ಒಂದು ನೂತನ ತಂತ್ರವನ್ನು ಬಳಸಿಕೊಂಡು ಪೂರ್ವರಂಗ ಮೊದಲಾದ ಕೃತಿಗಳನ್ನು ಸೃಷ್ಟಿಸಿದ್ದಾರೆ. ಈ ಮೂಲಕ ಕನ್ನಡಕ್ಕೆ ಒಂದು ಹೊಸ ಬಗೆಯ ಸಾಹಿತ್ಯ ಪ್ರಕಾರವನ್ನು ಕೊಡುವುದರ ಮೂಲಕ ಅಪಾರವಾದ ಸಂಪತ್ತನ್ನು ಕನ್ನಡ ನಾಡಿಗೆ ನೀಡಿದ್ದಾರೆ. ಹೀಗೆ ಮಧುರಚೆನ್ನರು ವಿಶಿಷ್ಟವಾಗಿ ಕಾಣುವಹಾಗೆ ಆತ್ಮಚರಿತ್ರೆಯು ಕೂಡಾ ವಿಶಿಷ್ಟ ಎಂಬುದನ್ನು ನೋಡಬಹುದು.

ಮಧುರಚೆನ್ನರ ಆತ್ಮಕಥೆಯಾದ ೧. ಪೂರ್ವರಂಗ, ೨. ಕಾಳರಾತ್ರಿ, ೩. ಬೆಳಗು ಎಂಬ ಮೂರು ಕೃತಿಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿದ್ದೇನೆ. ಮತ್ತು ಸಾಂದರ್ಭಿಕವಾಗಿ 'ನನ್ನನಲ್ಲ' ಅತ್ಯಂತ ಉತ್ಕಟವಾಗಿ ಮತ್ತು ಉಜ್ವಲವಾಗಿ ಹರಳುಗೊಳಿಸಿ ಅಭಿವ್ಯಕ್ತಿಸಿದ್ದರೂ ಇದಕ್ಕೆ ಬರೆದ ವಿಮರ್ಶೆ ಎಂಬಂತೆ ಇರುವ ಅವರ ಆತ್ಮಶೋಧದ ಎಂಬ ಆತ್ಮಕಥನವು ಅನುಭಾವ ಜೀವನದ ಹುಡುಕಾಟಗಳನ್ನು ತಲ್ಲಣಗಳನ್ನು ಲೋಕ ಜೀವನದೊಂದಿಗೆ ತಮ್ಮ ಅನುಭಾವಿ ವ್ಯಕ್ತಿತ್ವವು ಮುಖಾಮುಖಿಯಾದ ಸಂದರ್ಭದ ಸಂಘರ್ಷಗಳನ್ನು, ತಮ್ಮ ಅಂತರನುಭವಗಳು ಜಗತ್ತಿನ ವಿವಿಧ ದೇಶಗಳ ಅನುಭಾವಿಗಳ ಅವಸ್ಥೆಗಳೊಂದಿಗೆ ತಾಳೆಯಾಗುವ ವಿಸ್ಮಯಗಳನ್ನು ವಿಸ್ತಾರವಾದ ಅನುಭಾವ ಸಾಹಿತ್ಯದ ಮೂಲಕ ಪ್ರಮಾಣೀಕರಿಸಿಕೊಳ್ಳುತ್ತಾ ತಮ್ಮ ಶ್ರದ್ಧೆಯನ್ನು ಗಟ್ಟಿಗೊಳಿಸುತ್ತಾ, ಮುನ್ನಡೆದ ವಿವರಗಳನ್ನು ಪದರು ಪದರುಗಳಾಗಿ ಚಿತ್ರಿಸುತ್ತದೆ. ಅಹಂಕಾರ ನಿರಸನದ ನೆಲೆಯಲ್ಲಿ ತನ್ನನ್ನು ನಿಲ್ಲಿಸಿಕೊಂಡು ಮಾತನಾಡುವ ಕ್ರಮದ ಮೂಲಕ ಸಾಗುವ ಮೂರು ಅಧ್ಯಾಯಗಳನ್ನು ಕುರಿತು (ಅದರಲ್ಲಿ ಬರುವ ನಿರ್ಧಾರ) ಅಧ್ಯಯನ ಮಾಡುತ್ತೇನೆ.

ಸ್ವರೂಪವನ್ನು ಹೇಳುವುದಾದರೆ (ಮೊದಲಿಗೆ) ಒಟ್ಟು ೯ ಅಧ್ಯಾಯಗಳನ್ನಾಗಿ ಮಾಡಿಕೊಂಡಿದ್ದು, ಮೊದಲಿನ ಅಧ್ಯಾಯದಲ್ಲಿ ಮಧುರಚೆನ್ನರನ್ನು ಅಧ್ಯಯನ ಮಾಡಲು ಉದ್ದೇಶಿಸುವ ಕಾರಣ ಮತ್ತು ಅವರನ್ನು ನವೋದಯ ಸಾಹಿತ್ಯದ ಸಂದರ್ಭದಲ್ಲಿ ಗುರುತಿಸುವ ಬಗೆ ಹೇಗೆ? ನವೋದಯ ಲೇಖಕರಿಗಿಂತ

ಹೇಗೆ ಭಿನ್ನವಾಗಿದ್ದಾರೆ? ಇವರ ಕೃತಿಗಳು ಕೂಡಾ ಯಾವ ರೀತಿಯಾಗಿ ಭಿನ್ನ ಆತ್ಮಕಥನದ ವಿಶಿಷ್ಟತೆ ಪಡೆದಿವೆ? ಎಂಬ ಪ್ರಶ್ನೆಗಳ ಮೂಲಕ ಮಧುರಚೆನ್ನರ ಆತ್ಮಕಥೆಯ ಪ್ರಸ್ತುತತೆ ಏನಿದೆ ಎಂಬ ವಿಷಯವನ್ನು ಚರ್ಚಿಸಲು ಉದ್ದೇಶಿಸಿದ್ದೇನೆ.

ಎರಡನೆಯ ಅಧ್ಯಾಯದಲ್ಲಿ ಮಧುರಚೆನ್ನ ಸಾಹಿತ್ಯದ ಮೇಲೆ ಇತ್ತೀಚಿನವರೆಗೆ ಕೈಗೊಂಡ ಅಧ್ಯಯನಗಳು ಯಾವುವು? ಆ ಲೇಖಕರು ಯಾವ ದೃಷ್ಟಿಕೋನದಿಂದ ನೋಡಿದ್ದಾರೆ? ಎಂಬ ತಾತ್ವಿಕ ಸಮೀಕ್ಷೆಯನ್ನು ಮಾಡಿದ್ದೇನೆ. ಮೂರನೆ ಅಧ್ಯಾಯದಲ್ಲಿ ಕೃತಿಯ ರಚನೆಗೆ ಕಾರಣವಾದ ಸಾಂಸ್ಕೃತಿಕ ಹಿನ್ನಲೆಗಳನ್ನು ಕುರಿತು ಚರ್ಚಿಸಿದ್ದೇನೆ. ಅವರ ಗೆಳೆತನದ ವಿಶೇಷತೆ, ಪ್ರಭಾವ ಬೀರಿದ, ಅನುಭಾವಿಗಳ ಕೃತಿಗಳು ನವೋದಯದ ಸಂದರ್ಭ ಅವರಿಗಿದ್ದ ಒತ್ತಡಗಳು ಹೀಗೆ ಮುಂತಾದ ವಿಷಯಗಳನ್ನು ಎರಡನೆಯ ಅಧ್ಯಾಯದಲ್ಲಿ ಚರ್ಚಿಸಿದ್ದೇನೆ.

ನಾಲ್ಕನೆಯ ಅಧ್ಯಾಯದಲ್ಲಿ ಆತ್ಮಶೋಧದ ಕೃತಿಗಳಾದ ಪೂರ್ವರಂಗ, ಕಾಳರಾತ್ರಿ, ಬೆಳಗು ಕೃತಿಗಳನ್ನು ಕುರಿತು ಸಮೀಕ್ಷೆ ಮಾಡಿದ್ದೇನೆ. ಈ ಮೂರೂ ಕೃತಿಗಳನ್ನು ಉಪಶೀರ್ಷಿಕೆಗಳನ್ನಾಗಿ ಮಾಡಿಕೊಂಡಿದ್ದೇನೆ.

ಕಾಳರಾತ್ರಿಯಲ್ಲಿ ಉಂಟಾಗುವ ಅನುಭವಗಳು ಮತ್ತು ಸಮಾಜದೊಡನೆ ಮುಖಾಮುಖಿಯಾಗುವುದು. ಸಂಸಾರದೊಡನೆ ಮುಖಾಮುಖಿಯಾಗುವುದು ಕೃತಿ ಹಾಗೂ ಶಾಸ್ತ್ರಗಳೊಡನೆ ಮುಖಾಮುಖಿಯಾಗುವುದು. ಸ್ವಪ್ನ, ದೃಷ್ಟಾಂತಗಳೊಡನೆ ಮುಖಾಮುಖಿಯಾಗುವುದು. ಹೀಗೆ ಪಡೆದ ಅನುಭವಗಳನ್ನು ಕುರಿತು ಚರ್ಚಿಸಿದ್ದೇನೆ.

ಐದನೆ ಅಧ್ಯಾಯದಲ್ಲಿ ಒಟ್ಟಾರೆ ಈ ಎಲ್ಲಾ (ಮೂರು) ಕೃತಿಗಳ ಸಂದೇಶ ಮತ್ತು ಮಧುರಚೆನ್ನರ ನಿಲುವುಗಳ ಬಗ್ಗೆ ತಾತ್ವಿಕ ಸಮೀಕ್ಷೆಯನ್ನು ಕೈಗೊಂಡಿರುತ್ತೇನೆ.

ಆರನೆ ಅಧ್ಯಾಯದಲ್ಲಿ ಮೇಲಿನ ಎಲ್ಲಾ ಅಧ್ಯಯನ ಉದ್ದೇಶ, ಮಹತ್ವ ಪ್ರಬಂಧದಲ್ಲಿ ಮಂಡಿಸಿರುವ ವಿಚಾರಗಳು ಸಮಂಜಸವಾಗಿ ಕ್ರೂಢಿಕೃತವಾಗಿರುವುದರ ಬಗ್ಗೆ ಚರ್ಚಿಸಿದ್ದೇನೆ. ಇದು ವ್ಯಾಪ್ತಿ ಎಂದು ಹೇಳಬಹುದು.

ನವೋದಯದ ಸಂದರ್ಭದಲ್ಲಿ ಮಧುರಚೆನ್ನರ ಪ್ರಸ್ತುತತೆ ಮತ್ತು ಆತ್ಮಕಥೆಯ ಅಧ್ಯಯನ ಮಹತ್ವ ಯಾವ ರೀತಿಯಾಗಿ ಪಡೆದುಕೊಂಡಿದೆ ಎಂಬುದನ್ನು ಕುರಿತು ನೋಡಬಹುದು. "ದ.ರಾ. ಬೇಂದ್ರೆಯವರು ಕಾಳರಾತ್ರಿಗೆ ಮುನ್ನುಡಿ ಬರೆಯುತ್ತ; "ಇಂಥ ಪುಸ್ತಕಗಳ ಪ್ರಯೋಜನವೇನು?' ಎಂದು ಕೇಳುವ ಜನರಿದ್ದಾರೆ. ಕನ್ನಡ ಅಭಿನವ ಸಾಹಿತ್ಯದಲ್ಲಿ ಈ ಬಗೆಯ ಬರವಣಿಗೆಯೂ ಒಂದು ಭೂಷಣವಾಗಿದೆ. ಇದು ಸತ್ಯ ಸಾಹಿತ್ಯ. 'ಕಾಳರಾತ್ರಿಯ ಶೈಲಿಯಲ್ಲಿ ಒಂದು ಪ್ರಭಾವವಿದೆ, ವೈಭವ ವರ್ಣನೆಗಳಲ್ಲಿ ಸೊಗಸಿದೆ. ವಿಚಾರಗಳನ್ನು

ಸಂಕ್ಷೇಪವಾಗಿಯೂ ವಿಸ್ತಾರವಾಗಿಯೂ ಮಂಡಿಸುವಲ್ಲಿ ಜಾಣ್ಮೆಯಿದೆ, ಜೋಕೆಯಿದೆ. ಎಲ್ಲೆಲ್ಲಿಯೂ ಪ್ರಾಮಾಣಿಕತೆಯು ಹೊರಸೂಸುತ್ತದೆ. ನಟನೆಯಿಲ್ಲ. ಹಗರಣವಿಲ್ಲ, ಇಲ್ಲಿಯ ವಾಸ್ತವತೆಯಲ್ಲಿ ಪ್ರಸನ್ನ ಗಂಭೀರತೆಯು ಅಲ್ಲಲ್ಲಿ ತುಂಬಿಕೊಂಡಿದೆ. ಸಾಹಿತ್ಯ ದೃಷ್ಟಿಯಿಂದ ಕೂಡಾ ಇರಬೇಕಾದ ಪುಸ್ತಕವು.

ಬರೆದವರೇನೋ ಮಹಾ ಅನುಭಾವಿಗಳಲ್ಲ ಎಂದು ದರ್ಪದಿಂದ ದಿಟ್ಟಿಸಿ ಕೇಳಬಹುದು. ಅಂಥವರ ಶಿಶು ಎಂದು ಬರೆದವರೇ ಹೇಳಿದ್ದಾರೆ. ಇದು ವಿನಯವಲ್ಲ : ಸತ್ಯ, ಅಂತೂ ಮೇಲಿನ ಜಾತಿಗೆ ಸೇರಿದವರು ಎನ್ನಿ-ಎಂದು ಕೆಣಕಿ ಕೇಳಬಹುದು. ಮೇಲು-ಕೀಳು ಅದು ಜನರು ಕೊಡಬೇಕಾದ ಬೆಲೆ. ಅವರು ತಮ್ಮ ಜೀವನದ ನೀತಿಯನ್ನು ಜಗದ ಮುಂದೆ ಇಟ್ಟಿದ್ದಾರೆ. ಸಂತೆಯಲ್ಲಿ ಮನೆಯನ್ನು ಕಟ್ಟಿ ಶಬ್ದಕ್ಕೆ ಹೆದರುವರು 'ಮಧುರಚೆನ್ನ'ರಲ್ಲ. ಅನುಭವವಿಲ್ಲದೆ ಶಾಸ್ತ್ರವು ಉಪಯೋಗಕ್ಕೆ ಬಾರದು ಎಂದು ಅವರೆ ಸಾಗುತ್ತಿರುವಾಗ ಅವರ ಈ ಗ್ರಂಥದಿಂದ ಕ್ರಾಂತಿಯಾದಿತೆಂದು ನಂಬಿಕೂತಿಲ್ಲ. ವಸಂತ ಪ್ರಾರಂಭವಾದ ಕೂಡಲೆ ಎಲ್ಲು ಕೋಗಿಲೆಗಳೇನು ಕೂಡಿಯೇ ಕೂಗುವುದಿಲ್ಲ. ಎಲ್ಲಾ ಗಿಡಗಳು ಒಮ್ಮೆಲೆ ಚಿಗಿಯುವುದಿಲ್ಲ. ಕರ್ನಾಟಕದೊಳಗಿನ ಆಧ್ಯಾತ್ಮ ವಸಂತ ಸಮಯವನ್ನು ಸೂಚಿಸುವ ಕುಕಿಲ ಚಿಗುರು ಇವರ ಬರಹ. ಬೇರೆ ಕೋಗಿಲೆಗಳಿಗೆ ಕಂಠ ಬರಬಹುದು. ಮಾಮರಗಳಿಗೆ ಚಿಗುರೊಡೆಯಬಹುದು. ಈ ಸೂಚಕ ಧ್ವನಿಯಿಂದ.[೩]

ಹೀಗೆ ಅದರ ಮಹತ್ವವನ್ನು ವಿಮರ್ಶಕರಿಗೆ ವಾಚಕರಿಗೆ ಎದಿರೇಟು ನೀಡುವ ಹಾಗೆ ನಿಷ್ಕರ್ಷೆಯಲ್ಲಿ ಹೇಳಿರುವ ಹಾಗೆ ಸೂಚಿಸುತ್ತದೆ.

"ಮಧುರ ಚೆನ್ನರು ಆಧುನೀಕತೆಯ ಸಂದರ್ಭದಲ್ಲಿ ಎಷ್ಟು ಪ್ರಸ್ತುತ ಎಂದು ಪ್ರಶ್ನೆ ಹಾಕಿಕೊಂಡಾಗ ಅವರ ಅರ್ಧಶತಮಾನದ ಬದುಕು ಸಾಧನೆಯನ್ನು ಗಮನಿಸಿದರೆ ಮೂರು ಅಂಶಗಳು ಮುಖ್ಯವಾಗಿ ಕಂಡುಬರುತ್ತವೆ ೧. ಬದುಕಿನಲ್ಲಿ ಪ್ರೀತಿ ೨. ಅಧ್ಯಯನ ಸಾಧನೆ, ೩. ಅಸ್ಮಿತೆ.

ಮಧುರಚೆನ್ನರು ತುಂಬು ಸಂಸಾರದ ಮನೆಯಲ್ಲಿ ಇರುಸು ಮುರುಸು, ಕಾಯಿಲೆಯ ಬಾಧೆ ಮುಂತಾದವುಗಳು ಇದ್ದಿರೂ ಪ್ರೀತಿಯಂಥಾ ವಸ್ತು ಭವದಲ್ಲಿ ಕಾಣೆ ಎಂದು ಬದುಕನ್ನು ಪ್ರೀತಿಸಿದರು ಎಷ್ಟು ಎಡರುತೊಡರುಗಳಿದ್ದರೂ ರಾಮಾಹಳ್ಳದ ತೋಟದಲ್ಲಿ, ಮಾವಿನ ಮರದ ನೆರಳಲ್ಲಿ ಅಧ್ಯಯನ ಸಾಧನೆಯಿಂದ ತಮ್ಮನ್ನು ತಾವು ಕಂಡುಕೊಂಡವರು ಜಂಜಾಟದಿಂದ ಬಿಡಿಸಿಕೊಂಡವರು. ತಮ್ಮ ಸಂಸ್ಕೃತಿಕ ಕ್ರಿಯಾಶೀಲತೆಯಿಂದ ಹಲಸಂಗಿ ಎಂಬ ಗ್ರಾಮಕ್ಕೆ ಅಸ್ಮಿತೆಯನ್ನು ತಂದುಕೊಟ್ಟವರು. ಅಲ್ಲೆ ಇದ್ದುಕೊಂಡು ಇಪ್ಪತ್ತು ಭಾಷೆಗಳ ಅಧ್ಯಯನದಿಂದ ಅಪರೂಪದ ಶೋಧನೆಗಳಿಗೆ ಕೈಹಾಕಿದವರು. ಜಾಗತೀಕರಣದ ಆರಂಭದಲ್ಲಿ ಮಧುರ ಚೆನ್ನರ ಬದುಕಿನ ಈ ಮೂರು ಅಂಶಗಳು ಇಂದಿಗೂ ಮುಖ್ಯವಾಗುತ್ತವೆ. ಬಸವಣ್ಣನವರು ಜನಿವಾರವನ್ನು ತೆಗೆದುಹಾಕಿದರೆ ಮಧುರಚೆನ್ನರು ಶಿವಪಾರವನ್ನು ದೂರಸರಿಸುತ್ತಾರೆ. ಅವರು ಪ್ರದರ್ಶನಕ್ಕೆ ಹೊಗುವುದಿಲ್ಲ. ಇದು ಇಂದಿಗೆ ಅಗತ್ಯವಾಗಿ ಬೇಕಾಗಿರುವ ಧರ್ಮನಿರಪೇಕ್ಷಿತ ದೃಷ್ಟಿಯನ್ನು ಒತ್ತಿಹೇಳುತ್ತದೆ. ಸಾಮಾ

ಇಪ್ಪತ್ತೊಂದನೆ ಶತಮಾನದಲ್ಲಿದ್ದರು ನಮ್ಮಲ್ಲಿ ಧರ್ಮಯುದ್ಧಗಳು ಏನು ಕಡಿಮೆಯಾಗಿಲ್ಲ. ನಮ್ಮ ಸಂವಿಧಾನದಲ್ಲಿ ವೈಜ್ಞಾನಿಕ ಮನೋಭಾವವನ್ನು ಸೂಚಿಸಿದ್ದರೂ ಕಳೆದ ೧೦ ವರ್ಷಗಳಲ್ಲಿ ಜಗದ್ಗುರುಗಳ ಉದ್ಭವ ಕಡಿಮೆಯಾಗಿಲ್ಲ. ಧರ್ಮದ ಹೆಸರಿನಲ್ಲಿ ಇಂದು ಬದುಕು ಜರ್ಜರಿತವಾಗಿದೆ. ಸ್ವಾರ್ಥ ಮತ್ತು ಹಿಂಸೆ ನಮ್ಮನ್ನಾಳುತ್ತವೆ ಪ್ರೀತಿಯ ಕೊರತೆಯೆ ವ್ಯಕ್ತಿರೂಪದ, ಸಮುದಾಯ ರೂಪದ, ರಾಷ್ಟ್ರ ರೂಪದ ಹಿಂಸೆಗೆ ಬುನಾದಿಯಾಗಿದೆ. ಮಧುರಚೆನ್ನರ ಜೀವನ ಸಂದೇಶವಾದ 'ಪ್ರೀತಿ' ಎಷ್ಟುಮುಖ್ಯ ಎಂಬುದನ್ನು ನಾವು ಅರಿತುಕೊಳ್ಳಬೇಕು ಆ ಪ್ರೀತಿಸಂದೇಶ "ಕೆಲವು ಬೀಜಗಳನ್ನು ಹಿಂದೆ ಉಳಿಸಿ ಹೋಗುವ ಆಸೆಯುಳ್ಳ ಹೂವು ನನ್ನದು."[೪]

ಟಿಪ್ಪಣಿಗಳು

೧. ಕನ್ನಡ ಸಾಹಿತ್ಯದಲ್ಲಿ ಆತ್ಮಚರಿತ್ರೆ, ಶರಣಮ್ಮ ಅ. ಗೋರೆಬಾಳ, ಪು.೪೦

೨. ಮಧುರಚೆನ್ನರ ಜೀವನ ಹಾಗೂ ಕೃತಿ ಸಮೀಕ್ಷೆ, ಗುರುಲಿಂಗಕಾಪಸೆ, ಪು.೨೩೮, ೨೩೯

೩. ಕಾಳರಾತ್ರಿ ಮುನ್ನುಡಿ ಬೇಂದ್ರೆ, ಆತ್ಮಶೋಧ, ಗುರುಲಿಂಗಕಾಪಸೆ, ಪು.೨೨೬

೪. ಮಧುರಚೆನ್ನರ ಬದುಕುಬರಹ ಚಿಂತನೆ, ಗುರುಲಿಂಗ ಕಾಪಸೆ, ಪು.೮೨

ಅಧ್ಯಾಯ ೨

ಮಧುರಚೆನ್ನರ ಸಾಹಿತ್ಯವನ್ನು ಕುರಿತ ಅಧ್ಯಯನಗಳ ತಾತ್ವಿಕ ಸಮೀಕ್ಷೆ

ಮಧುರಚೆನ್ನರ ಸಾಹಿತ್ಯದ ಮಹತ್ವಗಳನ್ನು ಕುರಿತು ಚರ್ಚಿಸುವ ಪರಿಪಾಠ ಮೊದಲಿನಿಂದಲೂ ಬೆಳೆದುಬಂದಿದೆ. ಮಧುರಚೆನ್ನರನ್ನು ನವೋದಯ ಸಾಹಿತ್ಯದ ಸಂದರ್ಭದಲ್ಲಿ ಒಬ್ಬ ಅನನ್ಯ ಕವಿಸಾಧಕ ಎಂದು ಪರಿಗಣಿಸುವ ಚರ್ಚೆಗಳಿವೆ.

ಚನ್ನವೀರ ಕಣವಿಯವರ "ಮಧುರಚೆನ್ನರ ಅನುಭಾವ ಕಾವ್ಯ" ಎಂಬ ಲೇಖನದಲ್ಲಿ ಮಧುರಚೆನ್ನರನ್ನು ಮತ್ತು ಅವರ ಸಾಹಿತ್ಯದ ಅಭಿವ್ಯಕ್ತಿ ವಿಧಾನವನ್ನು, ತಾತ್ವಿಕತೆಯನ್ನು ಗುರುತಿಸಿದ್ದಾರೆ.

ಮಧುರಚೆನ್ನರ ಕಾವ್ಯದ ಘಟ್ಟಗಳಾದ ೧. "ಛಂದೋಬದ್ಧ ವಾಣಿಯೇ ಕವಿತೆಯೆಂದು ಭಾವಿಸಿಬರೆದದ್ದು, ೨. ಭಾವವೆ ಕವಿತೆಯ ಜೀವನವೆಂದು ಅರಿತು ರಚನೆ ಮಾಡಿದ್ದು, ೩. ಅನುಭಾವ ಕಾವ್ಯಕ್ಕೆ ತನ್ನೆಲ್ಲಾ ಕಾವ್ಯ ಶಕ್ತಿಯನ್ನು ಮೀಸಲಿಟ್ಟಿದ್ದು."[೧]

ಮೊದಲಿಗೆ ಚನ್ನವೀರಕಣವಿಯವರು ಮಧುರಚೆನ್ನರು ಕಾವ್ಯದ ವಿಷಯದಲ್ಲಿ ಮಾಡಿದ ಸಂಶೋಧನೆಗಳನ್ನು ಕುರಿತು ಹೇಳುತ್ತಿದ್ದಾರೆ. ಮೊದಲಿಗೆ ಛಂದೋಬದ್ಧವಾಗಿಯೇ ಕವಿತೆಯೆಂದು ನನಗೆ ಕಲ್ಪನೆಯಾಯಿತು. ಅದು ಸುಮಾರು ಕ್ರಿಸ್ತಾಬ್ದ ೧೯೧೮ನೆ ವರ್ಷ. ಆಗ ಧಾರವಾಡದಲ್ಲಿ ಪ್ರಭಾತವೆಂಬ ಕವಿತಾ ಮಾಸ ಪತ್ರಿಕೆ ಹೊರಡಿಸುತ್ತಿದ್ದ ಪ್ರಭಾತಕಾಲ. ಆಗ ನಾನು ಶಾಲೆಯಲ್ಲಿ ಕನ್ನಡದ ಐದನೆಯತ್, ಆರನೆಯತ್, ಅಭ್ಯಾಸ ಮಾಡುತ್ತಿದ್ದೆನು. ಪ್ರಾಥಮಿಕ ಶಿಕ್ಷಣದ ಕೊನೆಯ ಪರೀಕ್ಷೆಗೆಂದು ತುಸುಮಟ್ಟಿಗೆ ಛಂದಸ್ಸಿನ ನಿಯಮಗಳ ಜ್ಞಾನವನ್ನು ಮಾಡಿಕೊಡುವುದು ಎಂದಿನಿಂದಲೂ ನಡೆದು ಬಂದಿದೆಯಷ್ಟೇ ಆ ಮೇರೆಗೆ ಮಾತ್ರೆ ಮತ್ತು ಗಣಗಳ ನಿಯಮಗಳಿಂದ ಕೂಡಿದ ಸಾಮಾನ್ಯ ಪದ್ಯಗಳನ್ನು ರಚಿಸಲಿಕ್ಕೆ ಆರಂಭ ಮಾಡಿದನು. ಅಷ್ಟರಲ್ಲಿ ಅದೇ ಪ್ರಭಾತದಲ್ಲಿ ಬಂದ ಅಣ್ಣ. ಶ್ರೀ ಅಂಬಿಕಾತನಯದತ್ತರ ತುತ್ತೂರಿ ಎಂಬ ಕವಿತೆಯ ಪಾಚನ ಹಾಗೂ ನನ್ನೊಬ್ಬ ವಿದ್ಯಾಗುರು ಸ್ವರೂಪರಾದ ಹಿರಿಯರು ತಮ್ಮ ಮನೆಯ ಹುಡುಗನಿಗೆ ಹೇಳಿಕೊಡುತ್ತಿದ್ದ, ಶಾಕುಂತಲ ನಾಟಕದ ಶ್ರವಣ ಹಾಗೂ ಅದೇ ಹೊಸದಾಗಿ ಹೊರಬಿದ್ದ ವಚನಶಾಸ್ತ್ರದ ಪ್ರಥಮ ಸಂಪುಟದ ಅಭ್ಯಾಸ ಮೊದಲಾದವುಗಳಿಂದ ಭಾವವೇ ಕವಿತೆಯ ಜೀವವೆಂದು ನನಗೆ ಮನವರಿಕೆಯಾಯಿತು. ಇದು ಸುಮಾರು ಕ್ರಿಸ್ತಾಬ್ದದ ೧೯೨೨ರ ಕಾಲ ಆಗ ನನ್ನ ಕವಿತೆಗಳಲ್ಲಿಯೂ ಒಂದು ಬದಲಾವಣೆ ಬಂದಿತು. ನನ್ನ ನೀನಾರೆ ನರ್ತಕಿ ಎಂಬ ಸೃಷ್ಟಿ ಸೌಂದರ್ಯವನ್ನು ವರ್ಣಿಸುವ ಕವಿತೆಯೂ, ನಿದ್ರೆಯಲ್ಲಿ ಮಗನನ್ನು ಅಗಲಿದ ಸುನೀತಿ ದೇವಿಯ ಮನೋಭಾವವಗಳನ್ನು ಬಣ್ಣಿಸುವ ಧ್ರುವ ಕವಿತೆಯೂ ಇದಕ್ಕೆ ಉದಾಹರಣೆಗಳು.

ಆಮೇಲೆ, ಕವೀಂದ್ರ ರವೀಂದ್ರರ ಹಾಗೂ ಅನುಭಾವ ಪ.ಈ.ಯವರ ಆಧ್ಯಾತ್ಮಿಕ ಕವಿತೆಗಳನ್ನು ಶ್ರೀ ಅರವಿಂದರ ಆಧ್ಯಾತ್ಮವನ್ನು ಆದರ್ಶವಾಗಟ್ಟುಕೊಂಡು ಅಣ್ಣ ಶ್ರೀ ಜೋಶ್ಯರವರ ಪಿಠಿತಸದಲ್ಲಿ ನವಕವಿತೆ

ರಚನೆ ನಡೆಸಿದ ಗೆಳೆಯರ ಗುಂಪಿನೊಡನೆ ಸ್ನೇಹವಾದಾಗಿನಿಂದ ಕವಿತಾ ಮಹಾಸಾಗರದ ಅಗಾಧವಾದ ಆಳವೊಂದನ್ನು ಕಂಡು ಬೆಪ್ಪಾಗಿ ನಿಂತೆನು ಅದು ಕ್ರಿಸ್ತಾಬ್ದದ ೧೯೨೪-೨೫ರ ಕಾಲ. ಆಗ ಇಂಥ ಕವಿತೆಗಳನ್ನು ತಿಳಿದುಕೊಳ್ಳುವ ಭಾಗ್ಯವಾದರೂ ನನಗೀ ಜನ್ಮದಲ್ಲಿ ಲಭಿಸಿದರೆ ನಾನು ಧನ್ಯನು ಎಂದು ಪರಮಾತ್ಮನಲ್ಲಿ ಮೊರೆ ಇಡುತ್ತಿದ್ದೆನು. ಆ ಹೊಸ ಕವಿತೆಗಳ ಸ್ವರೂಪ ಜ್ಞಾನವು ನನ್ನ ಬಾಹ್ಯಬುದ್ಧಿಗೆ ಎಷ್ಟೂ ಗೊತ್ತಾಗದಿದ್ದರೂ, ಸಹವಾಸದ ಫಲವು ಗೊತ್ತಾಗದಂತೆ ಒಳಗೆ ಪರಿಣಾಮ ಮಾಡುವುದೆಂದು ಹೇಳುವಂತೆ ನಾನಾಗ, ಮೌನ ಕೋಕಿಲೆಗೆ ಮೊದಲಾದ ಹೊಸ ಜಾತಿಯ ಕವಿತೆಗಳನ್ನು ಅರಿತು ಬರೆಯದೆ, ಅರೆನಿದ್ದೆಯಲ್ಲಿ ಉಣ್ಣುವ ಮಕ್ಕಳಂತೆ ಅರಿಯದೆಯೇ ಬರೆದೆನೆಂದು ಹೇಳಬಹುದು."[೨]

ಈ ಮೂರು ಘಟ್ಟಗಳ ಮೂಲಕ ಅನುಭಾವದ ಅಭಿವ್ಯಕ್ತಿಯನ್ನು ಮುಗ್ಧತೆ, ಅನುಭವದ ದುರಂತ, ಪುನರ್ಜನ್ಮ "ದರ್ಶನ ಕಾವ್ಯದ ಮೂರು ಘಟ್ಟಗಳೆಂದು ಗುರುತಿಸಬಹುದು.

ಕುರ್ತಕೋಟಿಯವರು : 'ಪೃಥ್ವಿಯಲ್ಲಿಯ ತಾತ್ವಿಕ ಅನುಭವ ಉಂಡ ಊಟದಷ್ಟು ನೈಜವಾಗಿದೆ, ವಾಸ್ತವವಾಗಿದೆ. ಭಾಷೆಗೆ ಪ್ರಾಣಶಕ್ತಿ, ಮಂತ್ರಶಕ್ತಿಗಳೆರಡು ಬರುವುದನ್ನು ಇಲ್ಲಿ ಕಾಣಬಹುದು' ಎಂದಿದ್ದಾರೆ."[೬]

"ಈ ಕವಿತೆಯ ಸಂದರ್ಭವನ್ನು ವಚನಕಾರರು ಕರೆದಿರುವ 'ಲಿಂಗವಿಕಳಾವಸ್ಥೆಗೆ' ಹೋಲಿಸಿರುವ ಎಚ್.ಎಸ್. ಶಿವಪ್ರಕಾಶರು 'ಪೃಥ್ವಿ' ಮತ್ತು ಮಲಗಿರುವ ತಾಯಿ ಶಬ್ದಗಳಲ್ಲಿ ಯೌಗಿಕ ಅರ್ಥಗಳು ಅಂತರ್ಗತವಾಗಿರುವುದನ್ನು ಸೂಚಿಸುತ್ತಾ, ತಾಯಿಗೆ ಪೃಥ್ವಿತತ್ವವನ್ನು, ಪೃಥ್ವಿಗೆ ತಾಯಿ ತತ್ವವನ್ನು ಆರೋಪಿಸಲಾಗಿದೆ ಎನ್ನುತ್ತಾರೆ. ಆದರೆ 'ಏಳಮ್ಮಾ ದಲ್ಲಿ' ಅಡಗಿರುವ ಏಳು ಶಬ್ದಕ್ಕೂ ಯೌಗಿಕ ಅರ್ಥವನ್ನು ಹುಡುಕುವುದು ಮಾತ್ರ ಅನ್ವಯ ಎನಿಸುತ್ತದೆ."[೩]

"ಸಿಡಿಲು ಕವಿತೆಯ ಕೇಂದ್ರ ಅನುಭವವನ್ನು ಕುರಿತು ಕುರ್ತಕೋಟಿಯವರು ಪರಮಾತ್ಮನ ಗುರುತು ಸಿಕ್ಕು ಮಾಯವಾಗಿ ಹೋದುದ್ದರ ಗುರುತು ಇಲ್ಲಿದೆ ಎಂದು ಹೇಳಿದ್ದಾರೆ."[೪] ಎಚ್.ಎಸ್. ಶಿವಪ್ರಕಾಶ್‌ರವರು ಜೀವಶಕ್ತಿಯ ಮೇಲು ಪಯಣದ ಹಾಗೆ ದೇವಶಕ್ತಿಯ ಕೆಳಪಯಣವು ಉತ್ಕಟ ಆನಂದದ ಒಂದು ಕ್ಷಣವನ್ನು ನೀಡಿ ಆ ಬಳಿಕ ಜೀವ ಜಗತ್ತುಗಳನ್ನು ತಬ್ಬಲಿ ಮಾಡುವುದು. 'ಸಿಡಿಲು' ಕವಿತೆಯ ಕೇಂದ್ರ ಅನುಭವ ಎಂದು ಹೇಳಿದ್ದಾರೆ.[೫] ಅದೇನೇ ಇದ್ದರೂ "ದೇವತಾಪೃಥ್ವಿ ಮಧುರಚೆನ್ನರ ಕೃತಿಸೆಲೆಯ ಶಿರೋರತ್ನ ಎಂಬ ಬೇಂದ್ರೆಯವರ ಮಾತಿಗೆ ಎರಡು ಮಾತಿಲ್ಲ."

"ಕಾವ್ಯ ನಿರ್ಮಾಣವನ್ನು ಬೇಂದ್ರೆಯವರು 'ಕರ್ಮಸುಕೌಶಲ್ಯಂ' ಎಂಬ ಅರ್ಥದಲ್ಲಿ ಕಾವ್ಯಯೋಗ ಎಂದು ಕರೆದಿದ್ದಾರೆ." ಆದರೆ ಮಧುರಚೆನ್ನರ ಕಾವ್ಯಯೋಗ ಸೃಷ್ಟಿಕ್ರಮಕ್ಕಿಂತ ನಿಗೂಢತೆ ಹಾಗೂ ಅನುಭವ ಪ್ರಕ್ರಿಯೆ ಮುಖ್ಯವಾಗುತ್ತದೆ."[೬]

ಎಚ್.ಎಸ್. ರಾಘವೇಂದ್ರರಾವ್ ಹೇಳುವ ಹಾಗೆ "ಬೇಂದ್ರೆ ಮಧುರಚೆನ್ನರು ಇಬ್ಬರೂ ಅರವಿಂದರ ಪ್ರಭಾವಕ್ಕೆ ಒಳಗಾಗಿದ್ದರೂ ಸ್ವಂತದ ಆಧ್ಯಾತ್ಮಿಕತೆಯನ್ನು ಸಾಧಿಸಿಕೊಂಡವರು. ಆದರೆ ಅನುಭಾವ ಬೇಂದ್ರೆ ಕಾವ್ಯದ ಒಂದು ಸತ್ವವಾಗಿದ್ದರೆ ಮಧುರಚೆನ್ನರ ಕಾವ್ಯದಲ್ಲಿ ಅನುಭಾವವನ್ನು ಬಿಟ್ಟರೆ ಬೇರೇನೂ ಇಲ್ಲ. ಸಂಕೀರ್ಣತೆಯ ಸಹಜ ಪ್ರವೃತ್ತಿಯಿಂದಾಗಿ ಬೇಂದ್ರೆಯವರ ಅನುಭಾವಿಕ ಕವಿತೆಗಳ ಕಟ್ಟಿಕೊಡುವ ಅನುಭವದ ಸ್ವರೂಪವನ್ನು ಗ್ರಹಿಸುವುದು ಅಷ್ಟೊಂದು ಸುಲಭವಾಗಿಲ್ಲ. ಅವರ ಕಾವ್ಯರಚನಾ ತಂತ್ರವೆ ಬೇರೆ ವಾಗ್ವೈಭವದಿಂದ ಕೂಡಿದ್ದು, ಈ ಹಿನ್ನೆಲೆಯಿಂದ ಅವರ ಕವಿತೆಗಳ ಝಗಮುಗಿಸುವ ರತ್ನಾಭರಣಗಳ ಬೆಳಕಿನಲ್ಲಿ ಅನುಭಾವ ಸುಂದರಿಯ ಮರೆಯಾಗಿ ಬಿಡುತ್ತಾಳೆ."[೭]

ಬೇಂದ್ರೆಯವರು ಮಧುರಚೆನ್ನರ ಅನುಭಾವ ವಿಶಿಷ್ಟತೆಯನ್ನು ಕುರಿತು

"ನನ್ನನಿನ್ನ ಬೆನ್ನಬಳಿ ವಿಶಾಲವೃಕ್ಷ ಬೆಳೆದಿದ

.....

ನನ್ನನಿನ್ನ ನೋಟಮಾತ್ರ ಎರಡು ದಿಕ್ಕಿಗೆಳೆದಿದೆ

ಬೇರೆ ಹಾದಿ ತುಳಿದಿದೆ

ಎಂದಿದ್ದಾರೆ."[೮] ಕನ್ನಡ ಪರಂಪರೆಯಲ್ಲಿಯೇ ವಿಶಿಷ್ಟವಾದ ಕವಿಗಳಲ್ಲೊಬ್ಬರಾದ ಮಧುರಚೆನ್ನರ ಅನುಭಾವ ಕಾವ್ಯದ ವಿಶಿಷ್ಟ ಅಂಶಗಳನ್ನು ಎಚ್.ಎಸ್. ಶಿವಪ್ರಕಾಶರು ಗುರುತಿಸಿರುವಂತೆ ಹೀಗೆ ಸಂಗ್ರಹಿಸಿ ಹೇಳಬಹುದು.

೧. "ಮಧುರಚೆನ್ನರ ಕಾವ್ಯಯೋಗ ಮಿತವಾದ ವಿವರಗಳ ಮೂಲಕ ದ್ವಂದ್ವಗಳನ್ನು ಸೂಚಿಸಿ ಅದರಾಚೆಗಿನ ಜಂಗಮ ಸಮತೋಲನವನ್ನು ಸಾಧಿಸುತ್ತದೆ.

೨. ಇತರೆ ಎಲ್ಲಾ ಕವಿತೆಗಳಲ್ಲಿಯೂ ಕೇಂದ್ರಪಾತ್ರಗಳು ಎರಡೆ ಕೆಲವು ಸಲ ಈ ಪಾತ್ರಗಳು ಶಕ್ತಿಯಾಗಿ ಮಾರ್ಪಡುತ್ತವೆ. (ಜೀವಶಕ್ತಿ, ದೇವಶಕ್ತಿ).

೩. ಜೀವ ಜಗದೀಶರ ಪ್ರೇಮದರ್ಶನವನ್ನು ಕೇಂದ್ರವಾಗಿರಿಸಿಕೊಂಡ ಕವಿತೆಗಳಲ್ಲಿ ಜೀವ ಪ್ರಕೃತಿಗಳಲ್ಲಿರುವ ಶಕ್ತಿಯು ಒಳಿಗೆ ಪ್ರಧಾನ ಆಶಯವಾಗಿಯು ದೈವಿಶಕ್ತಿಯ ಇಳಿಯುವಿಕೆ ಅಧೀನ ಆಶಯವಾಗಿಯು ಕೆಲಸ ಮಾಡಿವೆ.

೪. ಇವರ ಕಾವ್ಯದಲ್ಲಿ ಜಾನಪದದ ಸಹಜತೆಯು ಭಕ್ತಿಕಾವ್ಯದ ಉತ್ಕಟತೆಯು ಮಹಾಕಾವ್ಯ ಪರಂಪರೆಯ ಸಂಯಮವೂ ಮುಪ್ಪುರಿಗೊಂಡಿವೆ.

೫. ಅನುಭಾವ ಕಾವ್ಯ ಪರಂಪರೆಗೆ ಇವರ ಕಾವ್ಯ ಹಿಂದಿಗಿಂತಲೂ ಹೆಚ್ಚಿನ ಸರಳತೆ ಸ್ಪಷ್ಟತೆಯನ್ನು ತಂದುಕೊಟ್ಟಿದೆ.

೬. ನಮ್ಮ ಪರಂಪರೆಯಲ್ಲಿ ಈ ಹಿಂದೆ ಮತ ಪಂಥಗಳ ಸಾಂಕೇತಿಕತೆ ಮತ್ತು ಪರಿಕಲ್ಪನೆಗಳ ಮೂಲಕ ಮೈದಾಳುತ್ತಿದ್ದ ಅನುಭಾವಿಕ ಕಾವ್ಯದ ಅಭಿವ್ಯಕ್ತಿಯನ್ನು ಮಾನವ ಲೋಕದ ಇಂದ್ರಿಯ ಗ್ರಹಗಳ ಮೂಲಭೂತ ವಿವರಗಳ ಮೂಲಕವೆ ಯಶಸ್ವಿಯಾಗಿ ಅಭಿವ್ಯಕ್ತಿಸಿ ಅನುಭಾವಿಕಾವ್ಯದ ಭಾಷೆಯನ್ನು ಸ್ವಚ್ಛಗೊಳಿಸಿದೆ.

೭. ಇವರ ಕಾವ್ಯ ಎಲ್ಲಾ ಮತಧರ್ಮ ಸಂಕೇತಗಳಿಂದ ಅನುಭವವನ್ನು ಮುಕ್ತವಾಗಿಸಿದ ನಮ್ಮ ಧರ್ಮ ನಿರಪೇಕ್ಷ ಯುಗದಲ್ಲಿ ಇದೊಂದು ದೊಡ್ಡ ಸಾಧನೆ.”

ಮಧುರಚೆನ್ನರ ಆತ್ಮಶೋಧ ಜಿ.ಎಸ್. ಶಿವರುದ್ರಪ್ಪ

ಕನ್ನಡ ನವೋದಯ ಸಾಹಿತ್ಯವನ್ನು ಕುರಿತು ಮಾತನಾಡುವಾಗ ಸಾಹಿತ್ಯ ಚರಿತ್ರೆಕಾರರು ಮುಖ್ಯ ಮೂರು ಕೇಂದ್ರಗಳಾಗಿ ಗುರುತಿಸುತ್ತಾರೆ.

೧. ಆಚಾರ್ಯ ಶ್ರೀಯುವರು ತಮ್ಮ ಇಂಗ್ಲಿಷ್ ಗೀತೆಗಳ ಮೂಲಕ ಪ್ರಾರಂಭಿಸಿದ ಮೈಸೂರು ವಲಯದ ಒಂದು ಕೇಂದ್ರ: ಮಾಸ್ತಿ, ಡಿ.ವಿ.ಜಿ., ಪು.ತಿ.ನ., ಕುವೆಂಪು, ಕೆ.ಎಸ್.ಎನ್. ಈ ಕೇಂದ್ರದ ಪ್ರೇರಣೆಗೆ ಒಳಗಾದವರು.

೨. ದಕ್ಷಿಣ ಕನ್ನಡ ಜಿಲ್ಲೆಯ ಗೋವಿಂದಪೈ ಕಡೆಂಗೋಡ್ಲು ಶಂಕರಭಟ್ಟ, ಅವರ ಮಂಗಳೂರು ಕೇಂದ್ರ

೩. ಮೂರನೆಯದು: ಬೇಂದ್ರೆ, ಗೋಕಾಕ್, ಮುಗಳಿ, ಆನಂದಕಂದ ಇವರನ್ನೊಳಗೊಂಡ ಗೆಳೆಯರ ಗುಂಪಿನ ಧಾರವಾಡ ಕೇಂದ್ರ.

ಆದರೆ ಇವುಗಳ ಜೊತೆಗೆ, ಮಧುರಚೆನ್ನರ ಗೆಳೆಯರ ಬಳಗದ ಸಿಂಪಿಲಿಂಗಣ್ಣ, ಕಾಪಸೆ ರೇವಪ್ಪ ಇತರರನ್ನು ಒಳಗೊಂಡ, ಹಲಸಂಗಿ ಕನ್ನಡ ನವೋದಯದ ನಾಲ್ಕನೇ ಕೇಂದ್ರ ಎಂದು ಪರಿಗಣಿಸುವುದು ಅಗತ್ಯವಾಗಿದೆ. ಈ ಮೂಲಕ, ಈ ನಾಲ್ಕನೆಯ ಕೇಂದ್ರ ಕನ್ನಡ ನವೋದಯಕ್ಕೆ 'ಅನುಭಾವ' ಕಾವ್ಯಧಾರೆ ಒಂದನ್ನು ಸೇರಿದ್ದಲ್ಲದೆ. ಜಾನಪದ ಜೀವಸತ್ವವನ್ನು ತುಂಬುವ 'ಜಾನಪದ ಸಾಹಿತ್ಯ ಸಂಗ್ರಹ' ಹಾಗೂ ಆ ಕುರಿತು ಅಧ್ಯಯನವನ್ನು ಕನ್ನಡದ ಸಂದರ್ಭದಲ್ಲಿ ಮೊಟ್ಟಮೊದಲಿಗೆ ಪ್ರಾರಂಭಿಸುವುದರ ಮೂಲಕವಾಗಿ, ಹಲಸಂಗಿ ಗ್ರಾಮವನ್ನು ಕರ್ನಾಟಕದ ಸಾಂಸ್ಕೃತಿಕ ಭೂಪಟದಲ್ಲಿ ಚಿರಸ್ಮರಣೆಯವಾಗುವಂತೆ ಅಂಕಿತಗೊಳಿಸಿದವರು ಮಧುರಚೆನ್ನರು. ಹಲಸಂಗಿ ಯಾವ ಸಂಪರ್ಕಸಾಧನೆಗಳು ಇಲ್ಲದಿದ್ದ ಕಾಲದಲ್ಲಿ ಸಾಹಿತ್ಯ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಿಂದ ಮಧುರಚೆನ್ನರು ಹೊಸ ಎಚ್ಚರವನ್ನು ಹುಟ್ಟಿಸಿದ ಕರ್ಮಭೂಮಿ, ಯೋಗಭೂಮಿ, ಪ್ರಯೋಗಭೂಮಿ.”[೧೦]

ಬೇಂದ್ರೆಯವರು ನಾಕುತಂತಿ ಮುನ್ನುಡಿಯಲ್ಲಿ : "ಭೋಗಸಾಧನೆಯ ಕವನಭಂಡಾರವು ಇದೇ ಯೋಗ ಸಾಧನೆಯ ಕವನಮಾರ್ಗವು ಇದೆ ಎಂದು ಹೇಳುತ್ತ, 'ಭಕ್ತಕವಿಗಳು', ಸಾಹಿತ್ಯಕವಿಗಳು ಎಂದು ವಿಭಾಗಿಸುತ್ತಾರೆ.

ವರ್ಗೀಕರಣದಲ್ಲಿ ಬೇಂದ್ರೆಯವರು ಮೂಲತಃ ಒಲಿದದ್ದು ಭಕ್ತಕವಿಗಳ ಯೋಗಸಾಧನೆಯ ಕವನಮಾರ್ಗದೆಡೆಗೆ. ಬೇಂದ್ರೆ ಕುವೆಂಪು ಪು.ತಿ.ನ. ಈ ಮೂವರಲ್ಲೂ ಆಧ್ಯಾತ್ಮವಾದ ಹಾಗೂ ಅನುಭಾವವಾದದ ತುಡಿತಗಳು, ಹೊಳಹುಗಳು ಕಾಣಿಸಿಕೊಂಡದ್ದು ನಿಜವಾದರೂ ಅದೊಂದೆ ಅವರ ಕೇಂದ್ರ ಕಾಳಜಿಯಾಗಿತ್ತೆಂದು ಹೇಳಲು ಬರುವುದಿಲ್ಲ. ಈ ಹಿನ್ನೆಲೆಯಿಂದ ನೋಡಿದರೆ ಹೊಸಗನ್ನಡ ಸಾಹಿತ್ಯದಲ್ಲಿ ಯೋಗಸಾಧನೆಯ ಕವನ ಮಾರ್ಗವನ್ನು ತಮ್ಮ ಬದುಕಿನ ಕೇಂದ್ರವನ್ನಾಗಿ ಮಾಡಿಕೊಂಡು ನಿಜವಾದ ಅರ್ಥದಲ್ಲಿ ಅನುಭಾವಿ ಕವಿ ಎಂದು ಕರೆಯಿಸಿಕೊಳ್ಳಲು ಅರ್ಹನಾದ ವ್ಯಕ್ತಿಯೆಂದರೆ ಮಧುರಚೆನ್ನರೆ ಎಂದು ಹೇಳಬಹುದು."[೧೦]

"೧೯೪೭ರ ಬೆಳಗಾವಿ ಜಿಲ್ಲೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆಯ ಭಾಷಣದಲ್ಲಿ ಮತ್ತು ೧೯೫೦ರ ಸೊಲ್ಲಾಪುರದ ೩೩ನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಧುರಚೆನ್ನರು ಕಾವ್ಯದ ಬಗ್ಗೆ ಹೇಳಿದ ಮಾತುಗಳನ್ನು ನೋಡಬಹುದು. ಅರವಿಂದರ ಕೃತಿಯಾದ "Feature Poetry" (ನಾಳಿನ ಕಾವ್ಯ) ಕೃತಿಯಲ್ಲಿ ಸಚ್ಚಿದಾನಂದ ಉದ್ಯುಕ್ತವಾಗುವ ಆಧ್ಯಾತ್ಮರಾಜ್ಯದ ಕವಿತೆಯ ಏಕ ಮೇವಾದ್ವಿತಿಯವಾಗಿ ನಾಳಿನ ಸಿರಿ ಪಟ್ಟವನ್ನೇರುವುದು" ಎಂದು ಹೇಳಿದ ಮಾತು. ಮಧುರಚೆನ್ನರ ಕಾವ್ಯಶ್ರದ್ಧೆಯ ಬುನಾದಿಯಾಗಿದೆ ಎಂಬುದನ್ನು ಸಭೆಯ ಗಮನಕ್ಕೆ ಹೇಳಿದ ಮಾತು.

೧. ಅಂತರ್‌ಹೃದಯದಿಂದ (ಹೃತ್ಕಮಲದಿಂದ) ಬಂದ ಕಾವ್ಯ.

೨. ಮಸ್ತ ಕೋರ್ದ್ಯದಿಂದ (ಸಹಸ್ರಗಳ ಕಮಲ) ಅದಕ್ಕೂ ಮೇಲಿನಿಂದ ಬಂದ

ಕಾವ್ಯ, ಮೊದಲನೆಯ ಪ್ರಕಾರದ ಕವಿತೆಗಳು ಅತ್ಯಂತ ಮಧುರವಾಗಿಯೂ ಸರಳವಾಗಿ, ನಯವಾಗಿ ಇರುತ್ತದೆ. ಇದನ್ನು ಭಕ್ತಿದೃಷ್ಟಿಯೆಂದು, ರಾಮಾಯಣವನ್ನು ಉದಾಹರಣೆಗೆ ತೆಗೆದುಕೊಳ್ಳಬಹುದು.

ಎರಡನೆಯ ಪ್ರಕಾರದ ಕವಿತೆಗಳಲ್ಲಿ ಔನ್ನತ್ಯ ತೇಜಸ್ಸು, ಗಂಭೀರತೆ, ವಿಶಾಲತೆಗಳು ತುಂಬಿ ತುಳುಕುತ್ತವೆ. ಒಮ್ಮೊಮ್ಮೆ ತೀರ ಸಾಧಾರಣ ವಿಷಯಗಳನ್ನು ಸಹ ಎರಡನೆ ಪ್ರಕಾರದಲ್ಲಿ ಅರಿಸಿಕೊಂಡಿರುವುದುಂಟು. ಏಕೆಂದರೆ, ಅದು ಆತ್ಮದೃಷ್ಟಿ, ಆತ್ಮನಿಗೆ ಎಲ್ಲದರಲ್ಲಿಯೂ ಪರಮಾತ್ಮನ ಪಾಸ್ತವ್ಯವನ್ನು ಗೋಚರಿಸುತ್ತದೆ. ಉದಾ. ಮಹಾಭಾರತ, ಉಪನಿಷತ್ತು, ಭಗವದ್ಗೀತೆ."[೧೧]

ಮಧುರಚೆನ್ನರ ಅನುಭಾವೀ ಆತ್ಮಕಥನ ಎನ್ನುವುದು ಮೂಲತಃ ಅವರು ಒಬ್ಬ ದಿವ್ಯತ್ವದ ಸಾಧಕನಾಗಿ ನಡೆಯಿಸಿದ ಆತ್ಮಶೋಧವೇ. "ಅನುಭಾವ ಎಂದರೆ ಈ ಎಚ್ಚರದೊಳಗೊಂದು ಹೊಸ ಎಚ್ಚರ ಹುಟ್ಟಿ, ಆ ಎಚ್ಚರದೊಳಗೊಂದು ಹೊಸ ಎಚ್ಚರ ಹುಟ್ಟಿ ಆ ಎಚ್ಚರದ ಬೆಳಕಿನಲ್ಲಿ, ಈ ಎಚ್ಚರದ ಮೂಲಕ್ಕೆ ಹೋಗಿ ಮುಟ್ಟಲು ಸಾಧಕನು ಕೈಗೊಳ್ಳುವ ಒಂದು ಮಹಾ ಪ್ರಯಾಣವೆ ಎನ್ನಬಹುದು." ಈ ಪ್ರಯಾಣದ ಹಾದಿಯಲ್ಲಿ ಜೀವನವು ಪಡುವ ಕಾತುರ, ವ್ಯಾಕುಲ, ತೊಳಲಾಟ, ಸಂಘರ್ಷ, ಸತ್ಯದ ಸಕ್ಷಾತ್ಕಾರ, ಅದರ ಬೆನ್ನಿಗೆಬಂದು ಕವಿಯುವ ಕತ್ತಲೆ ಮತ್ತು ತಳಮಳದ ಕತ್ತಲು ಕಳೆದು ಮೂಡುವ ಸಾಕ್ಷಾತ್ಕಾರದ

ಸೂರ್ಯೋದಯದ ಸಂಭ್ರಮ ಇತ್ಯಾದಿಗಳೆಲ್ಲವು ಅನುಭಾವಿಯ ಅನುಭವಕ್ಕೆ ಬರತಕ್ಕ ಸಂಗತಿಗಳು. ಪಿಲಿಗ್ರಿಮ್ಸ್ ಪ್ರೋಗ್ರೆಸ್ ದುರ್ಗಮ ಪಥಗಳ ಚಿತ್ರಣ ಹಾಗೆಯೇ ವಚನಕಾರ ಅದರಲ್ಲೆಲ್ಲ ಬಸವ, ಅಕ್ಕಮಹಾದೇವಿ ವಚನಗಳಲ್ಲಿ ತಲ್ಲಣಗಳು ಹಾದುಹೋಗುತ್ತವೆ. ಮಧುರಚೆನ್ನರ ಕವಿತೆಗಳಲ್ಲಿ ಉಜ್ವಲವಾಗಿ ಮತ್ತು ದಟ್ಟವಾಗಿ, ಅವರ ಗದ್ಯ ಬರಹಗಳಲ್ಲಿ ವಾಸ್ತವ ವಿವರಗಳಾಗಿ ಈ ಅನುಭಾವ ಜಗತ್ತು ಸಾಹಿತ್ಯದ ಸಮಸ್ತ ಲಕ್ಷಣ ಸಮನ್ವಿತವಾಗಿ ಪ್ರಕಟಗೊಂಡಿರುವುದು ಕನ್ನಡದಲ್ಲಿ ಬಹುಶಃ ಇದೇ ಮೊದಲು ಎನ್ನಬಹುದು.[೧೩]

"ನನ್ನ ನಲ್ಲನಂಥ ಕವಿತೆಯಲ್ಲಿ ಅತ್ಯಂತ ಕಾವ್ಯಮಯವಾಗಿ ಅವರ ಅನುಭಾವ ಸಾಧನೆ ಮತ್ತು ಶೋಧನೆಗಳು ಅಭಿವ್ಯಕ್ತಿಗೊಂಡಿದ್ದರೂ ಮತ್ತೆ ಗದ್ಯದಲ್ಲಿ ತಮ್ಮ ಆತ್ಮಕಥನವನ್ನು ಬರೆಯುವುದಕ್ಕೆ ಕಾರಣವಾದ ಸಂಗತಿಗಳನ್ನು ಹಾಗೂ ಇದನ್ನು ಬರೆಯುವಲ್ಲಿ ತಮ್ಮ ನಿಲುವೇನೂ ಎಂಬ ವಿಷಯವನ್ನು ಕುರಿತು ಹೇಳುತ್ತಾರೆ."[೧೪]

"ಹಿಂದೆ ಸ್ವಾನುಭಾವದ ಆತ್ಮಗೀತೆ (ನನ್ನ ನಲ್ಲ)ಯನ್ನು ಬರೆದು ಪ್ರಕಟಿಸಿ? ಆದರೆ ನಾಡಿನಲ್ಲಿ ಎಷ್ಟು ಜನರಿಗೆ ಅದರ ಹೊಲಬೆ ತಿಳಿಯಲಿಲ್ಲ. ಅದಕ್ಕಿಂತಲೆ ಅವನು ಗದ್ಯದಲ್ಲೊಂದು ಆತ್ಮಕತೆಯನ್ನು ಬರೆಯಬೇಕೆಂದು ಆಶಿಸುತ್ತಿದ್ದನು."[೧೫] ಪು. ೩೧೬

"ಈ ಅರಿಕೆಯ ಒಳಗೆ ವ್ಯಕ್ತಿಯ ನಿಲುವು 'ನಾನು' ಎಂಬ ನೆಲೆಯಲ್ಲಿ 'ಅವನು' ಎಂಬುದು. ಇಡೀ ಬರಹವನ್ನು 'ಯಾರದೋ' ಕಥನಎಂಬಂತೆ, ತನ್ನ ಅನುಭವಗಳನ್ನು ತಕ್ಕ ದೂರದಲ್ಲಿ ಇರಿಸಿಕೊಂಡು 'ಅಹಂ' ವಿರಸನದ ಉದ್ದಕ್ಕೂ ತಮ್ಮನ್ನು ತಾವು ಒಬ್ಬ 'ಜ್ಞಾನಭಿಕ್ಷು' ಎಂದು ಕರೆದುಕೊಂಡಿದ್ದಾರೆ. ಅವರು ಈ ಮೊದಲೆ ಬರೆದ 'ನನ್ನ ನಲ್ಲ'ದೊಳಗೆ ಯಾವ ಅನುಭವಗಳು ಅತ್ಯಂತ ತೀವ್ರವೂ, ಗಾಢವೂ ಆಗಿ ಅಭಿವ್ಯಕ್ತವಾಗಿವೆಯೋ ಆ ಅನುಭವಗಳಿಗೆ ಹಿನ್ನೆಲೆಯಾದ ತಮ್ಮ ಸಾಧಕ ಹಾಗೂ ಸಾಂಸಾರಿಕ ಜೀವನದ ವಿವರಗಳನ್ನು ಯಥಾವತ್ತಾಗಿ ಈ ಆತ್ಮಕಥನದ ಗದ್ಯದೊಳಗೆ ಮಧುರಚೆನ್ನರು ಬರೆದಿರಿಸಿದ್ದಾರೆ. ತಮಗೆ ಅದು ಹೇಗೋ ಹುಟ್ಟಿಕೊಂಡ ಈ ಅಧ್ಯಾತ್ಮ ಹಂಬಲದ ಅನ್ವೇಷಣೆಯ ಹಾದಿಯಲ್ಲಿ ಬೆಟ್ಟಿಯಾದ ವ್ಯಕ್ತಿಗಳು ದೊರೆತ ಮಾರ್ಗದರ್ಶನಗಳ ನಡೆಯಿಸಿದ ವಿಸ್ತಾರವಾದ ಶಾಸ್ತ್ರಧ್ಯಯನಗಳ ಎದುರಾದ ವ್ಯಥೆಗಳ ದೊರೆತ ದಿವ್ಯಾನುಭವಗಳ ಅನೇಕ ವಿವರಗಳು ದಾಖಲಾಗುತ್ತ ನಾವು ಯಾವುದೇ ಪ್ರಾಚೀನ ಕಾಲದ ಸಂತನೊಬ್ಬನ ಜೀವನವನ್ನು ಓದುತ್ತಿರುವಂತೆ ಭಾಸವಾಗುತ್ತದೆ. ಅಷ್ಟೆ ಅಲ್ಲ ಪೂರ್ವರಂಗ ಕಾಳರಾತ್ರಿ ಬೆಳಗು ಹಂತಗಳಲ್ಲಿ ನಿರೂಪಿತವಾಗಿರುವ ಮಧುರಚೆನ್ನರ ಅನುಭಾವ ಯಾತ್ರೆಯು, ಜಗತ್ತಿನ ಎಷ್ಟೂ ಸಾಧುಸಂತರ ಬದುಕಿನ ಅನುಭವಗಳೊಂದಿಗೆ ಸಂವಾದಿಯಾಗುತ್ತ ಅತ್ಯಂತ ಅಧಿಕೃತವಾಗುತ್ತದೆ. ಮಧುರಚೆನ್ನರು ಉದ್ದಕ್ಕೂ, ತಮ್ಮ ಅನುಭವವನ್ನು ಜಗತ್ತಿನ ಇತರ ಅನುಭಾವಿಗಳ ಅವಸ್ಥೆಗಳೊಂದಿಗೆ ಹೋಲಿಸುತ್ತ ಈ ಅನುಭಾವ ಎನ್ನುವುದು ಹೇಗೆ ಸಾರ್ವಕಾಲಿಕ-ಸಾರ್ವದೇಶಿಕ ಲಕ್ಷಣಗಳನ್ನು ಪಡೆದುಕೊಂಡಿದೆ ಎಂಬುದನ್ನು ತೋರಿಸಿಕೊಡುತ್ತಾರೆ."[೧೬]

"ಈ ಗದ್ಯರೂಪದ ಬರಹವು ಅವರ ಕವಿತೆಗಳಿಗೆ ಪೂರಕ ಮಾತ್ರವಲ್ಲ. ಅವುಗಳಿಗೆ ಬರೆದ ವಿವರಣಾತ್ಮಕವಾದ ವ್ಯಾಖ್ಯಾನದಂತೆಯೂ ಪ್ರವರ್ತಿಸುತ್ತದೆ ಮತ್ತು ಅವರ ಕವಿತೆಗಳಿಗೆ ಒಂದು ಬಗೆಯ ಪೂರ್ವ ಪೀಠಿಕೆಯೂ ಆಗಿದೆ.

ಈ ಬರಹದ ಮೂಲಕ ನಿಷ್ಪನ್ನವಾಗುವ ಮಧುರಚೆನ್ನರ ಅನುಭಾವೀ ವ್ಯಕ್ತಿತ್ವದ ಒಂದು ಮುಖ್ಯ ಲಕ್ಷಣವೆಂದರೆ, ಅನುಭಾವ ಎನ್ನುವುದು ಎಲ್ಲಾ ಬಗೆಯ ಅಧೀನತೆ ಗಡಿ, ಉಪಾದಿ ಮೀರಿದ ನೆಲೆಯಲ್ಲಿ ನಿಲ್ಲುವ ದಿಟ್ಟತನ. ಅದೊಂದು ರೀತಿಯಲ್ಲಿ ಜಾತಿ-ಮತ-ದೇಶಗಳನ್ನು ಮೀರಿ, ತನ್ನ ವ್ಯಕ್ತಿತ್ವ ವಿಕಾಸಕ್ಕೆ ಬೇಕಾದ ಬೆಳಕನ್ನು ಎಲ್ಲಿಂದಲಾದರೂ ಧಾರಾಳವಾಗಿ ಪಡೆದುಕೊಳ್ಳುವುದು. ಮಧುರಚೆನ್ನರು ಎಲ್ಲಾ ಧರ್ಮದ ಗ್ರಂಥಗಳನ್ನು ಅಧ್ಯಯನಮಾಡಿ ತಾವು ಹುಟ್ಟಿ-ಬೆಳೆದ ಮತ-ಧರ್ಮದ ಧಾರ್ಮಿಕ ಲಾಂಛನವನ್ನು ಕಿತ್ತೆಸೆದರು. ಆಕಾರಣದಿಂದ ಆ ಕಾಲಕ್ಕೆ ಎದ್ದ ಕೋಲಾಹಲದ ಮಧ್ಯೆ ಮಠಾಧಿಪತಿಗಳೊಬ್ಬರು ಇವರನ್ನು ಕರೆ ಕಳುಹಿಸಿ ವಿಚಾರಿಸಿದಾಗ ಮಧುರಚೆನ್ನರ ಪ್ರತಿಕ್ರಿಯೆ ಅವರ ಆತ್ಮಕಥನದಲ್ಲಿ ದಾಖಲಾಗಿದೆ."[೨೭]

"ಆ ಭಾಗದಲ್ಲೆಲ್ಲ ಖ್ಯಾತಿ ಹೊಂದಿದವರಾದ ತರುಣ ಮಠಾದೀಶರೊಬ್ಬರಿದ್ದರು. ಅವರು ಈಗ ಜ್ಞಾನ ಭಿಕ್ಷವನ್ನು ಬೆಟ್ಟಗೆಂದು ಕರೆಯಿಸಿಕೊಂಡು, ಜನತೆಯಲ್ಲೆಲ್ಲ ಗದ್ದಲ ಆಗುವಂತೆ ಓಗೇಕೆ ಮಾಡುವುದು ಎಂದು ಕೇಳಿದರು. ಅದಕ್ಕೆ ಆತನು ನಾನೇನೂ ಧರ್ಮ ಆ ಚಿಹ್ನೆಯನ್ನು ಬಟ್ಟೆ ಬಿಡಬೇಕೆಂಬ ಸಿದ್ಧಾಂತಕ್ಕೂ ಬಂದಿಲ್ಲ. ಅದಿಲ್ಲದೆ ಉನ್ನತಿಯೆ ಸಾಧ್ಯವಿಲ್ಲವೆಂದು ಗ್ರಹಿಸಿಲ್ಲ. ನನ್ನ ಮಟ್ಟಿಗೆ ಅದೊಂದು ಸಾಮಾಜಿಕ ಚಿಹ್ನೆಯ ಹೊರತು ಧಾರ್ಮಿಕ ಏನು ಇಲ್ಲ.

ನನಗೇನೂ ಇಂಥದೊಂದು ಜಾತಿಮತದವನೆಂದು ಹೇಳಿಕೊಳ್ಳುವುದಕ್ಕೆ ಜೀವನದಲ್ಲಿ ಸಮ್ಮತಿಯಿಲ್ಲ. ಸರ್ವಮಾನವರೆಲ್ಲೂ ಒಂದೇ ಜಾತಿ, ಮಾನವ ಜಾತಿಯೆಂಬುದೊಂದೇ ಒಂದು. ಈಗಿರುವ ಸರ್ವದೇಶ ಜನಾಂಗ ಗ್ರಂಥಗಳ ಸತ್ಯಾಸತ್ಯತೆಯು ಸರ್ವರಿಗೆ ವಿದಿತವಾಗಿ ಇನ್ನೂ ಮುಂದೆ ಒಂದೆ ಮನೆಯಲ್ಲಿ ಒಬ್ಬೊಬ್ಬರು ತಮ್ಮ ಅಭಿರುಚಿಯಂತೆ ಬೇರೆ ಬೇರೆ ಹೇಳಿದ ಪದ್ಧತಿಯಂತೆ ಸಾಧನಗಳನ್ನು ಮಾಡುತ್ತಲಿರಬಹುದಾದ ಕಾಲವೊಂದು ಬೇಗನೆಯ ಬರುವುದರಲ್ಲಿ ಎಳ್ಳಷ್ಟೂ, ಸಂದೇಹ ತೋರುವುದಿಲ್ಲ. ಕಾಲವೆ ಹೀಗೆ ಹೊರಳುತ್ತದೆಯೆಂದು ಈಗಿನ ಮಹಾಪುರುಷರ ಮನಸ್ಸಿನ ಒಲವಿನ ಮೇಲಿನಿಂದ ಸ್ಪಷ್ಟವಾಗಿ ತಿಳಿದುಕೊಳ್ಳಬಹುದಾಗಿದೆ. ಪು. ೩೧೫

ಮತಧರ್ಮಗಳ ಹೆಸರಿನಲ್ಲಿ ಮನುಷ್ಯ ಮನುಷ್ಯರನ್ನು ವಿಭಜಿಸುತ್ತಿರುವ ಧಾರ್ಮಿಕ ಮೂಲಭೂತವಾದವು ಆಕ್ರಮಣದ ಇಂದಿನ ದಿನಗಳಲ್ಲಿ ಧರ್ಮವನ್ನು ಕುರಿತು ಮಧುರಚೆನ್ನರ ಈ ವ್ಯಾಖ್ಯಾನ ಅತ್ಯಂತ ಪ್ರಸ್ತುತವಾಗಿದೆ ಎಂಬುದನ್ನು ನಾವು ಗಮನಿಸಬೇಕಾಗಿದೆ. ತಮ್ಮ ಆತ್ಮಕಥನದ ಅನುಭಾವಿಕ ಪ್ರಯೋಜನ ಬಗ್ಗೆ ಮಧುರಚೆನ್ನರು ಇನ್ನೂ ಒಂದು ಮಾತನ್ನು ಹೇಳುತ್ತಾರೆ."[೨೮]

"ಅಣ್ಣಗಳಿರಾ ನಾನು ಎಲ್ಲಕ್ಕಿಂತ ಮೊದಲು ಅರಿಕೆ ಮಾಡುವುದೇನೆಂದರೆ ಅನುಭಾವಿ ಎಂದು ಅನ್ನಿಸಿಕೊಳ್ಳುವ ಸಲುವಾಗಿ ನಾನು ಆತ್ಮಕಥೆಯನ್ನು ಬರೆದಿಲ್ಲ. ಅನುಭಾವ ರಾಜ್ಯದ ಅಸ್ತಿತ್ವದ ಸತ್ಯಸತ್ಯತೆಯನ್ನು ಅರಿಸಿ ತಿಳಿಸಿ ನನ್ನಂತೆ ಬಳಲಿ ಬೆಂಡಾಗುತ್ತಿರುವ ತರುಣ ಜಿಜ್ಞಾಸುಗಳಿಗೆ ತಿಲ ಮಾತ್ರವಾದರೂ ಉಪಯೋಗವಾಗಬೇಕೆಂಬ ಹೃದಯದ ಉಮಿತಿಯ ಹೊರತು ಇದಕ್ಕೆ ಅನ್ಯ ಅಹಂಕಾರದ ಸೊಂಕು ಲೇಶ ಮಾತ್ರವೂ ಇಲ್ಲ ಎಂದು ಸತ್ಯವಾಗಿ ಹೇಳುತ್ತೇನೆ."[೯] (ಪು. ೨೨೩-೨೨೪)

ನಾನು ಕತೆಗಾರನಲ್ಲ, ಸಂಶೋಧಕನು, ನನ್ನ ಆಧ್ಯಾತ್ಮ ಸಂಶೋಧನದ ವರದಿ ಎಂದು ಈ ಪುಸ್ತಕವನ್ನೊದಬೇಕು. ವರದಿಗೆ ಕತೆಯನೆರಳು ಬಿದಿದ್ದೆಯೆಂದು ಮಾತ್ರ ಹೇಳಬಹುದು ಕಥಾಲಕ್ಷಣವನ್ನು ಇದರಲ್ಲಿ ಹುಡುಕಾಡಿ ಫಲವಿಲ್ಲ. (ಪು. ೨೨೯)

ಬೇಂದ್ರೆಯವರು ಹೇಳುತ್ತಾರೆ : ಕರ್ನಾಟಕದೊಳಗಿನ ಆಧ್ಯಾತ್ಮ ವಸಂತಸಮಯವನ್ನು ಸೂಚಿಸುವ ಕುಕಿಲ ಚಿಗುರು ಇವರ ಬರಹ ಅವರ ಬರಹಗಳನ್ನೋದಿ ನಾಡಿನಲ್ಲಿ ವಿವೇಕವೂ ಆಧ್ಯಾತ್ಮಿಕ ಜಾಗೃತಿಯೂ ಕುದುರಿದರೆ ಅದಕ್ಕಿಂತ ಬೇರೆ ಸಾಫಲ್ಯ ಉಂಟೆ. (ಪು. ೨೩೧)

ಮಧುರಚೆನ್ನ: ಕೀರ್ತಿನಾಥ ಕುರ್ತಕೋಟಿ

ಉತ್ತರ ಕರ್ನಾಟಕದ ಸಾಹಿತ್ಯ ಕೃಷಿಯಲ್ಲಿ ಶ್ರಮಿಸಿದ ಗುಂಪುಗಳು ಹಲಸಂಗಿಯ ಗೆಳೆಯರ ಗುಂಪು ಮತ್ತು ಧಾರವಾಡ ಗುಂಪುಗಳ ನಿಕಟಸ್ನೇಹವು ಕೊನೆಯವರೆಗೂ ಬೆಳೆದುಬಂದಿತ್ತು. ಬೇಂದ್ರೆ ಹಾಗೂ ಮಧುರಚೆನ್ನರು ಶ್ರೀ ಅರವಿಂದರ ಪ್ರಭಾವದಿಂದ ಸ್ವಂತದ ಆಧ್ಯಾತ್ಮಿಕತೆಯನ್ನು ರೂಪಿಸಿಕೊಂಡರು. ಆದರೆ ಅನುಭಾವ ಬೇಂದ್ರೆ ಕಾವ್ಯದ ಒಂದು ಸತ್ವವಾಗಿದ್ದರೆ. ಮಧುರಚೆನ್ನರ ಕಾವ್ಯದಲ್ಲಿ ಅನುಭಾವವನ್ನು ಬಿಟ್ಟರೆ ಬೇರೇನೂ ಇಲ್ಲ. ಮಧುರಚೆನ್ನರಿಗೆ ತಮ್ಮ ಕಾವ್ಯ ರಚನೆ ಅನುಭಾವದ ಪ್ರಕ್ರಿಯೆಯ ಒಂದು ಅಂಗವಾಗಿತ್ತು. ಆದರೆ ಅದೇ ಮುಖ್ಯವಾಗಿರಲಿಲ್ಲ. ಅವರು ತಮ್ಮ ಬದುಕನ್ನೆ ಅಷ್ಟೆ ಏಕೆ, ತಮ್ಮ ಸಾವನ್ನು ಕೂಡಾ ಅನುಭಾವದ ಅನುಭಾವಕ್ಕಾಗಿ ಶ್ರುತಿಗೊಳಿಸಿಕೊಂಡವರು. ಆ ಬದುಕಿನ ಎಲ್ಲ ವಿವರಗಳನ್ನು ಅವರ ಬರವಣಿಗೆ ಹಿಡಿದುಕೊಂಡಿದಯೆಂದು ಹೇಳುವುದು ಬಿಗಿಯಾದ ಮಾತು. ಅವರ ಕಾಳರಾತ್ರಿ ಬೆಳಗು ಮೊದಲಾದ ಗದ್ಯ ಗ್ರಂಥಗಳಲ್ಲಿ ಈ ಬದುಕಿನ ವಿವರಗಳು ದೊರೆಯಬಹುದು.[೧೦]

ಮಧುರಚೆನ್ನರ ಕವಿತೆಗಳನ್ನು ವಾಚ್ಯಾರ್ಥಕ್ಕೂ ಮೀರಿದ ಸಾಂಸ್ಕೃತಿಕ ಅರ್ಥ ಸಾಂಸ್ಕೃತಿಕ ಪ್ರಯತ್ನದ ಹಿನ್ನೆಲೆಯಲ್ಲಿ ನೋಡುತ್ತಾರೆ. ಏಕೆಂದರೆ ಮಧುರಚೆನ್ನರು ಅಂತಹ ಕವಿತೆಯನ್ನು ಬರೆದದ್ದು ಏಕೆ? ಎನ್ನುವ ಪ್ರಶ್ನೆಯು ಮುಖ್ಯವಾಗುತ್ತದೆ. ಹಾಗಾಗಿ 'ಸಿಡಿಲು' ಒಂದು ಕವಿತೆ ಇದು ವಾಚ್ಯಾರ್ಥದ ದೃಷ್ಟಿಯಿಂದ ಸಿಡಿಲಿನ ಬಗ್ಗೆ ಬರೆದ ಕವಿತೆ ಎಂಬುದು ನಿಜವಾದರೂ, ಸಾಂಕೇತಿಕ ಅರ್ಥ ವಾಚ್ಯಾರ್ಥಕ್ಕಿಂತ ಬೇರೆಯಾಗಿರುತ್ತದೆ. ಎಂದು ಹೇಳುವುದು ಕೂಡ ಒಂದು ಸಾಂಸ್ಕೃತಿಕ ಪ್ರಯತ್ನವಾಗಿದೆ. ಸಿಡಿಲು ಸಾಂಕೇತಿಕವಾಗಿ ನಿರೂಪಿಸುವ

ಅನುಭವದ ಬಗ್ಗೆ ಅಥವಾ ಸಿಡಿಲಿನ ಬಗೆಯಾಗಲಿ ತಿಳುವಳಿಕೆ ಕೊಡಬಹುದ್ದಲ್ಲ. ಅನುಭಾವದ ಅನುಭಾವದ ಸೀಮೆಯಲ್ಲಿ ಇದೊಂದು ಮಹತ್ವದ ಅನುಭವ. ಪರಮಾತ್ಮನ ಅಸ್ತಿತ್ವದ ಗುರುತು ಸಿಕ್ಕು ಮಾಯವಾಗಿ ಹೋದದ್ದರ ಗುರುತು ಇಲ್ಲಿದೆ. ಮಧುರಚೆನ್ನರ ಅನುಭಾವ ಗ್ರಂಥದಲ್ಲಿ ಇದೊಂದು ಗುರುತಿನ ವಾಕ್ಯವಾಗಿ ಉಳಿಯುತ್ತವೆ."[೧೦]

"ಎಚ್.ಎಸ್. ಶಿವಪ್ರಕಾಶರು ಮತ್ತು ಕುರ್ತಕೋಟಿಯವರು ಹೇಳುವ ಹಾಗೆ ಸಿಡಿಲು ಕವಿತೆಯಲ್ಲಿ "ಪರಮಾತ್ಮನ ಗುರುತು ಸಿಕ್ಕು ಮಾಯವಾಗಿ ಹೋದದ್ದರ ಗುರುತು ಇಲ್ಲಿದೆ" ಎಂದರೆ ಉತ್ಕಟ ಆನಂದದ ಕ್ಷಣವನ್ನು ನೀಡಿ. ಆ ಬಳಿಕ ಜೀವಜಗತ್ತುಗಳನ್ನು ತಬ್ಬಲಿ ಮಾಡುವುದು ಕವಿತೆಯ ಕೇಂದ್ರ ಅನುಭವ ಎಂದು ಗುರುತಿಸುತ್ತಾರೆ."[೧೧]

"ಮನುಷ್ಯನ ಐತಿಹಾಸಿಕ ಸಾಂಸ್ಕೃತಿಕ ವ್ಯಕ್ತಿತ್ವಕ್ಕೂ ಅನುಭಾವಕ್ಕೂ ಏನೂ ಸಂಬಂಧವಿಲ್ಲ. ಇದ್ದರೆ ಅದು ಭಾಷೆಯ ಮೂಲಕವಾಗಿ ಮಾತ್ರ. ಭಾಷೆಯೆಂದರೆ ಮನುಷ್ಯನ ಐತಿಹಾಸಿಕ ಹಾಗೂ ಸಾಂಸ್ಕೃತಿಕ ಮಾಧ್ಯಮಷ್ಟೆ ಅಲ್ಲ ಭಾಷೆಯೆ ಅವುಗಳಿಗೆ ಮೂರ್ತ ಸ್ವರೂಪವನ್ನು ಕೊಡಬಲ್ಲವು. ಆದರೆ ಸಾಂಸ್ಕೃತಿಕ ಪ್ರಯತ್ನಗಳಿಗೆ ದೊರಕಿಸಿಕೊಳ್ಳುವ ಸುದ್ದಿಯೇ ಅಲ್ಲ."[೧೨]

"ಮುಗ್ಧ ಜೀವನ' ಹೆಸರಿನಲ್ಲಿರುವ ಕವಿತೆಗಳು ಹೊಲದಿಂದ ಮನೆಗೆ ಬಂದ ಹುಡುಗಿಯ ದುಡಿತವನ್ನು ಮತ್ತು ಜಡೆ ಮುಡಿಯನ್ನು ತಂದೆಯು ನೋಡುವ ಮಗಳೆ ಎಂದನು. ಎಂದರೆ ಅಕ್ಕಮಹಾದೇವಿಯ ವಚನದಲ್ಲಿ ಕಂಡುಬರುವ "ಅಕ್ಕಕೇಳವ್ವ ನಾನೊಂದು ಕನಸುಕಂಡೆ" ಎಂಬ ವಚನದ ರೂಪಕವನ್ನು ಬಳಸಿಕೊಂಡಿರುವುದು ಕಂಡುಬರುತ್ತದೆ. ಆದರೂ ಈ ಕವಿತೆಯ ಅರ್ಥ ಸರಳವೂ ಗಹನವೂ ಆಗಿರುವುದು ಕಂಡುಬರುತ್ತದೆ. ಈ ಹುಡುಗಿಯ ಹೊಲದ ಕಾಯಕ ಮತ್ತು ಕನಸಿನಲ್ಲಿ ದೊರೆತ ಪಾರಲೌಕಿಕದ ಅನುಭವದ ಒಂದನ್ನೊಂದು ಅನುವಾದ ಮಾಡುತ್ತವೆ. ಈ ಮೂರು ಕಾವ್ಯ ಸಂಜ್ಞೆಯ ನಿರ್ಮಾಣವಾಗುತ್ತದೆ."[೧೩]

ಮಧುರ ಚೆನ್ನರ 'ದೇವತಾ ಪೃಥ್ವಿ' 'ನನ್ನನಲ್ಲ' ಇವೆರಡು ಅವರ ಪ್ರಸಿದ್ಧವಾದ ಕೃತಿಗಳು. 'ದೇವತಾ ಪೃಥ್ವಿ' ಮಧುರಚೆನ್ನರಲ್ಲಿಯ ಇನ್ನೊಂದು ಸ್ಥಿತಿಯನ್ನು ಪ್ರಕಟಿಸುವ ಮಹತ್ವದ ಕವಿತೆ. ಇದು ಕಾಲದ ಹಗರಣದ ಹಿರಿಯ ಕುರುಹು ಇಲ್ಲಿಯ ಮರುಗಲ್ಲ |ಅಲ್ಲಿಯ ಅಳಕಲ್ಲ| ಇಲ್ಲದಂಥ ಸರಿಹೊಲ್ಲ| ಮರೆತು ಮಲಗುವಳಲ್ಲ| ಅರಿತು ಗಗನಾಂಗಾದೊಂದು ಮೂಲೆಯೊಳಗಿನ ತಾರೆಯಂತೆ ಹಾಗೆ ಮಿಣುಕುತ್ತಿರುತ್ತದೆ. ಒಟ್ಟಿಗೇನೆಂದರೆ "ಪರ್ಯಾಯದಿಂದ (Indirectly) ಈಶ ಪ್ರೇರಕತ್ವವನ್ನು ಒಪ್ಪಿಕೊಂಡು ಜೀವವು ತೀರಪ್ರತ್ಯಕ್ಷವಾಗಿ ಮತ್ತು ಅಪರೋಕ್ಷವಾಗಿ ಅನುಭವಿ ಸಳೆಸುತ್ತಿರುತ್ತವೆ ಎಂದು ಮಧುರಚೆನ್ನರು ವಿವರಿಸುತ್ತಾರೆ."[೧೪]

ಕಿಂಭೂತ ಕೊರಪೊಂದು ತುಂಬಿತು ಕೊನರಾಗಿ
ಹೂವಾಗಿ ಹಣ್ಣು ಬಿಡಲೆಲ್ಲ| ಬಳಮ್ಮಾ
ಮಲಗಿರುವ ತಾಯಿ ಪೃಥಿವಿ

ಇಲ್ಲಿ ಮಧುರಚೆನ್ನರು "ಕಿಂಭೂತದ" ಕೊರಡು ಕೊನರು ಎಂಬುದರ ಉಪಯುಕ್ತತೆಯನ್ನು ಕುರಿತು ಪ್ರಶ್ನಿಸುವಂತಿದೆ. 'ಕಿಂಭೂತದ' ಅರ್ಥ ಪ್ರಶ್ನೆಗಳ ಉತ್ತರವಾಗಿ ಬಂದಿರುವ ತಿಳುವಳಿಕೆ ಎಂದೇ ಆಗುತ್ತದೆ. ಇದು ಅನುಭವದಲ್ಲಿ ಅರಗಿ ಹೋಗಲಿಲ್ಲ ಅದಾಗಬೇಕಾದರೆ ಮೋಹವನ್ನು ಬಿಟ್ಟು ಹೋಗಿ ಮನುಷ್ಯ ಮುಕ್ತನಾಗುವ ಮಾರ್ಗ ತೆರೆದೆ ಇದೆ. ಕಾಣದ ಕುರುಡನ್ನು ಬಿಡಬೇಕಾಗಿದೆ ಹಾಗೆ. ಕಾಣದ ಕುರುಡನ್ನು ಬಿಡಬೇಕಾಗಿದೆ."[೨೬]

"ಕವಿತೆಯ ವಾಚ್ಯಾರ್ಥ ವ್ಯಂಜನಾರ್ಥಗಳು ಸರಳವಾಗಿಯೇ ಇವೆ. ಈ ಕವಿತೆಯ ಅಸ್ತಿತ್ವ ಆಧ್ಯಾತ್ಮಿಕ ಇತಿಹಾಸದಲ್ಲಿ ಮಹತ್ವದ ತಿರುವನ್ನು ಸೂಚಿಸುತ್ತದೆ. ಕವಿತೆ ದೈವಿಕ ಅನುಗ್ರಹವನ್ನು ಬೇಡುವುದರ ಮೂಲಕ ಅದನ್ನು ಪಡೆಯುವ ಜವಾಬ್ದಾರಿಯು ಮನುಷ್ಯನದೇ ಎಂದು ಪ್ರತಿಪಾದಿಸುತ್ತದೆ. ಇದರಿಂದ ಕವಿತೆಯ ಮಹತ್ವ ಹೆಚ್ಚಾಗುತ್ತದೆ. ಭೂಮಿ ಎಂದರೆ ಕನಸಿನಕನ್ನಕ್ಕಿ ಅವಳು ತನ್ನ ಕನಸುಗಳನ್ನು ಮಗನಿಗೆ ಕೊಡುವಂತಾದರೆ ಮನುಷ್ಯ ತನ್ನ ಆಧ್ಯಾತ್ಮಿಕ ಸತ್ವವನ್ನು ಹೆಚ್ಚಿಸಿಕೊಂಡು ಹೊಸ ಸಿದ್ಧಿ ಪಡೆಯಬಹುದು."[೨೭]

ದೇವತಾಪೃಥ್ವಿಯಲ್ಲಿ ತಾಯಿ ಮತ್ತು ಮಗನ ಸಂಬಂಧ ರೂಪಕವನ್ನು ಮಧುರಚೆನ್ನರು ಉಪಯೋಗಿಸಿದರೆ 'ನನ್ನನಲ್ಲ'ದಲ್ಲಿ ಸತಿಪತಿ ಭಾವರೂಪಕವನ್ನು ಉಪಯೋಗಿಸಿದ್ದಾರೆ.

'ಯೇನಾವಿಜ್ಞಾತೇನ ಸರ್ವಮಿದಂ ವಿಜ್ಞಾತಂಭವತಿ' ಉಪನಿಷತ್ತಿನ ಈ ವಾಕ್ಯವನ್ನು ನೆನಪಿನಲ್ಲಿಟ್ಟುಕೊಂಡರೆ 'ನನ್ನ ನಲ್ಲದ' ಪ್ರಣಯ ಯಾತ್ರೆಯ ಅರ್ಥವಾಗುತ್ತದೆ. ತಿಳುವಳಿಕೆ ಸತ್ಯ. ಸೌಂದರ್ಯಗಳ ಮೂಲ ಗೊತ್ತಾಗಬೇಕಾದರೆ ದೃಶ್ಯದ ಸೌಂದರ್ಯ ನೆನೆಪಿಗೆಬರುತ್ತದೆ. ಈ ವಿವರಗಳ ಹೊಂದಾಣಿಕೆಯಲ್ಲಿ ಅದೃಷ್ಟ ಸೌಂದರ್ಯ ವ್ಯಂಜಿತವಾಗುತ್ತದೆ.

ಪಿಳುಕಿಸದ ಸಿರಿಗಣ್ಣು ಸುತ್ತು ಚಿನ್ನದ ರೇಖೆ
ಬೆಳ್ಳಿ ಮಿರುಗಿನ ಮೈಯ ಕಾಂತಿ ನಿನಗೆ
ತಿಳಿಗಂಗೆ ನಿಮ್ಮ ಮೀನ ಮಾರುತಿ ತಿಳಿಸು

ನನ್ನೊಡೆಯನಡಗಿರುವನ ಕಡೆಗೆ?

ಮೀನಿನ ಅನಿಮಿಷ ದೃಷ್ಟಿಗೆ ನಲ್ಲ ಒಮ್ಮೆಯಾದರೂ ಕಂಡಿರಬೇಕು. ಮೀನ ಬೆಳಕಿನ ಮುದ್ದೆಯಾಗಿರುವುದರಿಂದ ಕತ್ತಲಲ್ಲಿಯೂ ನೋಡಬಹುದು. ಕಣ್ಣಿಗೆಕಾಣುವ ಮೀನಕಣ್ಣಿಗೆ ಬೀಳದ ನಲ್ಲನನ್ನು ತೋರಿಸಬೇಕು. ಹೀಗೆಯೇ, ಗಿಣಿರಾಮ, ಬನದೇವಿ, ಭೂಮಿ, ಆಕಾಶ ಮೊದಲಾದ ಸೃಷ್ಟಿಯ ವಿವರಗಳಲ್ಲಿ ದೇವರ ಅಂಶ ಮತ್ತು ಕಾಂತಿಯನ್ನು ಕಂಡು ದೇವರನ್ನು ಹುಡುಕುವ ಪ್ರಯತ್ನ ಇಲ್ಲದೆ."[೨೮]

೪. ಮಧುರಚೆನ್ನರು: ಎಸ್.ಎಸ್. ಮಾಳವಾಡ

ನವೋದಯ ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಮಧುರಚೆನ್ನರನ್ನು ಗುರುತಿಸುತ್ತಾರೆ. ಅಕ್ಕನೊರ ವೈರಾಗ್ಯದ ಸಿದ್ಧಾಂತವನ್ನು ತಮ್ಮ ಜೀವನದುದ್ದಕ್ಕೂ ರೂಪಿಸಿಕೊಂಡ ಮಧುರಚೆನ್ನರು ಅವರ 'ನನ್ನ ನಲ್ಲ' ಕವನ ದೈವಿ ಅನುಭವ ಸಾಧನೆಯ ಅಭಿವ್ಯಕ್ತಿಯದ್ದು, ದೇವನಿಗಾಗಿ ಮೀಸಲಿಟ್ಟ ಸಾಹಿತಿಯಾಗಿದ್ದಾರೆ. ಪ್ರಕೃತಿಯ ಚೆಲುವು, ರಹಸ್ಯ, ದೇಶ ಪ್ರೇಮ ಇತ್ಯಾದಿ ಮಾನವೀಯ ಭಾವನೆಗಳು, ಸಾಮಾಜಿಕ ಪ್ರಜ್ಞೆ, ಜೀವನದರ್ಶನ, ದೇವನ ಬಗ್ಗೆ ಅಭೀಪ್ಸು, ದೃಷ್ಟಿಯುಳ್ಳದ್ದಾಗಿದೆ ಆಧುನೀಕ ಕನ್ನಡ ಕವಿತೆ. "ಆಧ್ಯಾತ್ಮಿಕವೇ ನಿಚಿತ. ಪ್ರಯೋಜನವೆನಗೆ" ಎಂಬ ಕವಿ ರತ್ನಾಕರವರ್ಣಿಯ ಉಕ್ತಿಯ ಮಧುರ ಚೆನ್ನರ ಜೀವದಲ್ಲಿ ಕವಿತೆಯಲ್ಲಿ ಸಾರ್ಥಕವಾಗಿ ಪರಿಣಮಿಸಿದೆ."[೫೯]

ಎಸ್.ಎಸ್. ಮಾಳವಾಡರು ಮಧುರಚನ್ನರ ಜೀವನಕ್ರಮವನ್ನು ಕವಿತೆಗಳ ಮೂಲಕ ಯಥಾವತ್ತಾಗಿ ನಿರೂಪಿಸಲು ಹೊರಟಿರುವುದು ಸ್ಪಷ್ಟವಾಗಿ ಕಾಣುತ್ತದೆ. (ಪೂರ್ವರಂಗ ಕೃತಿಯಲ್ಲಿ ಮಧುರ ಚೆನ್ನರು ನಿರೂಪಿಸಿದ ಹಾಗೆ ಆಧ್ಯಾತ್ಮದ ಪರಮೋಚ್ಚ ಉತ್ಕಟತೆಯು ಅನುಭವವನ್ನು ನಿರಾಸೆಯು ಮನಪ್ಪಿನ ನಿರಾಸೆಯಾಗಿ ಆತ್ಮವನ್ನು ಕೊನೆಗೊಳಿಸಿಕೊಳ್ಳುವ ನಿರ್ಧಾರಕ್ಕೆ ಬಂದರು. ಈ ಒಂದು ಮುಖವನ್ನು ನನ್ನ ನಲ್ಲದ ಕವಿತೆಯ ಎರಡನೆ ಎಸಳಲ್ಲಿ ಮೂಡಿಸಲಾಗಿದೆ.)

"ಗಿಣಿನೆ ವಯಸ್ಸಿನಲ್ಲಿ ಇವರು ಪ್ರಚಂಡ ನಾಸ್ತಿಕರಾದರು ಇದನ್ನು ಸಲಿಗೆಯ ಸಲ್ಲಾಪ ಎಂಬ ಇವರ ಕವನದಲ್ಲಿ ಗಮನಿಸಬಹುದು.

ಇರವೆಯೋ ಇಲ್ಲೋ ನನಗೆ ನಿನಿಸವು ಇದ್ದರೆ ಹೆಣ್ಣೆಯೇನು
ಇರುವೆಯೆಂದು ಸುಮ್ಮನೆ ಎನಲು ನಿಮ್ಮ ಪುನಃ ರಿಣವೇನು

ಈ ಸಾಲುಗಳಲ್ಲಿ ಇರುವಿಕೆ ಮತ್ತು ಇಲ್ಲದಿರುವಿಕೆ ನಂಬಿಕೆ ಅಪನಂಬಿಕೆಯನ್ನು ಒಂದು ಜವಾಬ್ದಾರಿಯನ್ನು ದೃಶ್ಯರೂಪದಲ್ಲಿ ಕಾಣದೆ ಇದ್ದರೂ ಪರೋಕ್ಷವಾಗಿ ಲೀಲೆಗಳನ್ನು ತೋರಿಸಲು ಗಂಟೇನು ಕಳೆದುಕೊಳ್ಳುವಿ.

ಹಿಂದಿನ ಕತೆಗಳು ಹೊಗಳುವವಲ್ಲೊ ನಿನ್ನಯ ಕೀರ್ತಿಯನು
ಇಂದಿನ ಜಗದಲಿ ಮಾಡಿತೋರಿಸೋ ಆ ಶತ ಕೀರ್ತಿಯನು

ಅದೃಶ್ಯ ರೂಪದಲ್ಲಿರುವ ನಿನ್ನನ್ನು ಹಿಂದಿನ ದಾಸರು, ಭಕ್ತರು ಧರ್ಮಗ್ರಂಥಗಳು, ಭಗವದ್ಗೀತೆ ಮುಂತಾದ ಕೃತಿಗಳಲ್ಲೆಲ್ಲಾ ಹೊಗಳುತ್ತಾ ಬಂದಿರುವಾಗ ಇಂದಿನ ಜಗತ್ತಿನಲ್ಲಿ ದೈವಲೀಲೆಗಳನ್ನು ಪಾಯಲ್ಲಿ ಬ್ರಹ್ಮಾಂಡವನ್ನು ತೋರಿಸು ಎಂದು ಸವಾಲು ಹಾಕುತ್ತಾರೆ.

ನೋಡಿ ನೋಡಿ ಜಗದ ಮನದಾಸೆಯ ಅಡಗುವುದು
ಖೋಡಿ ಗುಣವ ನಿನಗಾರು ಕಲಿಸಿದರು ಕಾಣದೆ ಅಡಗುವುದು

ದರ್ಶನದ ಅಭಿಲಾಷೆ, ಅಪೇಕ್ಷೆಯನ್ನು ಇಟ್ಟುಕೊಂಡವರು ಬೇಸರಪಟ್ಟುಕೊಳ್ಳುವರು ಹುಚ್ಚು ಗುಣವನ್ನು ಬುದ್ಧಿಯನ್ನು ಕಲಿಸಿದವರಾರು ಎಂದು ವ್ಯಂಗವನ್ನು ಮಾಡುತ್ತಾರೆ.

ಧಾರ್ಮಿಕರೆಂಬುವ ಧರ್ಮಗೇಡಿಗಳು ಜಗದಲಿ ತುಂಬಿದರು
ಧರ್ಮದ ತಂದೆಯ ಇಂಥ ಮಾದರೆ ಯಾತಕೆ ನಂಬುವರು

ಧರ್ಮದ ಅರ್ಥವೇ ತಿಳಿಯದ ಧರ್ಮಾಂಧರು. (ಪುರೋಹಿತಶಾಹಿಗಳು) ಸಮಾಜದಲ್ಲಿರುವಾಗ, ಧರ್ಮವನ್ನು ಕಾಯುವ ನೀನೆ ನಿರ್ಲಿಪ್ತನಾಗಿರುವಾಗ ನಂಬುವರಾರು? ಏತಕ್ಕೆ ನಂಬುವರು ಎಂಬ ಈ ಪದ್ಯದ ಸಾಲುಗಳು ಜ್ಞಾನಭಿಕ್ಷು ನಾಸ್ತಿಕನಾಗಲು ವೈರ ಭಕ್ತಿಯನ್ನು ಬೆಳೆಸಿಕೊಳ್ಳಲು ಮತ್ತು ಸವಾಲು ಹಾಕುವ ಮೂಲಕ ಅಹವಾಲು ಬೇಡುವ, ಮನದ ಬೇಸರಿಕೆಯನ್ನು ವ್ಯಕ್ತಪಡಿಸುತ್ತಾರೆ."[೩೦]

"ಮಾವು ಬೇವಾಯ್ತಿನಗೆ ಸಿಹಿಯು ಕಹಿಯಾಯ್ತಿನಗೆ,
ಕೊಳು ನೀರೆನಗೆ ನಂಚಾಯ್ತು ತಾಯಿ
ಜೀವ ಸಾಕಾಯ್ತುನಗೆ ಸಾವು ಬೇಕಾಯ್ತುನಗೆ

ಆಧ್ಯಾತ್ಮದ ಪರಮೋಚ್ಚ ಉತ್ಕಟತೆ ಅನುಭವವು ನಿರಾಸೆಯು ಮನಸ್ಸಿನ ನಿರಾಸೆಯಾಗಿ ಆತ್ಮವನ್ನು ಕೊನೆಗೊಳಿಸಿಕೊಳ್ಳುವ ನಿರ್ಧಾರಕ್ಕೆ ಬಂದರು. ಈ ನಿರ್ಧಾರ ಕಾರ್ಯರೂಪಕ್ಕೆ ಫಲಿಸದೆ ಇದ್ದಾಗ ಜೀವಧಾರಣೆ ಮಾಡಿಕೊಂಡು ಪರಮಾತ್ಮನನ್ನು ಏಕೆ ಸಾಧಿಸಬಾರದೆಂದು ವಿಚಾರ ಹೊಳೆಯಿತು. ಅಂದಿನಿಂದ ಶಾಸ್ತ್ರ ವ್ಯಾಸಂಗಗಳಿಂದ ಸಾಂತ್ವಾನ ಪಡೆಯುವ ನಿರ್ಧಾರಿಸಿದರು.

ಈ ಸಮಯದಲ್ಲಿ ಶ್ರೀ ಅರವಿಂದರ ನಿರಸ್ತಂಗೀಕರಣ ವಿಚಾರ ಉಪಯುಕ್ತ ಎನಿಸಿತು. ಬಹುದಿನಗಳಿಂದ ಹಲವಾರು ಕೊಂಬೆಗೆ ಹಾರುತ್ತಿದ್ದ ಮನಸ್ಸಿನ ಬಗೆ ಬಗೆಯ ವಿಚಿತ್ರ ಚಕ್ರವನ್ನು ಸ್ಥಿಮಿತಕ್ಕೆ ತೆಗೆದುಕೊಂಡರು. ದಿನಚರಿಯಲ್ಲಿ ಧ್ಯಾನ, ಮೌನ, ಪ್ರಾರ್ಥನೆಗಳು ಸ್ಥಾನ ಪಡೆದವು. ಎಂದರೆ ಶರಣರು ಮನಸ್ಸನ್ನು ಮರ್ಕಟ ಎಂದು ಕರೆಯುವುದಾದರೆ, ಚಂಚಲತೆಯಿಂದ ಕೂಡಿದ್ದು ಹಲವಾರು ಅನಾಹುತಗಳಿಗೆ ಕಾರಣವಾಗಬಹುದು "ಖಾಲಿ ಮೆದುಳು ದೆವ್ವಗಳ ಕಾರ್ಯಗಾರ" ಇದನ್ನು ನಿಗ್ರಹಿಸಲು ಧ್ಯಾನ ಮೌನ, ಪ್ರಾರ್ಥನೆಗಳು, ಸ್ನಾನ, ಮನಸ್ಸಿನ ಸ್ಥಿಮಿತತೆಗೆ ಸಹಾಯಕವಾಗಬಲ್ಲವು ಎಂಬುದನ್ನು ಅರಿತುಕೊಂಡರು.

"ನಿಲ್ಲು ನಿಲ್ಲಲೆ ನವಿಲೆ ನನ್ನ ಕಣ್ಣೆಳೇಸು, ಕಣ್ಣ ಬಣ್ಣಗಳೇಸು ಎಣಿಸಲಾರೆ'
'ಯಾರಿಗಾರತಿ ಒಯ್ವಿ ಹೇಳೆ ನಾನು ಬರುವೆ ನನ್ನರಸ ನಿದ್ದಾನು ಅಲ್ಲಿಯಾರೆ'
'ಕೊಳದ ಬಾಂದಳದಲ್ಲಿ ಮಂಟ್‌ಗೂಡುವ ಟಿಂವಕ್ಕಿ ನೀನಾರ ಬಲ್ಲೆಯ ನಲ್ಲನೆಲ್ಲಿ"

ಈ ಎಲ್ಲಾ ಎಸಳುಗಳು ಹಲಸಂಗಿಯ ಪರಿಸರವನ್ನು ನವಿಲು ವಿಶೇಷವಾಗಿ ಕಾಣುವ ಪಕ್ಷಿಯಾಗಿರುವುದ ರಿಂದ ಮಹಾದೇವಿಯಕ್ಕ ಒಂದು ಸಂದರ್ಭದಲ್ಲಿ ಪ್ರಕೃತಿಯ ಬೇರೆ ಬೇರೆ ವಸ್ತು, ಪಕ್ಷಿ, ಪ್ರಾಣಿಗಳನ್ನು ಕುರಿತು

ತನ್ನ ಪತಿ ಮಲ್ಲಿಕಾರ್ಜುನನಲ್ಲಿ ಎಲ್ಲಿರುವನೆಂದು ಕೇಳಿದ್ದುಂಟು ಹಾಗೆಯೇ ಮಧುರಚೆನ್ನರ 'ನನ್ನನಲ್ಲ'ದಲ್ಲಿ ಬಂದ ಪ್ರಸ್ತುತ ಭಾಗ ಒಂದುರೀತಿಯ ಹುಡುಕಾಟದ ಕಾತುರತೆ ಕಂಡುಬರುತ್ತದೆ. ಇದಕ್ಕೆ ಮಹಾದೇವಿಯಕ್ಕನ ವಚನದ ಪ್ರೇರಣೆ ಇದ್ದಿರುವುದನ್ನು ಅಲ್ಲಗೆಳೆಯಲಾಗುವುದಿಲ್ಲ."[೩೧]

"ಮಧುರಚೆನ್ನರು ಸುತ್ತ ಪರಿಸರದಲ್ಲಿ ಪರಮಾತ್ಮನನ್ನು ಆರಸಿದಂತೆ ಮಾನವೀಯ ಬಾಳಿನಲ್ಲಿ ಸಾಮರಸ್ಯವನ್ನು ಪಡೆಯುವ ಹವಣಿಕೆಯನ್ನು ಇಟ್ಟುಕೊಂಡಿದ್ದು

ದೈವಲೀಲೆಯೇ ಕಾಣೆ ಕರ್ಮಜಾಲವೋ ಕಾಣೆ
ಅದು ನಮ್ಮ ಬುದ್ದಿಯಾಚೆಗಿನ ಮಾತು
ಯಾವುದೇನೇ ಇರಲಿ ಪ್ರೀತಿಯಂಥ ವಸ್ತು
ಭವದಲ್ಲಿ ಕಾಣೆ ಮನಗಂಡ ಮಾತು"

ಈಗಿನವು ಮಧುರಚೆನ್ನರ ಸ್ನೇಹಯೋಗ ಮತ್ತು ಬಾಳಿನ ಯೋಗದ ಒಳನೋಟಗಳನ್ನು ತೋರಿಸುತ್ತದೆ. "ಅವರಬಾಳು ಮಧುರವೆ ಆಗುವಂಥ ಪರಿಸ್ಥಿತಿ ಇರಲಿಲ್ಲ ಆದರೆ ಅದನ್ನು ಮಧುರವನ್ನಾಗಿ ಮಾರ್ಪಡಿಸಿಕೊಳ್ಳುವ ಸಾಧನ ಅವರದಾಗಿತ್ತು. ಆ ದಿಸೆಯಲ್ಲಿ ಜೀವನದ ವೇಹವನ್ನು ತೊರೆದು ಆತ್ಮದ ಪ್ರೇಮಸಾಧನೆಯಲ್ಲಿ ತೊಡಗಿದರು."[೩೨]

"ಮಧುರಚೆನ್ನರ ಐಹಿಕ ಜೀವನ ಹೂಚೆಲ್ಲಿದ ಹಾದಿಯಾಗಿರಲಿಲ್ಲ ನಿಜ, ಆದರೆ ಅದು ಬೆಳಕಿನ ಹಾದಿಯಾಗಿತ್ತು."

"ಇವರ ಜೀವನದ ವ್ಯಕ್ತಿತ್ವವು ಬಡತನದ ಜೀವನ, ಕುಗ್ರಾಮ ಹಳ್ಳಿಗರ ಸಹಾಯವಾದ ಅನಾರೋಗ್ಯ, ಸಂಸಾರದ ತಾಪತ್ರಯ ಇವುಗಳ ಮಹತ್ವದಲ್ಲಿಯೆ ಮಧುರಚೆನ್ನರು ಧೀರತನದಿಂದ, ಪ್ರಸನ್ನಮನೋಭಾವದಿಂದ ಬಾಳಿದರು, ವ್ಯವಹಾರದಲ್ಲಿ ನಿರುಪಯೋಗಿಯೆಂದು ಕಾಣುವ ಇವರ ಜೀವನದಲ್ಲಿ ದೈವಿ ಜೀವನದ ವೈಭವ ಸಂಪನ್ನತೆಯಿತ್ತು, ಶಿವಶರಣ ಮಾರ್ಗದ ಸಂಪ್ರದಾಯದಲ್ಲಿ ಬೆಳೆದ ಇವರು ಆಧುನಿಕ ಶರಣರಾಗಿ ಬಾಳಿದರು."[೩೩]

ಈ ಮೂರು ಅಂಶಗಳನ್ನು ನೋಡಿದಾಗ "ಮಧುರಚೆನ್ನರ ಬಾಳು ಮಧುರವೆ ಆಗಿರಲಿಲ್ಲ ಜೀವನವನ್ನು ಮಧುರವನ್ನಾಗಿ ಮಾರ್ಪಡಿಸಿಕೊಳ್ಳುವ ಸಾಧನ ಅವರದಾಗಿತ್ತು. ಮಧುರಚೆನ್ನರು, ಐಹಿಕ ಜೀವನ ಹೂಚೆಲ್ಲಿದ ಹಾದಿಯಾಗಿರಲಿಲ್ಲ. ವ್ಯವಹಾರದಲ್ಲಿ ನಿರುಪಯೋಗಿಯೆಂದು ಕಾಣುವ ಇವರ ಜೀವನದಲ್ಲಿ ದೈವಿಜೀವನದ ವೈಭವ ಸಂಪನ್ನತೆಯಿತ್ತು. ಈ ಅಂಶಗಳು ಮಧುರಚೆನ್ನರ ಕುಟುಂಬದಲ್ಲಿ ತಾಯಿಯ ಕಾರುಬಾರಿನಿಂದ ಆದ ತೊಂದರೆಗಳು ಮತ್ತು ಹೆಂಡತಿಯು, 'ನೀವು ಬೈರಾಗಿಯಾಗಿದ್ದೀರಿ ಕುಟುಂಬಕ್ಕೆ ಏನು ಮಾಡಿದ್ದೀರಿ' ಎಂದು ಸ್ಪಷ್ಟಪಡಿಸುವುದು. ಇಂತಹ ಸಂದರ್ಭಗಳಲ್ಲಿ ಆತ್ಮಾನುಭವದಿಂದ ತಾಯಿಯನ್ನು,

ಹೆಂಡತಿಯನ್ನು ಪರಿವರ್ತಿಸುವ ಮೂಲಕ ಜೀವನ ಮೇಲಿನ ಆಸೆಯನ್ನು ಬಿಟ್ಟು ಆತ್ಮದ ಸಾಧನೆಯನ್ನು ಮಾಡತೊಡಗಿದರು. ಸ್ನೇಹಯೋಗದಿಂದ ಗೆಳೆಯನಾದ ಮಂಜುಳನು ಸಂಸಾರದ ಏರುಪೇರುಗಳನ್ನು ನಿಯಂತ್ರಿಸುತ್ತಿದ್ದ ಈ ಅಂಶಗಳನ್ನು ಹೊರಹಾಕುತ್ತವೆ.

ಬೆಳಕಿನ ಹಾದಿಯಾಗಿತ್ತು ಎಂಬಲ್ಲಿ ಇವರ ಜೀವನ ಶ್ರೀ ಅರವಿಂದರ ಮತ್ತು ಶರಣರ ಯೋಗ ಸಮನ್ವಯ ಮಾಡಿಕೊಂಡು ಆತ್ಮಾನುಸಂಧಾನ ಮಾಡಿಕೊಳ್ಳುವ ಕ್ರಿಯೆಯು ನಡೆಯುತ್ತಿತ್ತು, ದೈವಜೀವನದ ವೈಭವ ಸಂಪನ್ನತೆಯಿತ್ತು, ಶಿವಶರಣ ಮಾರ್ಗ ಸಂಪ್ರದಾಯದಲ್ಲಿ ಬೆಳೆದ ಇವರು ಆಧುನಿಕ ಶರಣರಾಗಿ ಬಾಳಿದರು.

"ಸಾಧುಗಳ ವ್ಯಾಮೋಹ, ಶಾಸ್ತ್ರ ಜಾಲ, ಇವುಗಳಿಂದ ಭ್ರಮನಿರಸನಗೊಂಡ ಮಧುರಚನ್ನರು ತಮ್ಮ ೨೪ನೆಯ ವಯಸ್ಸಿನಿಂದ ಸ್ವಾನುಭಾವದ ಆತ್ಮಾನುಸಂದಾನದಲ್ಲಿ ತೊಡಗಿದರು. ಒಂದೆರಡು ವರುಷಗಳ ನಂತರ ದೀರ್ಘವಾದ ರೋಗ ಇವರನ್ನು ಆವರಿಸಿತು ಸಂಕಟಗಳು ಆತ್ಮದ ಕಚ್ಚನ್ನು ಹೆಚ್ಚಿಸಲೆಂದೆ ಬರುತ್ತಿರಬೇಕು. ಇದನ್ನು ನೊಂಪಿ ಕವಿತೆಯಲ್ಲಿ ನೋಡಬಹುದು."[೩೪] ಯಾವುದೇ ಜೀವನದ ಕಷ್ಟಗಳು ಆತ್ಮೋನ್ನತಿಗಾಗಿಯೆ ಆವರಿಸುತ್ತವೆ, ಕಾಡುತ್ತವೆ, ಎಂದು ಹೇಳಬಹುದು. ಹಾಗೂ ಕಷ್ಟದ ಪರಿಸ್ಥಿತಿಯನ್ನು ಧನಾತ್ಮಕವಾಗಿ ಆಲೋಚಿಸುವ ಕ್ರಮವು ಇಲ್ಲಿದೆ. "ದೇವನ ಅಸ್ತಿತ್ವದ ಬಗೆಗಿದ್ದ ಸಂದೇಹವೇನೂ ಅಳಿಯಿತು. ದೈವಿಕೃಪೆಯ ಬಗೆಗೆ ಇರುವ ಸಂದೇಹ ಅನುಭಾವಿಗಳ ಜೀವನದಲ್ಲಿ ಕಾಳರಾತ್ರಿ ಯೋಗಿ ಪರಿಣಮಿಸುತ್ತದೆ, ಎಂದು ಸಮರ್ಥವಾದ ರೀತಿಯಲ್ಲಿ ವಿವೇಚಿಸಿದ್ದಾರೆ."[೩೫]

"ಮಧುರಸಂಗದ ಸ್ನೇಹಿತ, ಇಚ್ಚೆಯನರಿ ವಸಷಿ, ಇವರಲ್ಲಿಯ ಆತ್ಮಜಾಗೃತಿ ಆಗುವಂತೆ ಅವರ ಅಂತರ್ಮಾನಸ ಅರಳುವಂತೆ ಸಮರಸ ಜೀವನದ ಸಾಧನೆಯನ್ನು ಮಧುರಚೆನ್ನರು ಕೈಗೊಂಡರು. ಅದೇ ಜೀವನದ ಪ್ರತಿರೋಧ ಶಕ್ತಿಗಳು ಎದ್ದು ನಿಂತು ಕಾಪಾಡತೊಡಗಿದವು. ಈ ಹೊಸದೃಷ್ಟಿಯನ್ನು ಅರ್ಥ ಮಾಡಿಕೊಳ್ಳದ ತಾಯಿಯ ಕಲಹ ಎಂದಿನಿಂದಲು ಸಂಗಾತಿಯಾದ ಅನಾರೋಗ್ಯ, ಜೀವನದಲ್ಲಿ ಮತ್ತೆ ಮತ್ತೆ ಎದುರಿಸಬೇಕಾದ ಸಾಮಾಜಿಕರ ಅಸಪನೆ ಇವುಗಳ ತೊಡಕು ಇದ್ದರೂ, ಎದುರಿಸಿ ಮಧುರಚೆನ್ನರು ಸಂಸಾರ ವೈರಾಗ್ಯಗಳನ್ನು ಸಮನ್ವಯಿಸಿಕೊಳ್ಳುತ್ತಿದ್ದರು. ಆತ್ಮಜಾಗೃತಿಯ ಐಕ್ಯ ಜೀವನದ ತಳಹದಿಯ ಮೇಲೆ ತಮ್ಮ ಜೀವನ ರಥವನ್ನು ಮುಂದೂಡಿದರು. ಹೊಸ ಆಧ್ಯಾತ್ಮಿಕ ಗ್ರಂಥಗಳು ಹೊಸ ಬೆಳಕನ್ನು ನೀಡುತ್ತಿದ್ದವು. ಅಂತರಂಗದ ಗಂಭೀರತೆಯು ಹೆಚ್ಚುತ್ತಾ ನಡೆದು ದೈವಕೃಪೆಗಾಗಿ ಅಭಿಪ್ರಾಯ ಬಲಿಯಹತ್ತಿತು. ಮೌನ ಕೋಗಿಲೆಯ ಗಾನಕ್ಕಾಗಿ ಮನವು ಹಾತೊರೆಯುತ್ತಿತ್ತು.

"ಮಧುರಚೆನ್ನರ ಕೃತಿಗಳಲ್ಲಿ, ಗದ್ಯ, ಕಾವ್ಯಗಳಲ್ಲಿ ಅಚ್ಚ ಅನುಭವ ರಾಶಿಯನ್ನು ಬಿಚ್ಚಿ ಬಯಲಿಗೆ ಇಟ್ಟಿದ್ದಾರೆ ಮತ್ತು ಪೂರಕವಾಗಿ ಕೃತಿಗಳು ಜೀವನದ ಕೈಕನ್ನಡಿಯಾಗಿ ಸಾರ್ಥಕ ಸಾಹಿತ್ಯ ಕೃತಿಯ ಜೀವಾಳವಾಗಿ ಕಂಡುಬಂದಿದೆ.

ಓದು ವಾದಗಳೆಲ್ಲಾ ಶಕ್ತಿಯುಕ್ತಿಗಳೆಲ್ಲಾ
ಮುಗಿದು ನಿಜನಿಂತದ್ದೆ ಭಾವ ಮುಕ್ತಿ

ಎನ್ನುವಹಾಗೆ ಮಧುರಚೆನ್ನರ ಬಾಳು ವಿಲಕ್ಷಣವಾದದ್ದು ಅವರ ದೀರ್ಘ ವ್ಯಾಸಂಗ ಪ್ರಯೋಗ ಪ್ರಯತೆ ಆತ್ಮದ ಕೆಚ್ಚು, ಆಂತರಿಕ ಹೋರಾಟ ಸಮರ್ಪಣ ಭಾವ ವಿನಯ. ಸ್ನೇಹಪರ ಸಫಲತೆ ಇವುಗಳಿಂದ ಕೂಡಿದ ಅವರ ವ್ಯಕ್ತಿತ್ವ ತೇಜೋಮಯವಾಗಿತ್ತು. ಇಂತಹ ವ್ಯಕ್ತಿಯ ದರ್ಶನದ ಅಭಿವ್ಯಕ್ತಿಗಿರುವ ಅವರ ಸಾಹಿತ್ಯ ಸತ್ವಯುತವಾಗಿದೆ ಅವರು ಹೊರಹೊಮ್ಮಿಸಿದ ಬೆಳಕು ಮೌಲಿಕವಾಗಿದೆ. ಆಧುನಿಕ ಕನ್ನಡ ಸಾಹಿತ್ಯಚರಿತ್ರೆ ಮಧುರಚನ್ನರಸ್ಥಾನ ಮಧುರಚೆನ್ನರಿಗಿದೆ.

ಟಿಪ್ಪಣಿಗಳು

೧. ಪಂಡಿತಾರಾಧ್ಯ ಸಾಹಿತ್ಯವಿಮರ್ಶೆ, ೧೯೯೯, ಪು.೨೦೫
೨. ರಹಮತ್ ತರಿಕೆರೆ, ಕನ್ನಡ ಸಾಹಿತ್ಯ ಮೀಮಾಂಸೆ, ಸಂ.೧, ಪು.೧೧೪, ೧೧೫
೩. ಪಂಡಿತಾರಾಧ್ಯ ಸಾಹಿತ್ಯವಿಮರ್ಶೆ, ೧೯೯೯, ಪು.೨೧೦
೪. ಪಂಡಿತಾರಾಧ್ಯ ಸಾಹಿತ್ಯವಿಮರ್ಶೆ, ೧೯೯೯, ಪು.೨೧೦
೫. ಪಂಡಿತಾರಾಧ್ಯ ಸಾಹಿತ್ಯವಿಮರ್ಶೆ, ೧೯೯೯, ಪು.೨೦೯
೬. ಪಂಡಿತಾರಾಧ್ಯ ಸಾಹಿತ್ಯವಿಮರ್ಶೆ, ೧೯೯೯, ಪು.೨೦೯
೭. ಪಂಡಿತಾರಾಧ್ಯ ಸಾಹಿತ್ಯವಿಮರ್ಶೆ, ೧೯೯೯, ಪು.೨೧೧
೮. ಪಂಡಿತಾರಾಧ್ಯ ಸಾಹಿತ್ಯವಿಮರ್ಶೆ, ೧೯೯೯, ಪು.೨೧೬
೯. ಪಂಡಿತಾರಾಧ್ಯ ಸಾಹಿತ್ಯವಿಮರ್ಶೆ, ೧೯೯೯, ಪು.೨೧೬
೧೦. ಪಂಡಿತಾರಾಧ್ಯ ಸಾಹಿತ್ಯವಿಮರ್ಶೆ, ೧೯೯೯, ಪು.೨೧೭
೧೧. ಪಂಡಿತಾರಾಧ್ಯ ಸಾಹಿತ್ಯವಿಮರ್ಶೆ, ೧೯೯೯, ಪು.೧೯೫
೧೨. ಪಂಡಿತಾರಾಧ್ಯ ಸಾಹಿತ್ಯವಿಮರ್ಶೆ, ೧೯೯೯, ಪು.೧೯೬
೧೩. ಪಂಡಿತಾರಾಧ್ಯ ಸಾಹಿತ್ಯವಿಮರ್ಶೆ, ೧೯೯೯, ಪು.೧೯೭
೧೪. ಪಂಡಿತಾರಾಧ್ಯ ಸಾಹಿತ್ಯವಿಮರ್ಶೆ, ೧೯೯೯, ಪು.೧೯೯
೧೫. ಪಂಡಿತಾರಾಧ್ಯ ಸಾಹಿತ್ಯವಿಮರ್ಶೆ, ೧೯೯೯, ಪು.೧೯೯
೧೬. ಪಂಡಿತಾರಾಧ್ಯ ಸಾಹಿತ್ಯವಿಮರ್ಶೆ, ೧೯೯೯, ಪು.೨೦೦
೧೭. ಪಂಡಿತಾರಾಧ್ಯ ಸಾಹಿತ್ಯವಿಮರ್ಶೆ, ೧೯೯೯, ಪು.೨೦೧
೧೮. ಗುರುಲಿಂಗಕಾಪಸೆ, ಆತ್ಮಶೋಧ, ೧೯೯೮, ಪು.೩೧೫
೧೯. ಗುರುಲಿಂಗಕಾಪಸೆ, ಆತ್ಮಶೋಧ, ೧೯೯೮, ಪು.೩೨೩
೨೦. ಗುರುಲಿಂಗಕಾಪಸೆ, ಆತ್ಮಶೋಧ, ೧೯೯೮, ಪು.೩೨೯
೨೧. ಗುರುಲಿಂಗಕಾಪಸೆ, ಆತ್ಮಶೋಧ, ೧೯೯೮, ಪು.೩೨೯

೨೩. ಕೀರ್ತಿನಾಥ ಕುರ್ತಕೋಟಿ, ನೂರುಮರ ನೂರುಸ್ವರ, ೧೯೯೮, ಪು.೧೭೧

೨೪. ಕೀರ್ತಿನಾಥ ಕುರ್ತಕೋಟಿ, ನೂರುಮರ ನೂರುಸ್ವರ, ೧೯೯೮, ಪು.೧೭೨

೨೫. ಪಂಡಿತಾರಾಧ್ಯ ಸಾಹಿತ್ಯವಿಮರ್ಶೆ, ೧೯೯೯, ಪು.೧೦೯

೨೬. ಕೀರ್ತಿನಾಥ ಕುರ್ತಕೋಟಿ, ನೂರುಮರ ನೂರುಸ್ವರ, ೧೯೯೮, ಪು.೧೭೩

೨೭. ಕೀರ್ತಿನಾಥ ಕುರ್ತಕೋಟಿ, ನೂರುಮರ ನೂರುಸ್ವರ, ೧೯೯೮, ಪು.೧೭೪

೨೮. ಕೀರ್ತಿನಾಥ ಕುರ್ತಕೋಟಿ, ನೂರುಮರ ನೂರುಸ್ವರ, ೧೯೯೮, ಪು.೧೭೪

೨೯. ಜಿ.ಬಿ. ಜೋಶಿ, ಕುರ್ತಕೋಟಿ, ನಡೆದುಬಂದ ದಾರಿ, ೧೯೯೬, ಪು.೨೩೬೯

೩೦. ಜಿ.ಬಿ. ಜೋಶಿ, ಕುರ್ತಕೋಟಿ, ನಡೆದುಬಂದ ದಾರಿ, ೧೯೯೬, ಪು.೨೩೭೦

೩೧. ಜಿ.ಬಿ. ಜೋಶಿ, ಕುರ್ತಕೋಟಿ, ನಡೆದುಬಂದ ದಾರಿ, ೧೯೯೬, ಪು.೨೩೭೧

೩೨. ಜಿ.ಬಿ. ಜೋಶಿ, ಕುರ್ತಕೋಟಿ, ನಡೆದುಬಂದ ದಾರಿ, ೧೯೯೬, ಪು.೨೩೭೧

೩೩. ಜಿ.ಬಿ. ಜೋಶಿ, ಕುರ್ತಕೋಟಿ, ನಡೆದುಬಂದ ದಾರಿ, ೧೯೯೬, ಪು.೨೩೭೩

೩೪. ಜಿ.ಬಿ. ಜೋಶಿ, ಕುರ್ತಕೋಟಿ, ನಡೆದುಬಂದ ದಾರಿ, ೧೯೯೬, ಪು.೨೩೭೩

೩೫. ಜಿ.ಬಿ. ಜೋಶಿ, ಕುರ್ತಕೋಟಿ, ನಡೆದುಬಂದ ದಾರಿ, ೧೯೯೬, ಪು.೨೩೭೫

ಅಧ್ಯಾಯ ೩

ಮಧುರಚೆನ್ನರ ಕೃತಿ ರಚನೆಗೆ ಕಾರಣವಾದ ಸಂಸ್ಕೃತಿಕ ಹಿನ್ನೆಲೆಗಳು

೩.೧ ಸಾಹಿತ್ಯಿಕ ಹಿನ್ನೆಲೆ

೩.೨ ರಾಷ್ಟ್ರೀಯ (ರಾಜಕೀಯ) ಹಿನ್ನೆಲೆ

೩.೩ ಸುಧಾರಣ ಪಂಥದ ಹಿನ್ನೆಲೆ

೩.೪ ವೈಯಕ್ತಿಕ ಹಿನ್ನೆಲೆ

ಮಧುರಚೆನ್ನರ ಕೃತಿ ರಚನೆಗೆ ಕಾರಣವಾದ ಸಂಸ್ಕೃತಿಕ ಅಂಶಗಳು

"ಮಧುರಚೆನ್ನರು ೧೯೭೦ರ ಸುಮಾರಿಗೆ ಸಾಹಿತ್ಯ ರಚನೆಗೆ ತೊಡಗಲು ಹಂಬಲಿಸುತ್ತಿದ್ದಾಗ ನವೋದಯ ಸಾಹಿತ್ಯ ಅದೇ ತಾನೇ ಉದಯಿಸುವುದರಲ್ಲಿತ್ತು. ಮೈಸೂರಿನ ಕಡೆಗೆ ಬಿ.ಎಂ.ಶ್ರೀ. ಅವರು ಮಂಗಳೂರಿನ ಕಡೆಗೆ ಗೋವಿಂದ ಪೈಯವರು, ಧಾರವಾಡದ ಕಡೆಗೆ ದ.ರಾ.ಬೇಂದ್ರೆ ಅವರು ಇಂಗ್ಲಿಷ್ ಮತ್ತು ಕನ್ನಡ ಕಾವ್ಯಗಳನ್ನು ಅಭ್ಯಸಿಸಿದ ಇವರು ಕನ್ನಡ ಸಾಹಿತ್ಯಕ್ಕೆ ಹೊಸ ದೀಕ್ಷೆಯನ್ನು ಕೊಡುವ ಪ್ರಯತ್ನದಲ್ಲಿದ್ದರು. ೧೯೩೧ರ ವೇಳೆಗೆ ಬಿ.ಎಂ.ಶ್ರೀ ಅವರ 'ಇಂಗ್ಲೀಷ್ ಗೀತಗಳು' ಪ್ರಕಟವಾಗಿ ಕನ್ನಡಕ್ಕೆ ಹೊಸ ದಿಕ್ಕನ್ನು ತೋರಿಸಿತು."[೧] ಆಮೇಲೆ ಕನ್ನಡ ನಾಡಿನ ಎಲ್ಲಾ ಭಾಗದ ಕವಿಗಳು ಆ ದಿಸೆಯಲ್ಲಿ ಮುನ್ನಡೆಯಲು ತೊಡಗಿದರು. ಬಿ.ಎಂ.ಶ್ರೀ. ಅವರೂ ಸಮಕಾಲೀನ ಶಿಷ್ಯರು ಇಂಗ್ಲಿಷ್ ಗೀತೆಗಳ ಮಾದರಿಯಲ್ಲಿ ಕಾವ್ಯ ಸೃಷ್ಟಿಗೆ ತೊಡಗಿ, ಬಹುಬೇಗನೆ ಕನ್ನಡ ಕಾವ್ಯಕ್ಕೆ ಹೊಸಕಂಪನ್ನು ತಂದುಕೊಟ್ಟರು. ಡಿ.ವಿ.ಗುಂಡಪ್ಪ, ವಿ.ಸೀತಾರಾಮಯ್ಯ, ಜಿ.ಪಿ.ರಾಜರತ್ನಂ, ಪು.ತಿ.ನ. ಮೊದಲಾದವರು ತಮ್ಮ ತಮ್ಮ ದಾರಿಯಲ್ಲಿ ಮುಂದುವರಿದು ನವೋದಯ ಕಾವ್ಯವು ಸಮೃದ್ಧವಾಗಿ ಬೆಳೆಯುವಂತೆ ಯತ್ನಿಸಿದರು. ಮೈಸೂರಿನ ಕಡೆಗೆ ಹೀಗೆ ಬೆಳವಣಿಗೆಗೆ ನಡೆದರೆ ಧಾರವಾಡ ಕಡೆಗೆ ಬೇಂದ್ರೆಯವರ ಹಿರಿತನದಲ್ಲಿ ಗೆಳೆಯರ ಗುಂಪು ರೂಪುಗೊಂಡಿತು. ಅದು ಮಧುರಚೆನ್ನ, ಆನಂದಕಂದ, ವಿನಾಯಕೃಷ್ಣ ಗೋಕಾಕ ಮೊದಲಾದ ಕವಿಗಳಿಗೆ ಸ್ಫೂರ್ತಿ ಮತ್ತು ಪ್ರೇರಣೆಯನ್ನು ನೀಡಿತು.

"ನವೋದಯ ಕಾಲದ ಆರಂಭದಲ್ಲಿ ಸಾಮಾನ್ಯವಾಗಿ ಎಲ್ಲ ಕಡೆಗೆ ಒಲವು ಒಂದೇ ರೀತಿಯಾಗಿದ್ದಿತೆಂದು ಕಾಣುತ್ತದೆ. ಈ ವಿಷಯವನ್ನು ಕುರಿತು ಆಲೋಚಿಸಿದ ಎಸ್.ಅನಂತನಾರಾಯಣರು "ಈ ಕಾಲದ ಎಲ್ಲಾ ಸಮಸ್ಯೆಗಳು ಎಲ್ಲ ಕಡೆಯಲ್ಲಿಯೂ ಒಂದೇ ತರಹವಾಗಿದ್ದವೆಂದು ಹೇಳಬಹುದು. ಹೊಸ ಛಂದಸ್ಸಿನ ಪ್ರಯೋಗದ ಸಾಧ್ಯ ಸಾಧ್ಯತೆ ಹೊಸ ರೀತಿಯ ಭಾವಗಳನ್ನು ಅಭಿವ್ಯಕ್ತಗೊಳಿಸುವುದು, ಹೊಸ ಭಾಷೆಯ ಪ್ರಯೋಗ ಮತ್ತು ಹೊಸ ಶೈಲಿ, ಪ್ರಾಸ ಮುಂತಾದವುಗಳ ವಿಚಾರ- ಇವೇ ಎಲ್ಲಾ ಕಡೆಗಳಲ್ಲಿಯೂ ಎದ್ದುಸಿಂತ ಸಮಸ್ಯೆಗಳು" ಎಂದಿದ್ದಾರೆ. ಈ ಸಮಸ್ಯೆಗಳಿಗೆ ಪರಿಹಾರ ನೀಡಿದ್ದು 'ಇಂಗ್ಲೀಷ್ ಗೀತೆಗಳು' ಎಂದು ಹೇಳಬಹುದು. ಆವರೆಗೆ ಹಳೆಯ ಛಂದಸ್ಸಿನಲ್ಲಿಯೇ ಹೊಸ ಭಾವನೆಗಳನ್ನು ಅಭಿವ್ಯಕ್ತ ಪಡಿಸುತ್ತಿದ್ದ ಕವಿಗಳು ಅನಂತರ ಹೊಸ ರೀತಿಯಲ್ಲಿ ಬರೆಯಲು ಆರಂಭಿಸಿದ್ದುದು ಕಂಡುಬರುತ್ತದೆ. ಈ ಶತಮಾನದ ಮೂರನೆ ದಶಕದಲ್ಲಿ ಕಾವ್ಯಸೃಷ್ಟಿಗೆ ತೊಡಗಿದ ಎಲ್ಲಾ ಕವಿಗಳು ಹೊಸ ಛಂದಸ್ಸಿನಲ್ಲಿ ಹೊಸರೀತಿಯನ್ನು ಅನುಸರಿಸಿದ್ದುದನ್ನು ಕಾಣಬಹುದು."[೨]

ಹೀಗೆ ಛಂದಸ್ಸಿಗೆ ನಾವೀನ್ಯತೆಯನ್ನು ನೀಡಿದ ನವೋದಯ ಕಾವ್ಯ ಮುಖ್ಯವಾಗಿ ಭಾವಗೀತ ಪ್ರಕಾರವಾಗಿದೆ. ಅಥವಾ ನವೋದಯ ಕಾವ್ಯವೆಂದರೆ ಭಾವಗೀತದ ಪ್ರಕಾರವೇ ಎಂದು ಹೇಳಬೇಕು. ಸುನೀತ, ಮುಕ್ತಕ, ಸೀಸ ಪದ್ಯ ಮುಂತಾದವುಗಳು ಈ ಪ್ರಕಾರದ ವಸ್ತು ವೈವಿಧ್ಯವನ್ನು ಸಾಧಿಸಲು ತುಂಬಾ ಪ್ರಯೋಜನವಾಗಿದೆ. ಈ ಸಂಪತ್ತಿನ ಹೆಚ್ಚಳಕ್ಕೆ ಕಾರಣವಾದವರಲ್ಲಿ ಮಧುರಚೆನ್ನರು ಒಬ್ಬರು. "ಮಧುರಚೆನ್ನರ ಕಾವ್ಯದ ಉಸಿರು ಆಧ್ಯಾತ್ಮ; ಕಾವ್ಯದ ಉಸಿರು ಅದೇ. ಅವರ ಸಾಧನೆ, ಸಿದ್ಧಿಗಳ ವಸ್ತುವಾಗಿರುವ ಅವರ ಅನುಭಾವಕಾವ್ಯ ನವೋದಯ ಕಾವ್ಯದ ಒಂದು ವಿಶಿಷ್ಟ ಕೊಡುಗೆಯಾಗಿದೆ ಎಂದು ಮಾತ್ರ ಹೇಳಬಹುದು. ಹಾಗೆಂದ ಮಾತ್ರಕ್ಕೆ ಅವರೊಬ್ಬರ ಹೊಸಗನ್ನಡಕ್ಕೆ ಅನುಭಾವ ಕಾವ್ಯ ಕೊಟ್ಟವರು ಎಂದರ್ಥವಲ್ಲ. ಉಳಿದ ಅನೇಕ ಕವಿಗಳೂ ಅನುಭಾವಕ್ಕೆ ಸಂಬಂಧಿಸಿದಂತೆ ಹಲವಾರು ಕವಿತೆಗಳನ್ನು ಬರೆದಿದ್ದಾರೆ. ಆದರೆ ಅವರಿಗೆ ಮಧುರಚೆನ್ನರಂತೆ ಅದೇ ಪ್ರಧಾನವಾದ ಕಾವ್ಯೋದ್ದೇಶವಾಗಿರಲಿಲ್ಲ. ಉಳಿದೆಲ್ಲಾ ಕಾವ್ಯದ ಸೃಷ್ಟಿಯಂತೆ ಈ ಬಗೆಯ ಕಾವ್ಯ ಸೃಷ್ಟಿಯನ್ನು ಅವರು ಮಾಡಿದ್ದಾರೆ. ಹಾಗೆ ನೋಡಿದರೆ "ಪ್ರತಿಯೊಬ್ಬ ಕವಿಯಲ್ಲಿ ಅನುಭಾವಿಯ ಅಂಶ ಇದ್ದೇ ಇರುತ್ತದೆ."[೩] ಇದು ಸಾಹಿತ್ಯಿಕ ಹಿನ್ನೆಲೆಯಾಗಿದೆ.

ಇನ್ನೊಂದೆಡೆ ರಾಜಕೀಯ ಸ್ವರೂಪದ ರಾಷ್ಟ್ರೀಯ ಚಳುವಳಿಗಳು ಮತ್ತು ಕರ್ನಾಟಕ ಏಕೀಕರಣದ ಹಿನ್ನೆಲೆಯು ಒಂದು ಅಂಶವಾಗಿದ್ದಿತು. ಈ ಅಂಶವನ್ನು ಆತ್ಮಕಥನದಲ್ಲಿ ದಾಖಲಿಸಿರುವುದನ್ನು ಕಾಣಬಹುದು. "ಇಷ್ಟು ಹೊತ್ತಿಗೆ ನಾಡಿನ ತುಂಬೆಲ್ಲಾ ಜನಜಾಗೃತಿಯ ಕಾರ್ಯಭರದಿಂದ ಏರಹತ್ತಿತು ಆಗ ಮಧುರಚೆನ್ನರಿಗೆ ಅದರ ಗಾಳಿ ಸೊಂಕದೆ ಬಿಡಲಿಲ್ಲ. ಆಗ ಈತನೆಂದುಕೊಂಡನು. ಈಗೇನು ಮಾಡುವುದು? ನನ್ನ ವೈಯಕ್ತಿಕ ಆಸೆ ಆಕಾಂಕ್ಷೆಗಳಂತೂ ಯಾವುವು ಉಳಿಯಲಿಲ್ಲ. ಇನ್ನು ಮುಂದೆ ಬದುಕಿ ಇರುವುದು ಲೋಕಕ್ಕಾಗಿ ಹಾಗಾದರೆ ಈಗ ಎರಡು ಕರ್ತವ್ಯಗಳು ಕಣ್ಣೆದುರಿಗೆ ಕಟ್ಟಿಡುತ್ತವೆ. ೧. ಅರವಿಂದರ ಸಾನಿಧ್ಯವನ್ನು ಸಂಪಾದಿಸಿ ಹೆಚ್ಚಿನ ಅವಸ್ಥೆಗೆ ಏರುವುದು ಇನ್ನೊಂದು ಸದ್ಯದ ಜನಜಾಗೃತಿಯ ಕಾರ್ಯದಲ್ಲಿ ಭಾಗವನ್ನು ತೆಗೆದುಕೊಳ್ಳುವುದು.

ಇವೆರಡರಲ್ಲಿ ಮೊದಲನೆಯದು ದುಸ್ಸಾಧ್ಯ. ಆದುದರಿಂದ ಎರಡನೆಯದೇ ಇರಲಿ ಎಂದು ಅದನ್ನು ಆರಿಸಿಕೊಂಡರು. ಆಗ ಫ್ರೆಂಚ್ ಆಪೆಳಿತನದಲ್ಲಿದ್ದ ಪಾಂಡಿಚೆರಿಗೆ ಹೋಗಲು ರಾಜಕೀಯ ತೊಂದರೆ ಇತ್ತು. ಅಲ್ಲದೆ ಶ್ರೀ ಅರವಿಂದರ ದರ್ಶನಕ್ಕೆ ಅವರ ಅಪ್ಪಣೆ ದೊರಕಿಸುವುದು ಆಗ ತುಂಬಾ ಕಷ್ಟದಾಯಕವಾಗಿತ್ತು. ಒಬ್ಬೊಬ್ಬರು ವಿಫಲವಾಗಿದ್ದರು. ಇದನ್ನರಿತ ಮಧುರಚೆನ್ನರಿಗೆ ಆಗ ಅದು ತುಂಬಾ ದುಸ್ಸಾಧ್ಯ ಎನಿಸಿತು. ಎರಡನೆಯದಾದ ಜನಜಾಗೃತಿಯ ಕಾರ್ಯವು ಸುಲಭವಾಗಿರಲಿಲ್ಲ. ತಲೆತಲಾಂತರಗಳಿಂದ ತಳವೂರಿದ್ದ ಮೂಢನಂಬಿಕೆಗಳನ್ನು ತೊಡೆದು ಹಾಕುವಷ್ಟು ಕಠಿಣಕಾರ್ಯ ಭಾರತದಲ್ಲಿ ಬಹುಶಃ ಇನ್ನೊಂದಿಲ್ಲ. ಶತಶತಮಾನಗಳಿಂದ ಅನೇಕ ಮಹಾಪುರುಷರು ಈ ದಿಸೆಯಲ್ಲಿ ಹೋರಾಡುತ್ತ ಬಂದಿದ್ದಾರೆ. ಅದರ ಪರಿಣಾಮವಾಗಿ ಎಷ್ಟೊ ಸುಧಾರಣೆಯಾಗಿದ್ದರೂ ಅರ್ಥಹೀನ ಸಂಪ್ರದಾಯಗಳು ಬೇಕಾದಷ್ಟಿವೆ. ಮಧುರಚೆನ್ನರು

ತಮ್ಮ ಪಾಲಿನ ಕರ್ತವ್ಯವನ್ನು ನಿರ್ವಹಿಸಲು ಅಂದರೆ ಜನಸಾಮಾನ್ಯರ ಪರಂಪರಾಗತರೂಢಬುದ್ಧಿಯನ್ನು ಮಾರ್ಪಡಿಸುವ ಕಾರ್ಯಕ್ಕೆ ಟೊಂಕಕಟ್ಟಿನಿಂತರು 'ಕಾಲವೇ ದೇವರು' ಎಂದು ಅವರು ಕಂಡುಕೊಂಡ ಹೊಸ ಸತ್ಯದ ಬೆಳಕಿನಲ್ಲಿ ಕಾರ್ಯಕ್ಕೆ ಆಣಿಯಾದರು."[೪]

"ಇದೇ ಸಮಯದಲ್ಲಿ ಅಖಂಡ ಕರ್ನಾಟಕದ ತಿಳಿವು ಕನ್ನಡಿಗರಲ್ಲಿ ಮೂಡಿತು. ಸುಮಾರು ಒಂದು ದಶಕದಷ್ಟು ಹಿಂದೆಯೇ ಕನ್ನಡನಾಡಿನ ಐಕ್ಯತೆಯ ವಿಕೀಕರಣದ ಹೊಳಹು ಕವಿಗಳಲ್ಲಿ, ನಾಡಿನ ಹಿರಿಯರಲ್ಲಿ ಮೂಡಿತ್ತು. ಕುವೆಂಪು, ಬೇಂದ್ರೆ ಮೊದಲಾದ ಕವಿಗಳು ಕನ್ನಡನಾಡಿನ ಪ್ರಾಚೀನ ಭವ್ಯತೆಯನ್ನು, ಸದ್ಯದ ದುರ್ದೆಸೆಯನ್ನು ತಮ್ಮ ಕವಿತೆಗಳಲ್ಲಿ ಚಿತ್ರಿಸಿ, ನಾಡಜನತೆಯನ್ನು ಎಚ್ಚರಿಸಲು ಶಿಲ್ಪಿ ಸಿದ್ದವ್ವನಹಳ್ಳಿ ನಿಜಲಿಂಗಪ್ಪನವರೆಗೆ ಹಲವಾರು ಮಹನೀಯರು ಹರಿದುಹೋದ ಕನ್ನಡನಾಡನ್ನು ಒಂದುಗೂಡಿಸಲು ಪ್ರಯತ್ನ ನಡೆಸಿದ್ದರು.

ಹಲಸಂಗಿಯಲ್ಲಿ ಈ ಹಬ್ಬದ ಚಾಲಕರಾದ ಸಿಂಪಿಲಿಂಗಣ್ಣವರು, ನಂತರ ಮೆಲ್ಲನೆ ಪ್ರವೇಶಿಸಿದವರು ಮಧುರಚೆನ್ನರು. ಆದರ್ಶವಾದಿಗಳು, ಚಿಂತನಶೀಲರೂ ಆದ ಅವರು ಅರ್ಥಪೂರ್ಣವಾಗಿ ಈ ಹಬ್ಬವನ್ನು ಆಚರಿಸಲು ಒಂದು ಯೋಜನೆಯನ್ನು ರೂಪಿಸಿಕೊಂಡರು. ಅದರಿಂದಾಗಿ ಹಲಸಂಗಿಯಲ್ಲಿ "ಕರ್ನಾಟಕದಲ್ಲಿಯೇ ಪ್ರತ್ಯೇಕವಾದ ಪದ್ಧತಿಯಿಂದ ನಾಡಹಬ್ಬ ಪ್ರಾರಂಭವಾಯಿತು." ಕರ್ನಾಟಕದ ಪ್ರಾಚೀನ ಸಂಸ್ಕೃತಿಯ ಗಾಢ ವ್ಯಾಸಂಗವಿರುವ ಮಧುರಚೆನ್ನರು ನಾಡಹಬ್ಬದ ಪ್ರಾರಂಭೋತ್ಸವದಲ್ಲಿ ನಾಡಹಬ್ಬದ ಪ್ರಾರಂಭೋತ್ಸವದಲ್ಲಿ ನಾಡಹಬ್ಬದ ಮಹತ್ವವನ್ನು ಅಭ್ಯಾಸಪೂರ್ಣವಾಗಿ ಮಂಡಿಸಿದರು. "ನಾಡುನಾಡಿಗೂ ಒಂದೊಂದು ಆತ್ಮವಿದ್ದು, ಅದನ್ನು ಅಧಿದೇವತೆಯು ಧಾರಣ ಮಾಡಿರುವಳೆಂದು ಅಧಿದೇವತೆಯು ಆದಿಮಾತೆಯ ಅಂಶವೆಂದು" ನಾಡದೇವಿಯ ಅಸ್ತಿತ್ವವನ್ನು ಪ್ರತಿಪಾದಿಸದರು. ಜನತೆಯಲ್ಲಿ ಆ ದೇವಿಯ ಬಗ್ಗೆ ಭಕ್ತಿ ಹುಟ್ಟುವಂತೆ ಮಾಡಿದರು. ಅಂದಿನಿಂದ ಇಂದಿನವರೆಗೂ ಈ ಊರಿನವರು ಅದೇ ಭಕ್ತಿಭಾವದಿಂದ ನಾಡಹಬ್ಬವನ್ನು ಆಚರಿಸುತ್ತಿದ್ದಾರೆ."[೫]

ಮಧುರಚೆನ್ನರಿಗೆ ರಾಷ್ಟ್ರೀಯ ಆಂದೋಲನದ ಪ್ರಭಾವವು ತಾಕದೆ ಇರಲಿಲ್ಲ ಎನ್ನುವುದು ಸ್ಪಷ್ಟ. ಆದರೂ ರಾಷ್ಟ್ರೀಯ ಆಂದೋಲನ ಮತ್ತು ಕರ್ನಾಟಕದ ವಿಕೀಕರಣ ಇವುಗಳನ್ನು ಆಧ್ಯಾತ್ಮದ ಹಿನ್ನೆಲೆಯಲ್ಲಿ ನೋಡುತ್ತಾರೆ ಎನ್ನುವುದು ಸ್ಪಷ್ಟವಾಗಿ ಗೋಚರವಾಗುತ್ತದೆ. ಮತ್ತು ಸುಧಾರಣವಾದಿಗಳ ಪ್ರಭಾವವು ಕೂಡಾ ಮಧುರಚೆನ್ನರ ಮೇಲೆ ಬಿದ್ದಿತು ಎಂಬುದನ್ನು ನೋಡಬಹುದು.

"ನವೋದಯ ಸಾಹಿತ್ಯದ ಆರಂಭಲ್ಲಿ ಧಾರ್ಮಿಕ, ಸಾಮಾಜಿಕ ವಲಯಗಳಲ್ಲಿ ಕಂಡುಬಂದ ಸ್ವತಂತ್ರ ವಿಚಾರ ಸರಣಿಯು ಪಾಶ್ಚಾತ್ಯದಲ್ಲಿ ವ್ಯಕ್ತವಾಯಿತು. ಒಂದೆಡೆ ಪಾಶ್ಚಾತ್ಯ ವಿಷಯಗಳ ಹೊಸಬೆಳಕು. ಈ ಮಧ್ಯೆ ಸ್ವಧರ್ಮ ಹಾಗೂ ಸ್ವದೇಹದ ಕುರಿತ ಜನ್ಮಜಾತ ಅಭಿಮಾನ, ಈ ಮೂರು ಸೆಳೆತಗಳಲ್ಲಿ ಸಿಕ್ಕಿ

ಭಾರತೀಯರು ಸಿಕ್ಕಿ ಭಾರತೀಯರು ವಿಚಾರ ಮಂಥನದಲ್ಲಿ ಬಿದ್ದರು. ಬಾಲ್ಯವಿವಾಹ, ವಿಧವಾಪಸೆ, ಬಹುಪತ್ನಿತ್ವ, ಮೂಢನಂಬಿಕೆಗಳು ಇವು ತೀವ್ರ ಚರ್ಚೆಗೊಳಗಾದವು. ಸುಧಾರಕರಲ್ಲ ಈ ವಿಚಾರ ತೀವ್ರತೆಗೆ ಲೇಖನಿಯ ಪ್ರಮುಖವಾಹಿನಿಯಾಯಿತು. ಸುಧಾರಣಾವಾದಿಗಳು ವಿಶಮರಿಗಳನೆಲ್ಲನೋ ಖಂಡಿಸಿದರು. ಆದರೆ ಸುಧಾರಣವಾದಿಗಳನ್ನು ಸನಾತನಿಗಳು ಖಂಡಿಸತೊಡಗಿದರು. ಹೊಸ ಶಿಕ್ಷಣವು ಅತ್ಯಗತ್ಯವೆಂದು ಸುಧಾರಣಾವಾದಿಗಳು ಪ್ರತಿಪಾದಿಸಿದರೂ, ಪಾಶ್ಚಾತ್ಯ ರೀತಿನೀತಿಗಳ ಅಂಧಾನುಕರಣೆಯನ್ನು ಟೀಕಿಸಿದ ಪ್ರಸಂಗಗಳು ಆಗಿನ ಬರವಣಿಗೆಯಲ್ಲಿ ಕಂಡುಬಂದಿದೆ. ಆದರೂ ಮಾನವತೆಯ ಹಿನ್ನೆಲೆಯಲ್ಲಿ ಸುಧಾರಣೆಗಳ ಮಂಡನೆ ಹಾಗೂ ಸ್ವಧರ್ಮ-ಸ್ವಭಾಷೆಗಳಲ್ಲಿ ಆಸಕ್ತಿ ಇವರೆಡು ಅಂಶಗಳು ಮಾತ್ರ ಆಗಿನ ಸುಧಾರಕರಲ್ಲಿ ದೃಢವಾಗಿ ನೆಲೆಯೂರಿದ್ದವು ಮತ್ತು ಅವು ಸಾಹಿತ್ಯ ಕ್ಷೇತ್ರದಲ್ಲಿ ಫಲಿತಗೊಂಡವು.

ಸುಧಾರಣಾ ಪಂಥ ಮೊದಲು ಕಾಣಿಸಿಕೊಂಡದ್ದು ಪಶ್ಚಿಮ ಬಂಗಾಳದಲ್ಲಿ. ಅವರಿಂದ ಸ್ಫೂರ್ತಿ ಪಡೆದವರು ಇತರ ಭಾರತೀಯ ಪ್ರದೇಶಗಳಲ್ಲಿ ಕಾಣಸಿಗುವರಾದರೂ ಪ್ರಗತಿಪರ ಮನೋಧರ್ಮವು ಪ್ರತಿಯೊಂದು ಪ್ರದೇಶದಲ್ಲಿಯೂ ಕ್ರಮೇಣ ವ್ಯಕ್ತವಾಗಿ ನವೀನ ಸಮಾಜದ ಹಾಗೂ ನವೋದಯ ಸಾಹಿತ್ಯದ ನಿರ್ಮಾಣವಾಯಿತು. ಬ್ರಹ್ಮಸಮಾಜದ ಸ್ಥಾಪಕವಾದ ರಾಜರಾಂ ಮೋಹನ್‌ರಾಯ್, ಆತ್ಮರಾಮ ಪಾಂಡುರಂಗ, ದಯಾನಂದ ಸರಸ್ವತಿ, ರಾಮಕೃಷ್ಣ ಪರಮಹಂಸ, ಬಂಕಿಮಚಂದ್ರ ಚಟರ್ಜಿ, ರವೀಂದ್ರನಾಥ ಠಾಗೋರ್ ಮುಂತಾದವರ ತತ್ವ ಸಿದ್ಧಾಂತಗಳಲ್ಲಾ ಸುಧಾರಣೆಯ ಕಡೆ ಒಲವು ತೋರಿದವು. ಇವೆರಲ್ಲರ ಪ್ರಭಾವ ನೇರವಾಗಿ ನವೋದಯ ಕರ್ನಾಟಕದ ಲೇಖಕರ ಮೇಲೆ ಪ್ರಭಾವ ಬೀರಿದವು.[೬] ಮಧುರಚೆನ್ನರ ಮೇಲೆ ಅರವಿಂದರ ವಿಚಾರದ ಪ್ರಭಾವ ಬೀರಿದನ್ನು ಕಾಳರಾತ್ರಿಯಲ್ಲಿ ನೋಡಬಹುದು.

"ಗಿಣಿನೆ ವಯಸ್ಸಿನಲ್ಲಿ ಅನುಭವಿಸಿದ ತಮ್ಮೂರಿನ ಪರಿಸ್ಥಿತಿಯು ಪುನರಾವೃತ್ತಿ ಆಗದಂತೆ ನೋಡಿಕೊಳ್ಳಲು ಮುಂದಾದರು. ಯಾವ ಕೆಲಸವನ್ನೆ ಆಯಿತು. ಅದನ್ನು ಏಕೆ ಮಾಡಬೇಕು ಎಂಬ ವಿಚಾರವಿಲ್ಲದೆ ನಾವು ಅದಕ್ಕೆ ಕೈ ಹಚ್ಚಬಾರದು" ಎಂದು ಸಂಪ್ರದಾಯದಂತೆ ಜಾತ್ರೆಯ ಉತ್ಸವವನ್ನು ಮಾಡಬೇಕು ಎನ್ನುವವರಿಗೆ ಹೇಳತೊಡಗಿದರು. ಅದೇನೋ ನಾವು ಅರಿಯೆವು, ಹಿರಿಯರೇನು ದಡ್ಡರೇ? ಎಂದು ಪ್ರತಿಯಾಗಿ ಪ್ರಶ್ನಿಸುತ್ತಾ ಹಿಂದಿನ ಹಿರಿಯರ ಮೇಲೆ ಹೊಣೆ ಹಾಕುತ್ತ ತಮ್ಮದನ್ನು ಸಮರ್ಥನೆ ಮಾಡಿಕೊಳ್ಳತೊಡಗಿದರು. ನಮ್ಮ ಜನರಲ್ಲಿಯ ಸ್ವತಂತ್ರ ಆಲೋಚನಾ ಶಕ್ತಿಯ ಅಭಾವವನ್ನು ಕಂಡು ಮಧುರಚೆನ್ನರು ಕಳವಳಪಟ್ಟರು. ನಮ್ಮ ದೇಶದ ದುಸ್ಥಿತಿಗೆ ಇದೇ ಮುಖ್ಯಕಾರಣ ಎಂದು ಅವರಿಗೆ ಅನಿಸಿತು. ಇದನ್ನು ಒತ್ತಿ ಹೇಳುವ ಶ್ರೀ ಅರವಿಂದವಾಣಿ ಆಗ ಅವರಿಗೆ ನೆನಪಾಯಿತು.

"ನಮ್ಮ ನಾಡು ಬಡತನದ ಸಲುವಾಗಿ ಹೀನದೆಸೆಗೆ ಬರಲಿಲ್ಲ. ಬಂಧನದ ಸಲುವಾಗಿಯೂ ಅಲ್ಲ, ಧರ್ಮಗೇಡಿತನದಿಂದಲೂ ಅಲ್ಲ, ವಿಚಾರ ಶಕ್ತಿ ಹಾಳಾದುದರಿಂದ ಅಪಜತಿಗೆ ಇಳಿದಿದೆ. ಬಹುಜನರಿಗೆ

ವಿಚಾರ ಮಾಡುವ ಸಾಮರ್ಥ್ಯವೇ ಇಲ್ಲ. ಅದು ಕೆಲವರಿಗೆ ಇದ್ದರೆ ಅವರಿಗೆ ವಿಚಾರ ಮಾಡುವ ಇಚ್ಛೆ ಇಲ್ಲ. ಇವೆ ನಮ್ಮ ನಾಡಿನ ಹೀನದೆಸೆಯ ಕಾರಣಗಳು ಎಂಬ ಅರವಿಂದೋಕ್ತಿಯನ್ನು ಗಮನಿಸಿಕೊಂಡರು. 'ಕಾರ್ಯಕಾರಣವಾದ' ಮತ್ತು 'ಉಪಯೋಗಿತವಾದ' ಇವೆರಡು ಬೆಳೆಯದಿದ್ದರೆ ನಮ್ಮ ನಾಡಿನ ಉನ್ನತಿಯೇ ಆಗದು. ಹಿರಿಯರ ಮೇಲೆ ಹವಾಲೆ ಹಾಕುವ ಗತಿಕಾನುಕ ಬುದ್ಧಿಗೆ ದಾಸರಾಗಿರುವರೆಗೂ ನಾವು ಹೆಚ್ಚಿನ ಆಸೆ ಮಾಡಿ ಫಲವಿಲ್ಲ. ಏಕೆ ಏನು ಪ್ರಯೋಜನ ಎಂದು ಗಂಭೀರವಾಗಿ ಆಲೋಚಿಸತೊಡಗಿದರು."[೭]

೩.೪ ವೈಯಕ್ತಿಕ ಹಿನ್ನಲೆ

"ಪೂರ್ವರಂಗದ ಅರಿಕೆಯಲ್ಲಿ ಈ ಆತ್ಮಕಥೆಯನ್ನು ಬರೆಯಲು ಎರಡು ಕಾರಣ ನೀಡಿದ್ದಾರೆ. ೧. ಕನ್ನಡ ಸಾಹಿತ್ಯದಲ್ಲಿ ಈ ಬಗೆಯ ಪುಸ್ತಕಕಗಳು ಹುಟ್ಟಲ್ಲ. ೨. ಈ ವಿಷಯದ ಸಲುವಾಗಿ ನನ್ನ ಗೆಳೆಯರು ಅನೇಕ ಆರ್ಥಿಕ ಸಹಾಯ ಮಾಡಿದ್ದರಿಂದ ಅವರ ಹಣದ ಸಾರ್ಥಕತೆ ಇಷ್ಟದ ಮಟ್ಟಿಗಾದರೂ ಆಗಲೆಂಬುದು. ಕನ್ನಡ ಸಾಹಿತ್ಯದ ಬಗೆಗೆ ಅವರು ಹೇಳಿದ ಮೊದಲನೆ ಕಾರಣ ಇಲ್ಲಿ ಮಹತ್ವದ್ದು. ಅವರು ತಮ್ಮ ಸಾಹಿತ್ಯದಲ್ಲಿ ಇಂಥ ಪ್ರಕಾರವಿಲ್ಲದುದನ್ನು ತಿಳಿದಿದ್ದಾರೆ, ಅವರ ಮಾತು ಅವಸರದಗ ನಿರ್ಣಯವೇನು ಅಲ್ಲ ಅಥವಾ ಅಭಿಮಾನಕ್ಕಾಗ ಹೇಳಿದ್ದು ಅಲ್ಲ, ಬೇರೆ ಭಾಷೆಗಳಲ್ಲಿ ಅಂತಹ ಒಂದೆರಡು ಕೃತಿಗಳು ಇದ್ದಂತೆ ಕಾಣುತ್ತದೆ. "ರೋಮೆರೊಲರ ಜನಕ್ರಿಸ್ಟೋಫ್" ಈ ದಿಸೆಯಲ್ಲಿ ಎತ್ತಿಹೇಳುವಂಥದು. ಹಾಗೆಯೇ ಶ್ರೀ ವಿಜಯಗೋಸ್ವಾಮಿಯವರ 'ಮಾಯಾವತಿ ಉಪನ್ಯಾಸವು' ಗಮನಾರ್ಹ ಎನಿಸುತ್ತದೆ. ಕನ್ನಡದಲ್ಲಿ ಮಧುರಚೆನ್ನರ ಪೂರ್ವರಂಗವೆ ಮೊದಲನೆ ಕೃತಿಯಾಗಿ ನಿಲ್ಲುತ್ತದೆ.

ಮಧುರಚೆನ್ನರು ತಮ್ಮ ಆಧ್ಯಾತ್ಮಿಕ ಸಾಧನೆಯನ್ನು 'ನನ್ನ ನಲ್ಲ'ದಲ್ಲಿ ಸೋರೆಗೊಳಿಸಿದ್ದಾರೆ. ಅದರ ಅಷ್ಟು ವ್ಯಾಪಕವಾದ ವ್ಯಾಸಂಗದ ಪರಿಚಯವನ್ನು, ಆರಾಧನೆಯಲ್ಲಿ ಪಡೆದ ಶಾಂತಿ ಆನಂದವನ್ನು ಗದ್ಯ ಗ್ರಂಥಗಳಲ್ಲಿ ವಿವರಿಸುವುದು. ಅವರಿಗೆ ಸೂಕ್ತವಾಗಿ ತೋರಿದ್ದರಿಂದ ಒಂದು ನೂತನ ತಂತ್ರವನ್ನು ಬಳಸಿಕೊಂಡು ಪೂರ್ವರಂಗ ಮೊದಲಾದ ಕೃತಿಗಳನ್ನು ಸೃಷ್ಟಿಸಿದ್ದಾರೆ. ಈ ಮೂಲಕ ಕನ್ನಡಕ್ಕೆ ಒಂದು ಹೊಸಬಗೆಯ ಪ್ರಕಾರವನ್ನು ಕೊಡುವುದಗರ ಜೊತೆಗೆ ಅಪಾರವಾದ ಜ್ಞಾನಸಂಪತ್ತನ್ನು ಕನ್ನಡಗರಿಗೆ ನೀಡಿದ್ದಾರೆ."[೮]

"ಕಾಳರಾತ್ರಿಯ ಬರಹಗಾರನ ಬಿನ್ನಹದಲ್ಲಿ : "ನಾನು ಮೊದಲಿಗೆ ಕೇಳಿಕೊಳ್ಳುವುದೇನೆಂದರೆ ಅನುಭಾವಿ ಎನಿಸಿಕೊಳ್ಳುವ ಕಾರಣದಿಂದ ನನ್ನ ಆತ್ಮಕಥೆಯನ್ನು ಬರೆದಿಲ್ಲ. ಅನುಭಾವ ರಾಜ್ಯ ಅಸ್ತಿತ್ವದ ಸತ್ಯಾಸತ್ಯತೆಯನ್ನು ಅರಿಯಲು ನನ್ನಂತೆ ಬಳಲಿ ಬೆಂಡಾಗುತ್ತಿರುವ ತರುಣ ಜಿಜ್ಞಾಸುಗಳಿಗೆ ತಿಲಮಾತ್ರವಾದರೂ ಉಪಯೋಗವಾಗ ಬೇಕೆಂಬ ಉರ್ಮಿಯ ಹೊರತು ಇದಕ್ಕೆ ಅನ್ಯ ಅಹಂಕಾರದ ಸೊಕ್ಕು ಲವಲೇಶ ಮಾತ್ರವೂ ಇಲ್ಲಿ ಎಂದು ಸತ್ಯವಾಗಿ ಹೇಳುತ್ತೇನೆ."[೯]

"೧೯೩೪ರಲ್ಲಿ ಮಧುರಚೆನ್ನರ ಸಾಧನೆಯ ಮೇಲೆ ಪ್ರಭಾವ ಬೀರುವ ಎರಡು ಘಟನೆಗಳು ಜರುಗಿದವು. ೧. ವಿಜಾಪುರದ ನಾಡಿಗೆ ಬಂದ ಮಹಾತ್ಮಾಗಾಂಧಿಜಿಯವರನ್ನು ಕಂಡದ್ದು. ೨. ಋಷಿತುಲ್ಯರಾದ ಟಾಲ್‌ಸ್ಟಾಯ್ ಅವರ ಆತ್ಮನಿವೇದನೆ ಮತ್ತು ೨೩ ಕಥೆಗಳು ಅವರಿಗೆ ಓದಲು ದೊರೆತದ್ದು. ಮಹಾತ್ಮಗಾಂಧಿಯವರು ಹೇಳಿದ "ನಾನು ಪಡೆಯಬೇಕಾದುದು ಈ ಮೂವತ್ತು ವರ್ಷ ಪಡೆಯಲು ಹವಣಿಸುತ್ತಿರುವುದು ಆತ್ಮಸಿದ್ಧಿಗಾಗಿ ದೇವರನ್ನು ಕಣ್ಣಾರೆ ನೋಡುವುದಕ್ಕಾಗಿ, ಮೋಕ್ಷ ಹೊಂದುವುದಕ್ಕಾಗಿ ನಾನು ಹಾತೊರೆಯುವುದು ಆದ್ಯೆಯಪೂರ್ತಿಗಾಗಿ, ರಾಜಕೀಯ ಕ್ಷೇತ್ರದೊಳಗಿನ ನನ್ನ ಮಾತುಕತೆ ಬರವಣಿಗೆಯಲ್ಲಿ ಗುರಿಯಿಟ್ಟು ಸಾಗಿದೆ." ಗಾಂಧಿಯವರ ಇಂಥ ಹಲವಾರು ಚಿಂತನಪರ ಮಾತುಗಳು ಮಧುರಚೆನ್ನರನ್ನು ಆಕರ್ಷಿಸಿದವು. ಅಲ್ಲದೆ ಅವರ ದರ್ಶನವೂ ಅಪೂರ್ವ ಧನ್ಯತೆಯನ್ನುಂಟು ಮಾಡಿದವು. ಟಾಲ್‌ಸ್ಟಾಯ್ ಕಥೆಗಳಲ್ಲಿಯ 'ದೇವಪುತ್ರನಕಥೆ', ಅಲ್ಲಿಯ 'ಪರಿವರ್ತನೆ' ನಿನ್ನೊಳಗೆ ದೇವರ ಆತ್ಮವಿದೆ ನೋಡಿಕೋ ನಿನ್ನಂತೆ ನೆರೆಯವರೊಳಗೆಲ್ಲಾ ಅದೇ ತುಂಬಿದೆ ಎಂಬ ತತ್ವ ನಿರೂಪಣೆ, ಒಂದು ಹೊಸಕ್ಷಿತಿಜವನ್ನು ಅವರಿಗೆ ತೋರಿಸಿದಂತಾಯಿತು."[೧೦]

ಟಿಪ್ಪಣಿಗಳು

೧. ಗುರುಲಿಂಗ ಕಾಪಸೆ, ಮಧುರಚೆನ್ನರ ಜೀವನ ಹಾಗೂ ಕೃತಿ ಸಮೀಕ್ಷೆ, ೧೯೭೬, ಪು.೩೭೦

೨. ಗುರುಲಿಂಗ ಕಾಪಸೆ, ಮಧುರಚೆನ್ನರ ಜೀವನ ಹಾಗೂ ಕೃತಿ ಸಮೀಕ್ಷೆ, ೧೯೭೬, ಪು. ೩೯೧

೩. ಗುರುಲಿಂಗ ಕಾಪಸೆ, ಮಧುರಚೆನ್ನರ ಜೀವನ ಹಾಗೂ ಕೃತಿ ಸಮೀಕ್ಷೆ, ೧೯೭೬, ಪು. ೩೭೨

೪. ಗುರುಲಿಂಗ ಕಾಪಸೆ, ಮಧುರಚೆನ್ನರ ಜೀವನ ಹಾಗೂ ಕೃತಿ ಸಮೀಕ್ಷೆ, ೧೯೭೬, ಪು. ೨೪೭

೫. ಸಿಂಪಿಲಿಂಗಣ್ಣ, ಶ್ರೀ ಮಧುರಚೆನ್ನರ ಸ್ಮೃತಿಗಳು, ೧೯೭೬, ಪು. ೯೨

೬. ಶ್ರೀನಿವಾಸ ಹಾವನೂರ, ಹೊಸಗನ್ನಡ ಸಾಹಿತ್ಯದ ಅರುಣೋದಯ, ಪು. ೨೩
ಶ್ರೀನಿವಾಸ ಹಾವನೂರ, ಹೊಸಗನ್ನಡ ಸಾಹಿತ್ಯದ ಅರುಣೋದಯ, ಪು. ೨೪

೭. ಮಧುರಚೆನ್ನ, ಕಾಳರಾತ್ರಿ, ಪು. ೮೧
ಮಧುರಚೆನ್ನ, ಕಾಳರಾತ್ರಿ, ಪು. ೮೨

೮. ಗುರುಲಿಂಗ ಕಾಪಸೆ, ಮಧುರಚೆನ್ನರ ಜೀವನ ಮತ್ತು ಕೃತಿ ಸಮೀಕ್ಷೆ, ಪು. ೧೦೩

೯. ಗುರುಲಿಂಗ ಕಾಪಸೆ, ಆತ್ಮಶೋಧ, ಪು. ೨೨೩

೧೦. ಗುರುಲಿಂಗ ಕಾಪಸೆ, ಮಧುರಚೆನ್ನ ಜೀವನ ಮತ್ತು ಕೃತಿ

ಅಧ್ಯಾಯ ೪

ಮಧುರಚೆನ್ನರ ಕೃತಿಗಳ ಸಮೀಕ್ಷೆ

೪.೧ ಪೂರ್ವರಂಗ

೪.೨ ಕಾಳರಾತ್ರಿ

೪.೩ ಬೆಳಗು

೩.೧ ಪೂರ್ವರಂಗ

ಪೂರ್ವರಂಗವು ಹೆಸರೆ ಸೂಚಿಸುವಂತೆ ಮಧುರಚೆನ್ನರ ಆರಂಭದ ಸಾಧನೆಯಾಗಿದೆ. ಪೂರ್ವರಂಗವು 'ನನ್ನ ನಲ್ಲ'ದ ನಂತರ ಪ್ರಕಟವಾದರೂ ಪೂರ್ವರಂಗಕ್ಕೆ ಆಕರವಾಗಿ ಉಳಿಯುತ್ತದೆ. ಮಧುರಚೆನ್ನರ ೧೪ ವರ್ಷಗಳ ಆಧ್ಯಾತ್ಮಿಕ ಸಾಧನೆಯ ಕಥೆ 'ನನ್ನ ನಲ್ಲ'ದಲ್ಲಿ ಕಾವ್ಯಮಯವಾಗಿ ಬಂದಿದ್ದರೆ, 'ಪೂರ್ವರಂಗದಲ್ಲಿ' ಆಖ್ಯಾನದ ರೀತಿಯಲ್ಲಿ ಬಂದಿದೆ. "ಮಧುರಗೀತೆ" ಮತ್ತು ನನ್ನನಲ್ಲ ಎಂಬೆರಡು ಕವನಗಳಿಗೆ ಪೂರ್ವರಂಗ ತಕ್ಕ ಮುನ್ನುಡಿಯಾಗಿವೆ" ಎಂದು ಬೇಂದ್ರೆಯವರು ನುಡಿದುದನ್ನು ಗಮನಿಸುಬಹುದು. ಇನ್ನಷ್ಟು ಕೃತಿಯ ಒಳಗೆ ಹೊಕ್ಕು ನೋಡಿದರೆ ನೋಂಪಿಯಂಥ ಕಥೆಯ ವಸ್ತುಗಳು ಇಲ್ಲಿ ದೊರೆಯುತ್ತವೆ. ಹೀಗೆ ಅವರ ಮಹತ್ವದ ಕವಿತೆಗಳ ಸಾಮಗ್ರಿಯನ್ನು ಒಳಗೊಂಡ ಆ ಕವಿತೆಗಳ ಅಭ್ಯಾಸಕ್ಕೆ ಸಹಾಯಕವಾಗುವ ಈ ಕೃತಿಯು ಒಂದು ಮಹತ್ವ ಗ್ರಂಥವಾಗಿದೆ."[೧]

"ಈ ಹಿನ್ನೆಲೆಯಲ್ಲಿ ಅಭ್ಯಸಿಸುವಾಗ ಲೇಖಕನು ಪೂರ್ವರಂಗ ಕೃತಿಯನ್ನು ಬರೆಯಲು ಇದ್ದ ಕಾರಣವನ್ನು ಕುರಿತು ಹೇಳಿದ್ದಾರೆ. "ಹಿಂದೆ ಸ್ವಾನುಭವದ ಆತ್ಮಗೀತೆ (ನನ್ನ ನಲ್ಲ)ಯನ್ನು ಬರೆದು ಪ್ರಕಟಿಸಿದ ಅದರೆ ನಾಡಿನಲ್ಲಿ ಎಷ್ಟೋ ಜನರಿಗೆ ಅದರ ಹೊಲಬೆ ತಿಳಿಯಲಿಲ್ಲ ಅದಕ್ಕಂತಲೆ ಅವನು ಗದ್ಯದಲ್ಲೊಂದು ಆತ್ಮಕತೆ ಬರೆಯಬೇಕೆಂದು ಆಶಿಸುತ್ತಿದ್ದನು." ಈ ಅರಿಕೆ ಒಳಗಣ ವ್ಯಕ್ತಿಯ ನಿಲುವು 'ನಾನು' ಎಂಬ ನೆಲೆಯಲ್ಲಿ ಅವನು ಎಂದು ಇಡೀ ಬರಹವನ್ನು ಯಾರದೋ ಕಥನ ಎಂಬಂತೆ ತನ್ನ ಅನುಭವಗಳನ್ನು ತಕ್ಕ ದೂರದಲ್ಲಿ ಇರಿಸಿಕೊಂಡು 'ಅಹಂ' ನಿರಸನದ ಉದ್ದಕ್ಕೂ ತಮ್ಮನ್ನು ಒಬ್ಬ ಜ್ಞಾನಭಿಕ್ಷು ಎಂದು ಕರೆದುಕೊಂಡಿದ್ದಾರೆ. ಅವರು ಈ ಮೊದಲೆ ಬರೆದ ನನ್ನ ನಲ್ಲದೊಳಗೆ ಯಾವ ಅನುಭವಗಳು ತೀವ್ರ ಗಾಢವೂ ಆಗಿ ಅಭಿವ್ಯಕ್ತಿಯಾಗಿವೆಯೋ. ಆ ಅನುಭವಗಳಿಗೆ ಹಿನ್ನೆಲೆಯಾದ ತಮ್ಮ ಸಾಧಕ ಹಾಗೂ ಸಾಂಸಾರಿಕ ಜೀವನ ವಿವರಗಳನ್ನು ಯಥಾವತ್ತಾಗಿ ಈ ಆತ್ಮಕಥನದ ಮೂಲಕ ಗದ್ಯದೊಳಗೆ ಮಧುರಚೆನ್ನರು ಬರೆದಿದ್ದಾರೆ. ತಮಗೆ ಹೇಗೋ ಹುಟ್ಟಿಕೊಂಡ ಆಧ್ಯಾತ್ಮಿಕ ಹಂಬಲದ ಅನ್ವೇಷಣೆಯ ಹಾದಿಯಲ್ಲಿ ಬೆಟ್ಟಿಯಾದ ವ್ಯಕ್ತಿಗಳು, ದೊರೆತ ಮಾರ್ಗದರ್ಶನಗಳು ನಡೆಸಿದ ಸಂವಾದ ಮತ್ತು ಶಾಸ್ತ್ರಾಧ್ಯಯನಗಳು ಎದುರಾದ ವೈಥೆಗಳ ದೊರೆತ ದಿವ್ಯಾನುಭವಗಳ ಅನೇಕ ವಿವರಗಳು ದಾಖಲಾಗುತ್ತಾ ನಾವು ಯಾವುದೋ ಪ್ರಾಚೀನ ಕಾಲದ ಸಂತನೊಬ್ಬನ ಜೀವನವನ್ನು ಓದುತ್ತಿರುವಂತೆ ಭಾಸವಾಗುತ್ತದೆ. ಅಷ್ಟೆ ಅಲ್ಲ ಪೂರ್ವರಂಗ. ಕಾಳರಾತ್ರಿ ಬೆಳಗು, ಹಂತಗಳಲ್ಲಿ ನಿರೂಪಿತವಾಗಿರುವ ಮಧುರಚೆನ್ನರ ಅನುಭಾವ ಯಾತ್ರೆಯು ಜಗತ್ತಿನ ಎಲ್ಲಾ ಸಾಧುಸಂತರ ಬದುಕಿನ ಅನುಭವಗಳೊಂದಿಗೆ ಸಂವಾದಿಯಾಗುತ್ತಾ ಅವಸ್ಥೆಗಳೊಂದಿಗೆ ಹೋಲಿಸುತ್ತಾ

ಈ ಅನುಭಾವ ಎನ್ನುವುದು ಸಾರ್ವಕಾಲಿಕ ಮತ್ತು ಸಾರ್ವದೇಶಿಕವಾದ ಲಕ್ಷಣ ಪಡೆಯುತ್ತದೆ ಎಂಬುದನ್ನು ತೋರಿಸಿಕೊಡುತ್ತಾರೆ."[೨]

ಪೂರ್ವರಂಗದಲ್ಲಿ ನಾಯಕನು ಅನುಭಾವಿಗಳ ಭೇಟಿ ಪರಸ್ಪರ ಮುಖಾಮುಖಿ ನಡೆದ ಘಟನೆ, ಪರಿಣಾಮ, ನಾಯಕನ ನಿರ್ಧಾರ ಇವುಗಳ ದೃಷ್ಟಾಂತ, ಕತೆ, ಸಂವಾದ ಇವುಗಳನ್ನು ಒಳಗೊಂಡಂತೆ ಪೂರ್ವರಂಗದ ಅಧ್ಯಾಯಗಳ ಹಿನ್ನೆಲೆಯಲ್ಲಿ ನೋಡಬಹುದು. ವೈಷಮ್ಯಖಂಡ ಮತ್ತು ಸಮನ್ವಯಖಂಡ ಎಂಬ ಎರಡು ಭಾಗಗಳಿವೆ. ಒಂದೊಂದು ಭಾಗದಲ್ಲಿ ಏಳೇಳು ಅಧ್ಯಾಯಗಳಿದ್ದು, ಅವುಗಳಿಗೆ ಸ್ವತಂತ್ರವಾದ ಶೀರ್ಷಿಕೆಯನ್ನು ಕೊಡಲಾಗಿದೆ. ಒಂದು ಆಧ್ಯಾತ್ಮಿಕ ಕಥೆ ಎನಿಸುವ ಈ ಕೃತಿಯ ನಾಯಕ ಸ್ವತಃ ಮಧುರ ಚೆನ್ನರೆ ಎಂದು ಹೇಳಬೇಕಾಗಿಲ್ಲ. ಆದರೆ ಇಲ್ಲಿ ಜ್ಞಾನ ಭಿಕ್ಷುವಾಗಿ ಕಾಣಿಸಿಕೊಳ್ಳುತ್ತಾರೆ. ಅವರ ಆತ್ಮಚರಿತ್ರೆಯಲ್ಲಿ ಗುರುತಿಸಿದಂತೆ ೧೨ನೆ ವಯಸ್ಸಿಗೆ ದೇವರನ್ನು ಕಾಣುವ ಹಂಬಲವುಂಟಾಗುವುದರಿಂದ ಕಥೆ ಪ್ರಾರಂಭವಾಗುತ್ತವೆ. ಅದಕ್ಕಾಗಿ ಗುರೂಪದೇಶ ಪಡೆಯಲು ಯತ್ನಿಸಿ ವಿಮುಖರಾದ ಸಂದರ್ಭವನ್ನು ನಾಟಕೀಯವಾಗಿ ಚಿತ್ರಿಸಿರುವುದನ್ನು ನೋಡಬಹುದು "ನೀನು ದೇವರನ್ನು ನೋಡಬೇಕೆನ್ನುವೆಯಾ?" ಎಂದರು. ಈತನು ಹೌದೆನ್ನಲು "ಕುಲದೈವದ ಹೆಸರು ಹೇಳೆಂದರು' 'ಶಿವ' ಎಂದು ಹೇಳಿದನು. ಪದ್ಮಾಸನ ಹಾಕಿಸಿ ಮೂಗುತುದಿಯ ಮೇಲೆ ದೃಷ್ಟಿಯಿಡಲು ಸೂಚಿಸಿ 'ಶಿವಾಯನಮಃ' ಮಂತ್ರವನ್ನು ಭೋದಿಸಿದರು ಒಂದು ನಿಮಿಷದ ನಂತರ 'ಏನು ಕಾಣಿಸುವುದು ಎಂದು ಕೇಳಿದಾಗ' ಏನು ಕಾಣಿಸಲಿಲ್ಲ ಎಂದು ಹೇಳಿದರು. ಹಾಗೆ ಜಪಿಸೆಂದು ಹೇಳಿತುಸು ಸಮಯದ ನಂತರ ಕೇಳಿದಾಗ ಏನು ಕಾಣಿಸಲಿಲ್ಲ ಎಂದು ಹೇಳಿದರು. ಬೇಸತ್ತು ಕಾಣಿಸುವದೆಂದು ಸುಮ್ಮನೆ ಒಪ್ಪಿಕೊಂಡನು, ಮುಂದಿನ ದರ್ಶನಕ್ಕೆ ಪ್ರಯತ್ನ ನಡೆಯಿತು. ಆಗ ಅವರೇ ಒಂದು ಮೂರ್ತಿಯೂ ಕಾಣುವುದಿಲ್ಲವೆ?" ಎಂದರು ಇಲ್ಲ ಎಂದು ಹೇಳಿ ಕೊನೆಗೆ ಒಪ್ಪಿಕೊಂಡ ಆಗ ಉಭಯರು ಕೃತಾರ್ಥರಾಗಿ ಪಾರಾದರು. ಗುರುಗಳು ಶಿಷ್ಯನಿಗೆ ಹೀಗೆ ದಿನಾಲು ನೇಮಕ್ಕೆ ಕೊಡುತ್ತಿರು : ಮಹಾದೇವರು ಹೀಗೆ ದರ್ಶನ ಕೊಡುತ್ತಾರೆ" ಎಂದು ಹೇಳಿ ಮುಕ್ತನನ್ನಾಗಿ ಮಾಡಿದರು ಆಗ ಜ್ಞಾನ ಭಿಕ್ಷುವಿಗೆ ಇಂಥ ಗುರೂಪದೇಶಕ್ಕಿಂತ ತನಗೆ ತಿಳಿದಂತೆ ತಾನು ಸಾಗುವದೆ ಮೇಲೆಂದೆನಿಸಿತು ಪರಮಾತ್ಮನೆ ಪರಮಗುರು 'ಪೂರ್ವೇಷಮಪಿಗುರು'.

ಅತ್ತ ಹಂಬಲವೂ ತೀರದ ಇತ್ತ ದೇವರು ಕಾಣದ ಸ್ಥಿತಿಯಲ್ಲಿ ಮನಸ್ಸಿನಮೇಲೆ ಒತ್ತಡ ಹಾಕುವುದರಿಂದ ಒತ್ತಡದಿಂದ ತಪ್ಪಿಸಿಕೊಳ್ಳುವ ಪರ್ಯಾಯ ಮಾರ್ಗಗಳನ್ನು ಹುಡುಕುತ್ತದೆ. ವ್ಯಕ್ತಿ ವ್ಯಕ್ತಿಯ ಮಧ್ಯದ ದರ್ಶನ ವಿಧಾನಗಳು ತುಂಬಾ ವೈರುಧ್ಯಗಳಿಂದ ಕೂಡಿರುತ್ತವೆ.

ಎರಡನೆಯ ಅಧ್ಯಾಯದಲ್ಲಿ ಕಾಲ್ಪನಿಕ ದೇವರನ್ನು ಒಪ್ಪಿಕೊಳ್ಳದ ನಾಸ್ತಿಕತೆ ತಲೆದೋರಿದ ಆ ಅವೈಚಾರಿಕ ಮತ್ತು ಕಂದಾಚಾರದ ವಿರುದ್ಧ ನಿಂತ ಅವರ ಹದಿನೇಳನೆ ವಯಸ್ಸಿನ ವಿಲಕ್ಷಣಸ್ಥಿತಿ

ಪ್ರತಿಬಿಂಬಿತವಾಗಿದ್ದು ಇಲ್ಲಿ ಮೂಢನಂಬಿಕೆಗಳ ಸ್ಪಷ್ಟ ಚಿತ್ರಣವಿರುವುದನ್ನು ಮತ್ತು ಧಾರ್ಮಿಕ ಸಮುದಾಯದಲ್ಲಿ ಧರ್ಮದ ಆಚರಣೆಗಳು ಮುಖ್ಯವೆ ಹೊರತು ಆಧ್ಯಾತ್ಮ ಮುಖ್ಯವಲ್ಲ. ಎಲ್ಲಾ ಸಮುದಾಯದಲ್ಲಿ ಧರ್ಮದ ಆಚರಣೆಗಳು ಮುಖ್ಯವೆ ಹೊರತು ಆಧ್ಯಾತ್ಮ ಮುಖ್ಯವಲ್ಲ ಎಲ್ಲಾ ಸಮುದಾಯಗಳು ಆಚರಣೆಯ ಮೂಲಕ ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುತ್ತವೆ. ಆದರೆ ಕಥಾನಾಯಕ ಅವುಗಳಲ್ಲಿ ನಂಬಿಕೆ ಇಡದೆ ಆಧ್ಯಾತ್ಮ ಜೀವಿಯಾಗಲು ಬಯಸುತ್ತಾನೆ. "ಕೊನೆಯ ದಿನ ರಥೋತ್ಸವದಂದು ಇವರ ಮನೆತನದವರೆ ರಥದ ಬಲಿಯ ನೈವೇದ್ಯವನ್ನು ಹೊರಬೇಕಾಯಿತು. ಅಜ್ಞಾನಕ್ಕೆ ಗೆಲುವಿರುವುದನ್ನು ನೋಡಿ ಅತಿಶಯ ಸಂತಾಪವೇರಿತು ಕಣ್ಣೊಳಗಿಂದ ಒಂದೇ ಸಮನೆ ನೀರು ಹರಿಯುತ್ತಿದ್ದವು. ಇದನ್ನು ನೋಡಿ ಸುತ್ತಮುತ್ತಲಿನ ಜನರು 'ಆಹಾ! ದೆವ್ವ ತಟ್ಟಿಸಿತು?' ಎಂದು ಗಾಬರಿಗೊಳ್ಳುತ್ತಾ ಕುಲಗುರುವೆಂಬುವನ ಕಾಲು ತೊಳೆದು ನೀರನ್ನು ಪಾದೋದಕವೆಂದು ಕಣ್ಣಿಗೆ ಸವರಿ ಲಿಂಬಿಯ ಹಣ್ಣುಗಳನ್ನು ನಿವಾಳಿಸಿ ಕೂಗಹತ್ತಿದರು. ಹೀಗೆ ಮೂಢನಂಬಿಕೆಗಳ ಸರಮಾಲೆಗಳು ಕ್ರಮವಾಗಿ ಬರುವುದನ್ನು ನೋಡಬಹುದು."[೩]

ಮೂರನೆ ಅಧ್ಯಾಯದಲ್ಲಿ ನಾಸ್ತಿಕತೆಯಿಂದ ಆಸ್ತಿಕತೆಯಡೆಗೆ ಹೊರಳಿಕೊಳ್ಳುವ ಒಂದು ತಿರುವಾಗಿದೆ, ಇಲ್ಲಿ ವೈರಭಕ್ತಿಯ ಪರಿಣಾಮವೂ ಪೂರಕವಾಗಿ ಚಿತ್ರಿಸಿದೆ ಇದು ಅವರ ೨೧ನೆಯ ವಯಸ್ಸಿನ ಮನಸ್ಥಿತಿಯನ್ನು ಕಾಣಬಹುದು : "ಪೌರಾಣಿಕ ಕತೆಯ ಜಯವಿಜಯರ ಶಾಪ ಪ್ರಕರಣದಲ್ಲಿ ದೇವನ ದಾಸರಾಗಿ ಏಳು ಜನ್ಮ ಕಳೆಯುವಿರೋ? ಶತ್ರುಗಳಾಗಿ ಮೂರು ಜನ್ಮ ಕಳೆಯುವಿರೋ? ಎಂದು ಕೇಳಿದ ಪ್ರಶ್ನೆಯಲ್ಲಿ ಬಹಳ ಅರ್ಥವಿದೆಯೆಂದು ಹೇಳಬಹುದು. ಸಖ್ಯಕ್ಕಿಂತ ವೈರದಲ್ಲಿ ಮನಸ್ಸಿನ ಕಾರ್ಯವು ಹೆಚ್ಚಾಗಿ ಅಧತ್ಸ್ವ ನನ್ನಲ್ಲೆ ಚಿತ್ತವನ್ನಿಡು ಎಂಬ ಮಾತು ಪ್ರೇಮಭಕ್ತಿಯಂತೆ ವೈರಭಕ್ತಿಯಲ್ಲಾದರೂ ನೆರವೇರುತ್ತದೆ. ಇಷ್ಟೆ ಅಲ್ಲ ಪ್ರಿಯ ವ್ಯಕ್ತಿಗಿಂತ ಶತ್ರುವಿನ ವಿಷಯದಲ್ಲಿ ಚಿತ್ತವು ಸದಾ ಜಾಗೃತವಾಗಿರುತ್ತದೆ. ಅಧೀರಭಕ್ತರಿಗೆ ಅಸಹನೆ ಹೆಚ್ಚಾಗುವುದರಿಂದ ಅವರು ಜಗತ್ತಿನಲ್ಲಿಯ ಪರಿಪರಿಯ ವೈಷಮ್ಯಗಳಿಂದ ಜರ್ಜರಿತರಾಗಿ ವಿಶ್ವಚಾಲಕ ಶಕ್ತಿಯನ್ನು ಪ್ರಬಲವಾಗಿ ಶಪಿಸುತ್ತಿರುವದೆ ಬಹುಕಾಲದ ಕಾರ್ಯವಾಗಿ ಬಿಡುತ್ತಿರುತ್ತದೆ. ಆದರೆ ಧೀರಭಕ್ತರ ಮಾತು ಇದಕ್ಕಿಂತ ಬೇರೆಯಾದರೂ ಪ್ರಖರ ಭಕ್ತರೆ ದೇವನ ಒರೆಗಲ್ಲಾಗಿದ್ದಾರೆ ನಿರಾಶೆ ನಮ್ಮ ಜ್ಞಾನ ಭಿಕ್ಷುವಿನ ಭಕ್ತಿ ಈ ವರ್ಗದ್ದು."[೪]

ನಾಸ್ತಿಕತೆಯ ದರಿಯೊಳಗಿಂದ ಆಸ್ತಿಕತೆಯ ಶಿಖರವೇರಿದ ಇವರ ಕತೆಯು ಅದರಲ್ಲಿಯೂ ಮೂಢವಿಶ್ವಾಸವಿಲ್ಲದ ಜಾಗೃತ ಬುದ್ಧಿಯ ಸಾಧಕ ಕಥೆಯು ನಮ್ಮಜ್ಞಾನ ಭಿಕ್ಷುವಿನ ತಪ್ತಬುದ್ಧಿಗೆ ನೀರೆರೆದಿದ್ದುರಲ್ಲಿ ಆಶ್ಚರ್ಯವೇನು? ಆಗ ಈತನು 'ಆ ಜಡಶಕ್ತಿಗೆ ದೇವರೆನ್ನುವರು' ಎಂಬ ಹೃದಯದೊಳಗಿಂದ ಪಾರಾಗಿ 'ಸರ್ವಜ್ಞನಾದ ಒಬ್ಬ ದೇವರಿರಲಿಕ್ಕೆ ಬೇಕು ಎಂಬ ಗ್ರಹಿಕೆಗೆ ಬಂದನು.

"ಈ ಜಗದಲ್ಲಿ ಪೂರ್ಣತೆಗೆ ಮುಟ್ಟಿದ ಜೀವಿಗಳು ಅತ್ಯಂತ ವಿರಳವಾಗಿದ್ದು. ಅಪಕ್ವ ಜೀವಿಗಳೇ ಹೆಚ್ಚು ಆಗಿರುವುದರಿಂದ ಎಲ್ಲಿ ನೋಡಿದಲ್ಲಿ ಸ್ವಾರ್ಥ, ಅನ್ಯಾಯ ಮೋಸ ಕೊಲೆ ಕಷ್ಟ ಇಂಥ ಸೂತ್ರವೇ

ಸಿಗುವುದಿಲ್ಲ ಹೀಗಾಗಿ ಮಾನವ ಬುದ್ಧಿಯು ಭ್ರಮಿಸಿ ಹೋಗುತ್ತದೆ. ಈಗ ಜ್ಞಾನ ಭಿಕ್ಷುವಿಗೆ* ವರುಷ ಅಪನು ಧನಮಾನ ಗಳಲ್ಲೊಂದನ್ನು ತನ್ನ ಜನ್ಮದ ಧ್ಯೇಯವಾಗಿಸದೆ ಬದುಕಿರುವನಿಗೆ ಏನುಬಿಟ್ಟರು ಧರ್ಮವು ನಮ್ಮ ಬೆನ್ನು ಬಿಡದಾದ್ದರಿಂದ ಅದರ ಮೂಲ ಕೇಂದ್ರನಾದ ಪರಮಾತ್ಮನನ್ನು ಪಡೆದುಕೊಳ್ಳದೆ ಗತಿಯಿಲ್ಲ ಎಂದು ನಿರ್ಧರಿಸಿಕೊಂಡು ಭಗವದಾನು ಸಂಧಾನಕೃತ ಸಂಕಲ್ಪನಾದನು.

"ಘೋರ ಸಾಹಸದ ಅಧ್ಯಾಯದಲ್ಲಿ ಆತ್ಮಹತ್ಯೆಯ ಅಸಾಧ್ಯ ಪ್ರಯತ್ನ ನಡೆದು ಹೋಗುತ್ತದೆ. ಉದ್ರೇಕ ಪರವ್ಯಕ್ತಿಗಳ ನಿರ್ಧಾರದ ಕಟ್ಟಕೊನೆಯು ಬಹಳ ವಿಚಿತ್ರ ರೀತಿಯಿಂದ ಮುಗಿದಿರುತ್ತದೆ. ಒಟ್ಟಿಗೆ ಅವರಲ್ಲಿ ಎಲ್ಲಾ ವೃತ್ತಿಗಳೆ ಹೆಚ್ಚು ಒಂದು ರೀತಿಯಿಂದ ಇವರು ವೃತ್ತಿವಶರೇ ಹೌದು. ಕರುಣೆ ಬಂದು ಕರುಳುಕರಗಿದಾಗ ಕರ್ಣನಿಗಿಂತ ಹೆಚ್ಚು ವಾಗ್ದಾನ ಮಾಡುವರು ಆಗ ಯಾವ ಅನಾನುಕೂಲತೆಗಳು ಕಾಣಿಸುವುದಿಲ್ಲ ಏನಾದರೂ ಅಂತಹ ಅಡ್ಡಿಗಳು ಹೊಳೆದರೆ ಓ ಇವೆಷ್ಟರವು? ಏನಾದರೂ ಮಾಡಲಿಕ್ಕೆ ಬಂದೀತು?' ಎಂದು ಧೈರ್ಯ ಹೇಳಿಕೊಳ್ಳುವರು. ಅಂತೂ ವೃತ್ತಿಯ ಉದ್ರೇಕ ವಿರುವವರು ಆವೇಶದಿಂದ ಭಾಷೆ ಕೊಟ್ಟುಬಿಡುವರು ಬಳಿಕ ಆವೇಶವು. ಇಳಿದಂತೆಲ್ಲಾ ಬಗೆಬಗೆಯ ಅನನುಕೂಲತೆಗಳು; ಸಂಶಯಗಳು ಮೈದೋರಹತ್ತುವವು. ಆದರೂ ಇಂಥವರು ಒಮ್ಮೆ ಧ್ಯೇಯವಾದಿಯಾಗಿ ಬಿಟ್ಟರೆಂದರೆ, ಅಂಥ ಪ್ರಸಂಗದಲ್ಲಿ ಏನಾದರೊಂದು ಸಮಾಧಾನ ಹೇಳಿಕೊಳ್ಳುತ್ತಾ ಕಲ್ಪನೆಗಳನ್ನು ಹಿಂದಕ್ಕಟ್ಟುತ್ತಿರುತ್ತಾರೆ."[೬]

ಈಗ ನಮ್ಮ ಕಥಾನಾಯಕನಿಗೂ ಗೊತ್ತು ಪಡಿಸಿದ ಕೊನೆಯ ಗಳಿಗೆಯು ಏಳೆಂದು ಎಬ್ಬಿಸಿದೊಡನೆ ಬಗೆಬಗೆಯ ಕಲ್ಪನೆಗಳು ಕಣ್ಣಮುಂದೆ ಕಟ್ಟಿದವು. "ಆತನಿಗಾಗಿ ಆತ್ಮ ಹತ್ಯೆ ಮಾಡಿಕೊಳ್ಳಲಿಕ್ಕೆ ನಿಂತವರಿಗೆಲ್ಲರಿಗೂ ಆತನ ಸಾಕ್ಷತ್ಕಾರವಾಗುವುದು ಎಂದು ಹೇಳಲುಬರುವುದಿಲ್ಲ. ಅವನ ಸೃಷ್ಟಿಯಲ್ಲಿ ಸಾಯುವ ಪ್ರಾಣಿಗಳ ಸಂಖ್ಯೆ ಕ್ಷಣಕ್ಕೊಂದು ಅಸಂಖ್ಯ ಪದಾರ್ಥದಷ್ಟಿರಬಹುದು. ಹೀಗೆಂದ ಮೇಲೆ ಅವನಿಗೆ ಆತ್ಮಹತ್ಯೆದ ಬೆಲೆಯಷ್ಟಿದ್ದಿತು! ಆದರೆ ಜ್ಞಾನ ಭಿಕ್ಷುವಿಗೆ ಬೇರೆ ಎರಡು ಮೂರು ಉದಾಹರಣೆ ನಡೆದದ್ದು ಗೊತ್ತಿದ್ದಿತು. ತನ್ನೂರ ಸುತ್ತಮುತ್ತಲೆ ನಡೆದ ಮಾತು ಏನೇನೋ ಪುಸ್ತಕಗಳನ್ನು ಓದಿದವನೊಬ್ಬ ಕೊನೆಗೊಂದು ಶಿವರಾತ್ರಿಯ ದಿನ ಸತ್ತು ಹೋದದ್ದು ನಿಜವಾಯಿತು. ಜಪಾನದಲ್ಲೊಬ್ಬನು ಧರ್ಮ ಜೀವನದಲ್ಲಿ ನೆಲೆಗಾಣದ್ದರಿಂದ ದಬದಬೆಯ ಮೇಲಿಂದ ಜಿಗಿದು ಪ್ರಾಣಕೊಟ್ಟ ವೃತ್ತಾಂತವನ್ನು ಒಂದು ಪುಸ್ತಕದಲ್ಲಿ ಬರೆದಿತ್ತು. ಇಂಥವುಗಳೆಲ್ಲಾ ಈ ಗಳಿಗೆಯಲ್ಲಿ ಜ್ಞಾನಭಿಕ್ಷುವಿನ ಸ್ಮೃತಿಪಟಲದ ಮೇಲೆ ಮೂಡಿ, ಈತನನ್ನು ಬೆದರಿಸಿ ಹಿಂದೆಳೆಯ ಹತ್ತಿದವು. ಆಗಲು ಈತನ ವಿಪರೀತ ವಿರೋಧವಾಗಿ ಎಷ್ಟು ವಿವೇಚಿಸಿ ನೋಡಿದನು ಕೊನೆಗೆ ಸತ್ತಷ್ಟೆ. ನಿಜವಾಗಿ ಬಿಟ್ಟರೆ ಎಲ್ಲಾ ಅಲ್ಲೇ ಕೊಡುವುದಲ್ಲಾ! ಇದಲ್ಲದೆ ಈ ಹಾದಿಯಲ್ಲಿ ನಾನು ಸತ್ತರೆ. ನನ್ನ ಕಥೆಯನ್ನು ಅರಿತವರು ಈ ಹಾದಿಗೆ ಹೋಗದೆ ನಾಸ್ತಿಕರಾಗುವರಲ್ಲಾ! ಆದ್ದರಿಂದ ಜೀವಧಾರಣ ಮಾಡಿಕೊಂಡೆ ಏನನ್ನಾದರೂ ಹಂಚಿಕೆಯಿಂದ ಹಾದಿಯನ್ನು ಹುಡುಕಿಕೊಳ್ಳೋಣ ಎಂದು ನಿಶ್ಚಯಿಸಿದನು."[೭]

"ದೇವರ ಬಗೆಗಿರುವ ಕೆಲವು ವಿಚಿತ್ರ ಹೇಳಿಕೆಗಳು ಅವರನ್ನು ದಂಗು ಬಡಿಸುವ ರಾಮಕೃಷ್ಣ ಪರಮಹಂಸರಂಥವರ ವಿಚಿತ ಮಾತುಗಳು ನಂಬಿಕೆಯನ್ನು ಕುದುರಿಸುವ ಸಂಗತಿಗಳಾಗಿ ಮುಂದಿನ ಅವರ ಕೈಗೆ ಇಟ್ಟಿತು. ಅದರಲ್ಲಿ ಪರಮಹಂಸರು ದೇಹಬಿಡುವ ದಿವಸ ಅವರಿಗೂ ವಿವೇಕಾನಂದರಿಗೂ ವಿಕಾಂತದಲ್ಲಿ ನಡೆದ ಕಡುದುಃಖದ ಪ್ರಸಂಗವೊಂದನ್ನು ಹೀಗೆ ಚಿತ್ರಿಸಿದ್ದಿತು:

ವಿವೇಕಾನಂದರು : 'ಸತ್ಯವೆ'

ಪರಮಹಂಸರು : 'ಸತ್ಯವಪ್ಪಾಸತ್ಯ'

ವಿವೇ : 'ಸತ್ಯವೇ ಹೌದೆ'

ಪರಮಹಂಸ : 'ಹೌದು ಹೌದು ಸತ್ಯವೇ ಹೌದು'

ವಿ. ವೇ. : ನಿಜವಾಗಿಯೂ ಸತ್ಯವೇ?

ಪರಮಹಂಸ : ಸತ್ಯ ಸತ್ಯವಾಗಿಯೂ ಹೇಳುತ್ತೇನೆ ತ್ರಿವಾರಸತ್ಯ!!'

ಆಯಿತು ಕಂಠ ಉಬ್ಬಿ ಬಂತು. ಕಣ್ಣಿಂದ ಆಶ್ರುಧಾರೆಯು ಅಖಂಡವಾಗಿ ಸುರಿಯ ಹತ್ತಿತು. ವಿವೇಕಾದನಂದರನ್ನು ಬಿಗಿದಪ್ಪಿಕೊಂಡು ಬಿಟ್ಟರು. ಅವರು ಇವರು ಕೂಡಿಯೇ ಅಪಾರವಾಗಿ ಆಶ್ರುಧಾರೆಯನ್ನು ಕರೆಯಹತ್ತಿದರು!!!

ಆಹಾ! ಜ್ಞಾನ ಭಿಕ್ಷುವಿಗೆ ಮೈಮೇಲೆ ಎಚ್ಚರವೆ ಉಳಿಯಲಿಲ್ಲ ಅವರ ಕಣ್ಣೀರಿನ ಕಥೆಯಲ್ಲಿ ಇವರ ಕಣ್ಣೀರು ಸೇರಿ ಮೂರು ನದಿಗಳ ಸಂಗಮವೇ ಆಯಿತು ರಾಮಕೃಷ್ಣರಿಂದ ಧನ್ಯರಾದರೆನ್ನುವ ವಿವೇಕಾದನಂದರೆ ರಾಮಕೃಷ್ಣರ ಅವಸಾನದ ನಂತರ ತ್ರಿದಂಡಿ ಸನ್ಯಾಸಿಗಳಾಗಿ ದಕ್ಷಿಣ ಹಿಂದೂಸ್ಥಾನದಲ್ಲಿ ಅಲೆದಾಡುತ್ತಿರುವಾಗ ಒಂದು ಬಂಡೆಯ ಮೇಲೆ ಬಿದ್ದುಕೊಂಡು ಹೀಗೆ ದುಃಖಿಸುತ್ತಿದ್ದರಂತೆ ಆಹಾ ನನ್ನ ಜನ್ಮವು ವ್ಯರ್ಥವಾಯಿತು ಮುದುಕನ ಬಳಿಯಲ್ಲಿದ್ದು ಹಾಳಾಗುವುದಕ್ಕಿಂತ ನಾನು ಇನ್ನಾವನಾದರೂ ಒಬ್ಬ ಯೋಗಿಯ ಬಳಿನಿಂತು ಯೋಗಾಭ್ಯಾಸ ಮಾಡಿದ್ದರೆ ಧನ್ಯನಾಗುತ್ತಿದ್ದನಲ್ಲಾ ಈಗಾದರೂ ಏನಾಯಿತು ಗಾಯಿಪುರದ ಪವಾರಿ ಬಾಬಾನ ಶಿಷ್ಯನಾಗಿ ಯೋಗಗ್ರಹಣ ಮಾಡಿಬಿಡಲೆ ರಾಮಕೃಷ್ಣರ ಶಿಷ್ಯನಾಗಿ ಆದಾಗ್ಯೂ ಅದರ ಭರವಸೆಯನ್ನಾದರೂ ಹೇಗೆ ಹಿಡಿಯಲಿ ಇಲ್ಲ ಹೀಗಾಗುತ್ತದೆ ಎಂದು ಯಾರಿಗೆ ಗೊತ್ತು ಬೀಳುವುದು ಒಮ್ಮೆ ಬಿದ್ದಿದ್ದೇನೆ ಇದೇ ಇರಲಿ ಇನ್ನಾವುದನ್ನು ಆಶಿಸಿ ಫಲವಿಲ್ಲ ಎಂದು ಕೊನೆಗೆ ಸಮಾಧಾನ ತಾಳಿ ಚೇತರಿಸಿಕೊಂಡು ಎದ್ದು ಹೊರಟರಂತೆ."[೬] ರಾಮಕೃಷ್ಣರು ದೇವರನ್ನು ಕಂಡು ಅನುಭವವೂ ವಿವೇಕಾನಂದರ ಕೈಗೆ ಎಟುಕದೆ ಹೋದಾಗ ಅತೃಪ್ತಿ ಅಸಮಾಧಾನಗಳು ಹೆಚ್ಚಾಗಿ ಪರಿತಪಿಸುವುದು ಕಂಡುಬರುತ್ತದೆ.

ಸತ್ಸಂಗ ಮತ್ತು ಶಾಸ್ತ್ರಾಧ್ಯಯನಗಳು ತಮ್ಮ ಸಾಧನೆಗೆ ಸರಿಯಾದ ಮಾರ್ಗದರ್ಶನ ನೀಡಬಲ್ಲವು ಎಂದು ಬಾಪಿಸಿದ ಅವರಿಗೆ ಅವುಗಳಲ್ಲಿ ಕಂಡುಬಂದ ಕೊರತೆಗಳು ಸ್ವಯಂ ಪ್ರಯತ್ನಕ್ಕೆ ಅಂಟಿಕೊಳ್ಳುವಂತೆ

ಮಾಡುತ್ತವೆ. ದೇವರನ್ನು ಕಾಣಬೇಕು ಎಂಬ ಉದ್ದೇಶದ ಮೇಲೆ ಇಡೀ ಗ್ರಂಥದ ಕಟ್ಟಡ ನಿರ್ಮಾಣವಾಗಿದೆ. ವೈಚಾರಿಕತೆ ಭಾವುಕತೆಗಳ ಮಿಶ್ರಣವಾದ ಇಲ್ಲಿಯ ಕಥೆ ಬೆಳವಣಿಗೆ ಹೊಂದುತ್ತಾ ಹೋದಂತೆ ಕಂಡರೂ ಒಂದೇ ಮಧ್ಯ ಬಿಂದುವಿನತ್ತ ತಿರುಗುತ್ತಿರುತ್ತದೆ. "ಗುರೂಪದೇಶ ಮೂರ್ತಿಪೂಜೆ, ಸತ್ಸಂಗ ಇಂಥವುಗಳಲ್ಲಿ ಕಂಡುಬರುವ ಅವೈಚಾರಿಕ ಕಂದಾಚಾರಗಳು ತೀವ್ರ ಟೀಕೆಗೊಳಗಾಗಿದ್ದು ಗಮನಿಸತಕ್ಕ ಅಂಶವಾಗಿದೆ. ಹಾಗೆ ಯೋಗಾರೂಢರನ್ನು ಕಂಡಾಗ, ತತ್ವಜ್ಞಾನದ ಪ್ರೊಫೆಸರರೊಬ್ಬರನ್ನು ಸಂದರ್ಶಿಸಿದಾಗ ಪಡೆದ ಅನುಭವವನ್ನು ನಿರ್ದಾಕ್ಷಿಣ್ಯವಾಗಿ ಬಣ್ಣಿಸಲಾಗಿದೆ. ಇಂಥಲ್ಲಿ 'ನಾನು ಕತೆಗಾರನಲ್ಲ ಸಂಶೋಧಕನು' ಎಂದು ಹೇಳಿದುದರಲ್ಲಿ ಎಳ್ಳಷ್ಟು ಸಂಶಯವಿಲ್ಲ. ಇಲ್ಲಿ ಮಧುರಚೆನ್ನರ ಬೌದ್ಧಿಕ ನಿಲುವನ್ನು ಗುರುತಿಸಬಹುದು. ಅವರ ಚಿಕಿತ್ಸಕ ಬುದ್ಧಿ, ಸ್ಪಷ್ಟ ಧೋರಣೆ ಖಂಡಿತವಾದ ನಿರೂಪಣೆ ಇಲ್ಲಿ ಎದ್ದು ಕಾಣುತ್ತದೆ. ಒಂದೊಂದು ಸಂದರ್ಭದಲ್ಲಿ ಅವರ ಮಾತುಗಳು ವ್ಯಂಗ್ಯೋಕ್ತಿಗಳಂತೆಯು ಕಂಡುಬರುತ್ತವೆ. ಉದಾ. ತತ್ವಜ್ಞಾನದ ಪ್ರೊಫೆಸರರು ಇವರ ಪ್ರಶ್ನೆಗೆ ಉತ್ತರ ಕೊಡದೆ ಜಾರಿಕೊಳ್ಳಲು ಯತ್ನಿಸಿದಾಗಿನ ಸಂದರ್ಭವನ್ನು ನೋಡಬೇಕು. ನಿಮ್ಮ ಪ್ರಶ್ನೆಗೆ ಉತ್ತರವನ್ನು ಹೇಳುವದಕ್ಕೆ ಈಗ ನನಗೆ ಅವಕಾಶವಿಲ್ಲ ಎಂದು ವ್ಯಾಪಾರಿಗಳಂತೆ ಸವಿಮಾತಿನಿಂದ ಬರಿಗೈಯನ್ನು ತೋರಿಸಿ ಕೊಡದೆ 'ಥ್ಯಾಂಕ್ ಯು' ಎಂದು ಹೇಳಿ ಅಟ್ಟಿಬಿಟ್ಟರು. ಪಾಪ ಇವರಿಗೆ ಬಂದ ಯಾವುದೇ ವಿಶ್ವಾಸವು ಬಹುದಿನಗಳ ಹಿಂದೆ ಉದಿಗಿಸಿರಬಹುದಾದ್ದರಿಂದ ಈಗ ಪೂರ್ಣವಾಗಿ ನೆನಪಿನಲ್ಲಿ ಉಳಿದಿರಲಿಕ್ಕಿಲ್ಲ ಹಳೆಯ ಡೆಯರಿಗಳನ್ನೆಲ್ಲಾ ಹುಡುಕಾಡಿ ಹೇಳಬೇಕೆಂದು ತೋರುತ್ತದೆ, ಅದಕ್ಕೆ ಅವಕಾಶ ಇರಲಿಕ್ಕಿಲ್ಲ. ಇಲ್ಲಿಯ ಗದ್ಯ ವ್ಯಂಗ್ಯದಿಂದ ಕೂಡಿದ್ದ ಒಂದಿಷ್ಟು ಮೊನಚಾಗಿಯೆ ಇದೆ. ಈ ಮಾತಿನ ಬಗ್ಗೆ ಕೇಳಿಬಂದ ಆಕ್ಷೇಪಣೆಗಳಿಗೆ ಕಾಳರಾತ್ರಿಯು ಬರಹಗಾರನ ಬಿನ್ನಹದಲ್ಲಿ ಇನ್ನೂ ಸ್ಪಷ್ಟವಾದ ಉತ್ತರವನ್ನು ಕೊಟ್ಟಿರುವುದನ್ನು ನೋಡಬಹುದು."[೪]

ಸತ್ಸಂಗ ಪ್ರಕರಣದಲ್ಲಿ ಪ್ರೊಫೆಸರೊಬ್ಬರ ವಿಷಯದಲ್ಲಿ ಬರೆದ ಕೆಲವು ಮಾತುಗಳು ಬಹಳ ಕಟುವಾದವುಗಳೆಂದು ನನ್ನ ಗೆಳೆಯರಲ್ಲಿ ಕೆಲವರು ಆಕ್ಷೇಪಿಸಿರುವರು. ಇದಕ್ಕೆ ನನ್ನ ಉತ್ತರವೆಂದರೆ ಅಲ್ಲಿರುವ ಶಬ್ದಗಳು ಕಟುವಾದವುಗಳೆಂದು ನಾನು ಒಪ್ಪಿಕೊಳ್ಳುತ್ತೇನೆ. ಮತ್ತು ಘನ ವಿದ್ವಾಂಸರು ಅನುಭಾವಿ ಪಥಿಕರು ಆದ ಪ್ರೊಫೆಸರರು ಮನಸ್ಸಿಗೆ ಹಚ್ಚಿಕೊಂಡಿದ್ದರೆ, ಅವರು ನನ್ನನ್ನು ಮನ್ನಿಸಬೇಕೆಂದು ಹಾರೈಸುವೆ. ಆದರೆ ನಾನು ಹಾಗೆ ಟೀಕಿಸಿದುದರ ಕಡೆಗೂ ಅವರು ತಮ್ಮ, ಸರಿಯಾದ ಲಕ್ಷ್ಯವನ್ನೂ ಹೊರಳಿಸಬೇಕೆಂದು ಪ್ರಾರ್ಥಿಸುವೆ. ಆ ಪ್ರೊಫೆಸರರು ಈಗ ಕಾಳರಾತ್ರಿಯ ಹುದುಲಿನಲ್ಲಿ ಸಿಕ್ಕುಬಿಟ್ಟಿದ್ದಾರೆಂದು ನಾನವರಿಗೆ ನಮ್ರವಾಗಿ ತೋರಿಸಿಕೊಡ ಕೊಡಲು ಯತ್ನಿಸುವೆನು ಅವರ ಸುತ್ತಮುತ್ತಲಿನವರು ಅವರ ಸಜ್ಜನಿಕೆಯ ದುರುಪಯೋಗವನ್ನು ಮಾಡಿಕೊಳ್ಳುತ್ತಿರುವುದು ಅವರಿಗೆ ಎಳ್ಳಷ್ಟು ಗೊತ್ತಾಗಬಾರದೆಂದರೆ ಅದು ಕಾಳರಾತ್ರಿಯ ಲಕ್ಷಣವಲ್ಲದೆ ಇನ್ನೇನು? ಅವರ ಸುತ್ತಲೆಲ್ಲಾ ಗುರೂಪದೇಶದ ಬಹುದೊಡ್ಡದೊಂದು ಜಾತ್ರೆಯು ನಡೆದಿದೆ. ಇಂಥ ದೊಡ್ಡ ಪ್ರೊಫೆಸರರು ತಮ್ಮ ಸಂಸ್ಥೆಯ ಶಿಷ್ಯರಿದ್ದಾರೆಂದ ಬಳಿಕ ಉಳಿದವರದೇನು ಬೆಲೆ ಎಂದು ಆ

ಸಂಸ್ಥೆಯವರ ತಿಳುವಳಿಕೆ. ಅಲ್ಲದೆ ನವಶಿಕ್ಷಕರಿಗೂ ಆ ಮಾತು ಹೌದೆನಿಸುತ್ತದೆ. ಹೀಗಾಗಿ ಆ ಸಂಸ್ಥೆಗೆ ಪ್ರೊಫೆಸರರೆಂದರೆ ಆಧಾರಸ್ಥಂಬವಾಗಿ ಬಿಟಿದ್ದಾರೆ. ಇಲ್ಲಿ ನಾನು ಹೇಳುವುದೇನೆಂದರೆ ಆ ಪ್ರೊಫೆಸರರು ಅದರೊಳಗಿರುವುದರಿಂದಲೆ ವಿಚಾರಕ್ಕೆ ಅವಕಾಶವಿಲ್ಲದೆ ಜನರು ಒಳಸೇರುವುದಕ್ಕೆ ಆಸ್ಪದವಾಗುತ್ತದೆ. ಆ ಸಂಸ್ಥೆಯವರಿಗೂ ಇಂಥವರು ಒಬ್ಬರು ತಮ್ಮ ಶಿಷ್ಯರಾಗಿರುವುದರಿಂದ ತಮ್ಮ ಬಗೆಗೆ ಅವರಿಗೆ ಹೊರಳಿ ನೋಡಿಕೊಳ್ಳುವುದಕ್ಕೆ ಆಗದೆ ಹೋಗುತ್ತಲಿದೆ. 'ಈಗಿನದು ವಿಚಾರಯುಗವೆಂದು ಪ್ರೊಫೆಸರರಿಗೆ ಗೊತ್ತಿಲ್ಲದ ಮಾತಲ್ಲ. ಹೀಗಿರುವುದರಿಂದ ತಮ್ಮಿಂದ ಅಲ್ಲಿ ವಿಚಾರಕ್ಕೆ ಅಷ್ಟೊಂದು ಅವಕಾಶ ಸಿಕ್ಕಿದಂತಾಗಿರುವುದನ್ನು ಅರಿತು ಇನ್ನ ಏನಾದರೂ ತಾವು ಎಚ್ಚತ್ತು, ಉಳಿದವರಿಗೂ ಎಚ್ಚರಿಸಿ ತಾವು ತಮ್ಮ ಗುರುಬಂಧುಗಳು' ಕೊಡಿಯೇ. ಕಾಳರಾತ್ರಿಯೊಳಗಿಂದ ಪಾರಾಗಿ ಹೆಚ್ಚು ಉನ್ನತ ಸ್ಥಿತಿಗೇರಿ (ತಾವು ತಮ್ಮ) ಲೋಕಕ್ಕೆ ನಿಜವಾದ ಕಲ್ಯಾಣ ಮಾಡಲೆಂದು ನಾನು ಸರ್ವತಾ ಕಾರಣದಿಂದ ಪ್ರಾರ್ಥಿಸುವೆ. ಅವರಿಂದ ಲೋಕಕ್ಕೆ ನಿಜವಾದ ಹಿತವಾಗಬೇಕೆಂದು ಆಶಿಸುತ್ತಾನೆ. ಯಾಕೆಂದರೆ ಇಂಥ ದೊಡ್ಡ ಆತ್ಮಗಳು ಲೋಕದ ಸುದ್ಯೆವವನ್ನು ಯಥೇಚ್ಛವಾಗಿ ತೆರೆಯಿಸಬಲ್ಲರು. ಆದರೆ ಕಾಳರಾತ್ರಿ ಮಾತ್ರ ಅವರಿಗೆ ಆಗಲಿಕ್ಕೆ ಬೇಕು ಈ ಮಾತನ್ನು ನಾನು ಅವಲೋಕಿಸಿ ವಿಷಯದಲ್ಲಿ ಹೇಳುತ್ತಿದ್ದೇನೆಂದು ಎಣಿಸದಿರಿ. ನಾಡಿನಲ್ಲಿ ಯಾರಾರು ತಾವು ಸಾಧಕರೆಂದು ತಿಳಿದುಕೊಂಡಿರುವರೋ ಅವರೆಲ್ಲರಿಗೆ ನನ್ನ ಈ ಭಿನ್ನಹ."[೯]

ದೇವರನ್ನು ಅರಿಯಲು ಸಹಾಯಕವಾಗುವ ಕೆಲಸ ಗ್ರಂಥಗಳಲ್ಲಿ ವಿಚಿತ್ರ ಸಂಗತಿಗಳಿರುವುದನ್ನು ಮಧುರಚೆನ್ನರು ಗಮನಿಸಿ ಅವುಗಳ ಅಶಾಸ್ತ್ರೀಯತೆಯನ್ನು ಬಯಲಿಗೆ ಎಳೆದಿದ್ದಾರೆ. ಉಪನಿಷತ್ತುಗಳಲ್ಲಿ ಕಂಡುಬಂದ ಮಾಟ, ಮಾರಣ, ಓರಣಗಳು ಅವರಿಗೆ ಕಳವಳವನ್ನುಂಟು ಮಾಡಿವೆ. ಬೃಹದಾರಣಕೋಪನಿಷತ್ತಿನ ಕೊನೆಯ ಅಧ್ಯಾಯದಲ್ಲಿ ಬರುವ ಘಾತುಕ ವಿದ್ಯೆಗಳ ವಿಧಿನಿಯಮಗಳನ್ನು ನೋಡಿ ಭಯವಿಹ್ವಲರೂ ಆಗಿದ್ದಾರೆ. ಶಾಸ್ತ್ರಗ್ರಂಥಗಳು ಸತ್ಯಶೋಧಕನಿಗೆ ಸಹಾಯಕವಾಗುವುದು ಒತ್ತಟ್ಟಿಗಿರಲಿ. ಒಮ್ಮೊಮ್ಮೆ ಸರಿಯಾದ ಮಾಹಿತಿಯನ್ನು ಕೊಡದಿರುವುದು ಅವರಿಗೆ ವ್ಯಸನವನ್ನುಂಟು ಮಾಡಿದೆ. ಅದಕ್ಕೆ ನಿಜಗುರು ಶಿವಯೋಗಿಗಳ 'ವಿವೇಕ ಚಿಂತಾಮಣಿ'ಯಲ್ಲಿ ಜೈನ ತೀರ್ಥಂಕರರ ಬಗ್ಗೆ ಇರುವ ವಿಚಾರವನ್ನು ನೋಡಬೇಕು. ಅಲ್ಲಿ 'ಹೇಮಚಂದ್ರ, ನಾಗಚಂದ್ರ, ನೇಮಿಚಂದ್ರ, ಮೇಘಚಂದ್ರ ಅರ್ಹತೆ ಪಾರ್ಶ್ವನಾಥ, ಸೌಗತ, ಶ್ರುತಕೀರ್ತಿ, ಕಾಮರಹಿತ. ಮುನಿ ಸ್ವಾಮಿಗಳೆಂಬುವರು 'ಚೌವಿಶ' 'ತೀರ್ಥಂಕರ ಚರಿತ್ರೆಗಳಂ' ಎಂದಿರುವುದನ್ನು ನೋಡಿದ ಮಧುರಚೆನ್ನರು ಇಲ್ಲಿ ಹೇಳಿದ ಹೆಸರುಗಳಲ್ಲಿ ಸರಿಯಾಗಿರುವುದು ಎರಡು ಮೂರು ಮಾತ್ರವೆ ಉಳಿದವರು ಕವಿಗಳೋ ಪಂಡಿತರೋ ಕೇವಲ ಕಲ್ಪಿತರೋ ಆಗಿದ್ದಾರೆ ಎಂದು ಹೇಳಿ ಅವರು ಓದಿದ ವಿವೇಕ ಚಿಂತಾಮಣಿಯಲ್ಲಿ ಚೌವಿಶದ ಬದಲು ಚತುರ್ದಶವಿದ್ದುದನ್ನು ಗಮನಿಸಿ ನಿಜಗುಣಶಿವಯೋಗಿಗಳಿಗೆ ತೀರ್ಥಂಕರರ ಸಂಖ್ಯೆಯು ಸರಿಯಾಗಿ ಗೊತ್ತಿಲ್ಲದುದ್ದಕ್ಕೆ ಆಶ್ಚರ್ಯವ್ಯಕ್ತ ಪಡಿಸಿದ್ದಾರೆ. ಕೊನೆಗೆ ಕಾಣಹತ್ತಿದ ಮೇಲೆ ಸತ್ಯಾನ್ವೇಷಿಗಳಮತಿಯು ಇದನ್ನು ನೋಡಿ ಭ್ರಮಿಸಿಹೋಗುವುದರಲ್ಲಿ ಏನಾಶ್ಚರ್ಯವಿಲ್ಲ ಸಂಶೋಧನಾದೃಷ್ಟಿ. ತೀಕ್ಷ್ಣವಾಗಿ ಕಾರ್ಯ ಮಾಡಿದುದು ಕಂಡುಬರುತ್ತದೆ."[೧೦]

ಹತ್ತು ವರುಷಗಳ ವೈಷಮ್ಯಖಂಡದಿಂದ ಸಮನ್ವಯ ಖಂಡಕ್ಕೆ ಬಂದಾಗ ಜ್ಞಾನ ಭಿಕ್ಷುವಿನ ವ್ಯಾಸಂಗ ಇನ್ನೂ ವ್ಯಾಪಕವಾಗುತ್ತದೆ. ಕನ್ನಡ ಸಂಸ್ಕೃತಗಳಿಗೆ ಮೀಸಲಾದ ಅಧ್ಯಯನವನ್ನು ದಾಟಿ ಆಂಗ್ಲ ಭಾಷೆಯನ್ನು ತಮ್ಮ ಕಕ್ಷೆಗೆ ಬರಮಾಡಿಕೊಳ್ಳುತ್ತಾರೆ. ಅಧ್ಯಯನದಿಂದ ಅರಿತದ್ದು ಮಾನವನೇತ್ರವೂ ಆತ್ಮಸ್ವರೂಪವನ್ನು ಕಾಣಲಾರದೆಂಬುದನ್ನು ಅರಿತುಕೊಳ್ಳುತ್ತಾರೆ. ಅಂತಹ ಪ್ರಸಂಗವನ್ನು ಈ ಕೆಳಗಿನಂತ ಕಾಣಬಹುದು.

"ಜ್ಞಾನ ಭಿಕ್ಷುವಿಗೆ ೨೩ನೆ ವರುಷ ಇದುವರೆಗೆ ಈತನು ಓದುತ್ತಿದ್ದ ಉದ್ಗ್ರಂಥಗಳೆಲ್ಲ ದೇಶ ಭಾಷೆಯ ಅನುವಾದಗಳೇ ಆಗಿದ್ದವು ಆದುದರಿಂದ ಈತನಿಗೆ ಒಳೊಳಗೆ ಅನಿಸಹತ್ತಿದ್ದೇನೆಂದರೆ ಅನುವಾದಕರು ಮೂಲಗ್ರಂಥಕಾರರ ಭಾವಗಳನ್ನು ಎಷ್ಟರಮಟ್ಟಿಗೆ ಗ್ರಹಿಸಿದ್ದಾರೆ. ಅದರಿಂದ ಅನುಭವಪೂರ್ಣ ಗ್ರಂಥಗಳ ಮೂಲಭಾವದ ಸಮಗ್ರ ದರ್ಶನವನ್ನು ಅನುವಾದಕರು ಪಡೆದಿರಬಲ್ಲರೆ? ಅಥವಾ ಅವರು ಮೂಲವನ್ನು ವಿಸ್ತರಿಸಿಯಾಗಲಿ ಸಂಕ್ಷೇಪಿಸಿಯಾಗಲಿ ಕೆಡಿಸಿರಲಾರರೆ ಏನಾದರೂ ಆಗಲಿ ಮೂಲಕ್ಕೆ ಮುಟ್ಟಿ ನೋಡೋಣ. ಒಂದೊಂದು ಶಬ್ದದಲ್ಲಿಯೂ ಕೂಡಾ ಬಹಳ ಮಹತ್ವವೂ ಬಿಚ್ಚಿಯಾಗಲಿ ಮುಚ್ಚಿಯಾಗಲಿ ಹೋಗಬಹುದಾಗಿದೆ. 'ಪರಮಾತ್ಮ' ಎಂದರೆ ನಮ್ಮ ನಿಜಸ್ಥಿತಿಯದೇ ಒಂದು ತೀರ ಹೆಚ್ಚಿನ ಅವಸ್ಥೆಯು ಅರವಿಂದರು ಹೀಗೇನಾದರೂ ಉಪಯೋಗಿಸಿರಬಹುದೇ ಹೀಗಿದ್ದುದಾದರೆ ನನ್ನ ಒಳ ಆಸೆಗೇನೂ ತೃಪ್ತಿಯಿಲ್ಲವಾದರೂ ಅವರ ವಾಕ್ಯಕ್ಕಾದರೂ ಸರಿಯಾದ ಅರ್ಥವು ಹತ್ತಿದಂತಾಗುತ್ತಿದೆ. ಅರವಿಂದರ ಇಡಿಯ ಪುಸ್ತಕದ ವಿಚಾರವನ್ನು ನೋಡಿದರೆ ಅವರು ಪರಮಾತ್ಮನ ವಿಷಯವಾಗಿ ಭೋಧಿಸಲಾರರೆಂದು ಅನ್ನಿಸುತ್ತದೆ. ಭಗವಾನ್ ಸರ್ವಾಂತಯಾಮಿಯಾದ ಪರಮಾತ್ಮನಿಗೆ ನಾನು ದೇವರು ಎನ್ನುತ್ತಿದ್ದು. ಅವನನ್ನು ಆಶಿಸುತ್ತಿರುವೆನಾದುದರಿಂದ ಅರವಿಂದರ ತದ್ವಿಪರೀತ ವ್ಯಾಖ್ಯಾನ ಸಂಭವನೀಯತೆಗೆ ಬೆದರಿದ್ದೇನಲ್ಲವೆ? ನಿಜವಾಗಿಯೂ ಅರವಿಂದರ ಅಭಿಪ್ರಾಯವು ಏನಿದ್ದಿತು? ಇದಕ್ಕೀಗ ಒಂದೇ ಉಪಾಯವೆಂದರೆ ಅವರ ಮೂಲ ಇಂಗ್ಲೀಷ್ ಗ್ರಂಥಗಳನ್ನು ಶಬ್ದಶಃ ಪರಿಶೀಲಿಸುವುದು."[೧೦]

"ಹೀಗೆ ಆಲೋಚಿಸಿ ಪುಸ್ತಕಗಳನ್ನು ತರಿಸಿದನು. ಅಲ್ಲದೆ ಅನುವಾದ ಗ್ರಂಥಸಂಧಿಗ್ಧ ವಾಕ್ಯ ಒಂದರ ಹಿಂದಿನ ಪ್ಯಾರಾದಲ್ಲಿ ಒಂದು ಸಂಸ್ಕೃತ ಶ್ಲೋಕವಿದ್ದು. ಅದು ಮುಂದಿನ ಖಂಡದಲ್ಲಿ ಮೊಟ್ಟ ಮೊದಲ ಒಂದೆರಡು ವಾಕ್ಯಗಳನ್ನು ದಾಟಿ ತನ್ನ ಇಚ್ಛಿತ ವಾಕ್ಯವಿದ್ದುದರಿಂದ ಮೂಲಗ್ರಂಥದಲ್ಲಿ ಇದೇ ಕುರುಹನ್ನು ಅವಲಂಬಿಸಿ ಪುಟಗಳನ್ನು ತಿರುವಿ ಹಾಕಲು ಅದು ಕಣ್ಣಿಗೆ ಬಿತ್ತು.

"When our eyes that are now blinded by the idea of matter open to the suprem light. We shall find that nothing it iminimate, but all contains life, minal knowledge bless divine force and being".

"ಅಹಾ! ಇದರಲ್ಲಿ 'ಕೋಟಿ ಕೋಟಿ ಜನ್ಮ'ವೂ ಇಲ್ಲ? ತಲೆಗಟ್ಟಿಸಿಕೊಳ್ಳುವುದೂ ಇಲ್ಲ ಭೌತಿಕ ವಿಚಾರದಿಂದ ಕುರುಡಾದ ನಮ್ಮ ಈಗಿನ ನೇತ್ರವು ಮೇಲಿಂದ ಮೇಲೆ ಅರಳಿದಾಗ ಜಡವೆಂಬುದೆ ಇಲ್ಲ. ಆಗ

ಎಲ್ಲವೂ ಜೀವಂತವಾಗಿದ್ದು, ಪ್ರಾಣ, ಮನ, ಬುದ್ಧಿ, ಆನಂದ ಸ್ವತ್ತು, ಚಿತ್ತುಗಳಿಂದ ಕೂಡಿದೆಯೆಂದು ಗೊತ್ತಾಗುವುದು ಈಗ ನಮ್ಮ ನಾಯಕನಿಗೆ ಆದ ಆನಂದಕ್ಕೆ ಆಳವೆ ಇಲ್ಲ."[೧೦]

"ಇಷ್ಟೊತ್ತಿಗೆ ಒಬ್ಬ ಕ್ರೈಸ್ತ ಮಿತ್ರನ ಬೆಟ್ಟಿಯಾಯಿತು ಅವನಲ್ಲಿದ್ದ ಬೈಬಲ್ಲಿನ ಟೀಕಾ ಗ್ರಂಥ ತೆಗೆದು ಕೊಂಡು ದೇವರನ್ನು ಎಂದೂ ಯಾರೂ ನೋಡಿಲ್ಲ ಎಂಬ ಮತ್ತು ವಾಕ್ಯವನ್ನು ತೆಗೆದು ಓದಲು ಬಾಷ್ಯಕಾರನು 'ಮನುಷ್ಯ ನೇತ್ರವು' (Human eye) ಎಂಬುದು ಎಂದೆಂದಿಗೂ ಆತ್ಮಸ್ವರೂಪನಾದ ದೇವರನ್ನು ಕಾಣಲಾರದೆಂದು ಅರ್ಥಹೇಳಿದ್ದು ಗೊತ್ತಾಯಿತು. ನಂತರ ಸಾಧನೆ ಇನ್ನೊಂದು ದಿಕ್ಕಿಗೆ ಹೊರಳಿ ಶರಣರ ಪುಣ್ಯ ಭೂಮಿಯಾದ ಕಲ್ಯಾಣವನ್ನು ಪ್ರತ್ಯಕ್ಷವಾಗಿ ಕಂಡು ಧನ್ಯತೆಯನ್ನು ಪಡೆಯಲು ಯತ್ನಿಸುತ್ತದೆ. ಅದೂ ಪ್ರಯೋಜನಕಾರಿಯಾಗದೆ ಹೋಗುತ್ತದೆ. ಮುಗ್ಧಭಕ್ತಿಯಿಂದ ಪ್ರಾರಂಭವಾಗಿ ವಿರೋಧಭಕ್ತಿಯಲ್ಲಿ ಹೊಯ್ದಾಡಿ ಸತ್ಸಂಗ ಶಾಸ್ತ್ರಜಾಲಗಳಲ್ಲಿ ತಡಕಾಡಿ ಕೊನೆಗೆ ತಮ್ಮ ದೃಷ್ಟಿಗೆ ತಾವೇ ಹೊಸ ತನವನ್ನು ಅನುವಾದ ಗ್ರಂಥಗಳ ಮೂಲ ಅರ್ಥಶೋಧನೆಯ ನಿಮಿತ್ತ ಪಡೆದ ಶರಣರ ಪಾದದೂಳಿಂದ ಪಾವನವಾದ ಕಲ್ಯಾಣಕ್ಷೇತ್ರವನ್ನು ಜ್ಞಾನಭಿಕ್ಷು ಸಂದರ್ಶಿಸುವನು. ಬಸವಣ್ಣನ ಭಕ್ತಿ, ಚೆನ್ನಬಸವಣ್ಣನ ಅನುಭಾವ, ಪ್ರಭುದೇವರ ಸರ್ವಮುಖಿ ಕುಶಾಗ್ರತೆ, ಸಿದ್ಧರಾಮನ ಸಮತ್ವ, ಅಕ್ಕಮಹಾದೇವಿಯ ಒಳ ಹೊರಗರಿಯದ ಸತ್ವಶುದ್ಧಿ ಇವುಗಳೆಲ್ಲಾ ಅವರ ಹೃದಯವನ್ನು ಎಂದೋ ಆಕರ್ಷಿಸಿದವು. ಆದರೆ ಅವರ ಕಾರ್ಯಕ್ಷೇತ್ರವಾಗಿದ್ದ ಕಲ್ಯಾಣವನ್ನು ಕಣ್ಣಾರೆ ಕಾಣುವ ಸುಯೋಗ ಮಾತ್ರ ಈವರೆಗೆ ಬಂದಿರಲಿಲ್ಲ ಈಗ ಅವನ ಬಹುದಿನದ ಬಯಕೆ ಕೈಗೂಡಿತು."[೧೧]

"ಕಲ್ಯಾಣ ಕ್ಷೇತ್ರವನ್ನು ಕಾಣುತ್ತಲೆ ಜ್ಞಾನ ಬಿಕ್ಷುವಿನ ಭಕ್ತಿಗೆ ತುಂಬಿ ಬಂದಿತು. ಹರಿಹರನು ತನ್ನ ರಗಳೆಯಲ್ಲಿ ನಿಂದಲ್ಲಿ ನಿಂದಪೆಂ, ನಡೆದಲ್ಲಿ ನಡೆದಪೆಂ ಎಂದು ಭಾವಪರವಶತೆಯು ಕಂಡುಬರುತ್ತದೆ. ಈ ಭಾವನಿರ್ಭರತೆಯು ಚಕಿತಗೊಳಿಸುವಂತಗಿದೆ. ಭಾವುಕರಿಗೆ ಸಹಜ ಎನಿಸಬಹುದಾದರೂ ಬುದ್ಧಿಜೀವಿಗಳಿಗೆ, ವ್ಯವಹಾರಿಕ ದೃಷ್ಟಿಯುಳ್ಳವರಿಗೆ ಇದು ಒಂದು ಹುಚ್ಚುತನ ಹುಚ್ಚುತನ ಎಂದು ಕರೆಯಬಹುದು. ಉತ್ಕಟ ಆಧ್ಯಾತ್ಮಿಕ ಜೀವಿಗಳಲ್ಲಿ ಮಾತ್ರ ವ್ಯಕ್ತವಾಗುವ ಒಂದು ಗುಣವಿಶೇಷ ಕಲ್ಯಾಣದ ಸಂಸ್ಪರ್ಶತೆಯಲ್ಲಿ ಧನ್ಯತೆಯನ್ನು ಪಡೆಯುವ ಜ್ಞಾನಭಿಕ್ಷು ಬಸವಣ್ಣನವರ ಪಾರಾಯಣದಲ್ಲಿ ದಿನವನ್ನೆಲ್ಲಾ ಕಳೆದರು ಅಂದಿನಿರುಳು ತಮ್ಮ ಶ್ರದ್ಧೆಗೆ ಪ್ರತಿಯಾಗಿ ದೃಷ್ಟಾಂತವೊಂದು ಕಾಣಬಹುದೆಂದು ನಿರೀಕ್ಷಿಸಿದುದು ಆದರೆ ಅವನ ನಿರೀಕ್ಷೆ ಫಲಕಾರಿಯಾಗದೆ ಹೋಯಿತು."[೧೨]

"ದೂರದ ಕಕ್ಕನಾಗುವನೊಬ್ಬನು ಬೈರಾಗಿಯಾಗಿರುವುದನ್ನು ಅರಿತು ತನ್ನ ಹೋರಾಟ ಸಾಧನೆ ವಿಫಲವಾದುದನ್ನು ತೋಡಿಕೊಳ್ಳುತ್ತಾನೆ. ಬೈರಾಗಿಯು ಜ್ಞಾನ ಭಿಕ್ಷುವಿನ ಜಿಜ್ಞಾಸುತನವನ್ನು ಅರಿತು ತನ್ನ ಅನುಭವ ಕಥನವನ್ನು ಹೇಳುವುದರ ಮೂಲಕ, ಸಿದ್ಧ ಪುರುಷರ ಹಸ್ತ ಸ್ಪರ್ಶದಿಂದ ಸಾಧಕ ಜೀವಿಗಳ ಆತ್ಮವು ಅರಳಿತು ಆಗನಾನು ಅವನನ್ನು ಅದೇ ಸ್ಥಿತಿಯು ಕೊನೆಯತನಕ ಉಳಿಯಲೆಂದು ಬೇಡಿಕೊಂಡರೆ ಆತನು

ವಿಜ್ಞಾನಂದನ ಸಿಂಹವನ್ನು ಕೆರಳಿಸಿ ಎಬ್ಬಿಸಿಕೊಡುವಷ್ಟು ಅನ್ಯರಿಂದಾಗುವುದೆ ವಿನಃ ಅದು ತಿರುಗಿ ತನ್ನ ಗುಹೆಯಲ್ಲಿ ಸೇರಿದ ಮೇಲೆ ಸಾಧಕನು ತಾನೆ ತನ್ನ ಜೀವಮಾನದಲ್ಲಿ ಯತ್ನಪಟ್ಟು ದೊರೆಕಿಸಿಕೊಳ್ಳಬೇಕಾಗುತ್ತದೆ."[೧೫]

"ನನ್ನ ಸಿಂಹವು ನನಗೆ ತಿರುಗಿ ಹೊರ ಬೀಳದಿರುವಾಗ ಅನ್ಯರಗುಹೆಯಿಂದ ಸಿಂಹವನ್ನು ಎಬ್ಬಿಸುವುದಕ್ಕೆ ನನ್ನಿಂದಾಗಲಾರದು ಎಂಬುದನ್ನು ಅರಿತು ನಾನು ಲೋಕಾಂತದಿಂದ ಬಹುದೂರದಲ್ಲಿ ವಾಸಮಾಡಿಕೊಂಡಿದ್ದೆನೆ. ಸಾಧಕ ಜೀವಿಗಳಿಗೆ ಬರಿಬಾಯಿ ಮಾತಿನಿಂದ ಹಸಿವು ಹಿಂಗಲಾರದು ಎಂಬುದನ್ನು ನಾನು ಬಲ್ಲೆನು, ಅವರ ಹಸಿವನ್ನು ಹಿಂಗಿಸಲಿಕ್ಕೆ ಸಮರ್ಪನಿಲ್ಲದವನು ನನ್ನಿಂದ ನಿನಗೆ ಹೆಚ್ಚಿನ ಉಪಯೋಗವಾಗಲಾರದು ನಿನ್ನ ಕಾಲವನ್ನು ಕಾದುಕೊಂಡು ಸಾವದಾನದಿಂದ ಮಾತ್ರ ಇರು ಎಂದು ಹೇಳುವೆನು."[೧೬]

ಈ ಸನ್ಯಾಸಿಯ ಬೇಟಿಯಿಂದ ಸ್ವಾನುಭವದ ನಿರೂಪಣೆ ಅದರಿಂದ ಒಂದು ಬಗೆಯ ಸಮಾಧಾನ ಇವೆಲ್ಲ ಒಂದೊಂದಾಗಿ ನಡೆಯುತ್ತ ಹೋಗುತ್ತದೆ. ವೈಯಕ್ತಿಕ ಅನುಭವವನ್ನು ಸಾರ್ವತ್ರಿಕ ಅನುಭವವಾಗುವ ಸಾಧ್ಯವಿಲ್ಲ. ಹಾಗಾಗಿ ಜ್ಞಾನ ಭಿಕ್ಷುವು ಸರಿಯಾದ ಮಾರ್ಗ ಅವನ್ನು ಕಂಡುಕೊಂಡಿಲ್ಲದೆ ಪರಾವಲಂಬಿಗಳ ವಿಚಾರದ ಆಧಾರದ ಮೇಲೆ ತನ್ನ ಸಾಧನೆಯನ್ನು ಸಾಧಿಸಿಕೊಳ್ಳುವುದನ್ನು ನೋಡಬಹುದು.

"ಮನಸ್ಸು ಶಾಂತವಾಗಲು ದೇವರು ಪ್ರತ್ಯಕ್ಷನಾಗುತ್ತಾನೆ" ಎಂಬುದನ್ನು ಹಲವಾರು ಆಧ್ಯಾತ್ಮ ಗ್ರಂಥಗಳಿಂದ ತಿಳಿದುಕೊಂಡಮೇಲೆ ಜ್ಞಾನ ಭಿಕ್ಷು ಶ್ರೀ ಅರವಿಂದರ ವಿಚಾರ ನಿರಸ್ತಂಗೀಕರಣ ಸಾಧನೆಯಲ್ಲಿ ತೊಡಗುತ್ತಾನೆ. ಧ್ಯಾನ ಹಾಗೂ ಆತ್ಮಜ್ಞಾನದ ಗ್ರಂಥಗಳ ಅಧ್ಯಯನ ಅವ್ಯಾಹತವಾಗಿ ನಡೆದ ಮೇಲೆ ಆಕಾಶಸ್ತಲಿಂಗತ್ ಎಂಬ ಉತ್ತರ ಮೀಮಾಂಸೆಯ ಹೊಳಪು ಹೊಳವು ಮನವರಿಕೆಯಾಗುತ್ತದೆ ಇದು ಆತ್ಮ ಜ್ಞಾನದ ಪ್ರಥಮ ಪರಿಚಯ

"ಅಂತೂ ನಮ್ಮ ನಾಯಕನು ನಿರಸ್ತಂಗೀಕರಣ ಪದ್ಧತಿಗೆ ಆಕರ್ಷಿತನಾದನು ಒಂದು ಪ್ರತ್ಯೇಕವಾದ ಕೋಣೆಯನ್ನು ಏರ್ಪಡಿಸಿಕೊಂಡು ಏಕಾಂತ ಸಾಧನವನ್ನು ಆರಂಭಿಸಿದನು. ದಿನಾಲು ಒಂದು ತಾಸು, ಒಂದು ರೀತಿಯಿಂದ ಧ್ಯಾನಮಾಡಿದ ಮೇಲೆ ದಿನದ ಇನ್ನುಳಿದ ವೇಳೆಯಲ್ಲಿ ಕೋಣೆಯನ್ನು ಇದ್ದಕ್ಕಿದ್ದಂತೆ ಮುಚ್ಚಿಕೊಂಡು ಕಿಡಕಿಯನ್ನು ತೆಗೆದಿದ್ದು. ಇನ್ನಾವ ವಿಚಾರವನ್ನು ಮಾಡದೆ ಭಾವಚಿತ್ರವೊಂದನ್ನು ನೋಡುತ್ತಾ ಕೊಡಹತ್ತಿದನು ಆಗಲೂ ಬೇರೆ ವಿಚಾರಗಳು ಸುಳಿದರೆ ಪುತ್ಕರಿಸಿ ಚದುರಿಸುವನು ಇವು ಬಹಳ ಹೊತ್ತಿನವರೆಗೆ ಸಮಾಧಾನವಾಗಿ ಸಾಗುತ್ತಿರಲಿಲ್ಲ ಮನಸ್ಸು ಅತ್ಯಂತ ವ್ಯಗ್ರವಾಗಿ ಬಿಡುತ್ತಿತ್ತು."[೧೭]

"ಈಗ ಜ್ಞಾನಭಿಕ್ಷು ಕೈಗೊಂಡ ಕಾರ್ಯ ವಿಚಾರ ನಿರಸ್ತಂಗಿಕರಣ. ಆದರೆ ಮಾಡಹತ್ತಿದ್ದು ವ್ಯಾಕುಲ ಶೋಕ, ನಸ್ಸವ್ಯಥಿತ ಜೀವನದ ಮೂಲಕ ಆ ಬ್ರಹ್ಮಚಾರ್ಯದ ಮೂಲಕವೂ ನನ್ನ ಶಕ್ತಿಯೆಲ್ಲಾ ಕುಂದಿ ಹೋಗಿರುವುದರಿಂದ ಮನಸ್ಸಿನ ಮೇಲೆ ಪ್ರಭುತ್ವವಿಲ್ಲದಂತಾಗಿದೆ. ಈಗ ಮನಸ್ಸಿನ ಮೇಲೆ ಅನಗತ್ಯವಾಗಿ

ಬಲವಂತ ಮಾಡುವುದಕ್ಕಿಂತ ಏನಾದರೂ ಪರ್ಯಾಯ ದಾರಿ ಹುಡುಕಬೇಕು. ಒಂದು ತಾಸು ಮಾತ್ರ ಇದಕ್ಕಿಟ್ಟು. ಉಳಿದ ಕಾಲದಲ್ಲಿ ಅದಕ್ಕೆ ಪೋಷಕವಾಗುವ ಗ್ರಂಥಗಳನ್ನು ಓದುತ್ತಿರಬೇಕು ನನ್ನ ಬೆನ್ನಹುರಿಗೆ ಶಕ್ತಿ ಸಾಲದ್ದರಿಂದ ಅರಾಮ ಕುರ್ಚಿ ಮೇಲೆ ಒರಗಿ ಕೊಂಡು ಧ್ಯಾನ ಮಾಡಬೇಕು "ಧ್ಯಾನದ ಫಲವು ಪೂರ್ವತೆಗೆ ಬರಬೇಕಾದರೆ ನಿದ್ರೆ ಬಾರದಂತೆ ಜಾಗರೂಕತೆಯನ್ನು ತೆಗೆದುಕೊಳ್ಳಬೇಕೆಂದು ನಮ್ಮ ನಾಯಕನಿಗೆ ಗೊತ್ತಾಗಲೆ ಇಲ್ಲ. ಹೀಗೆ ೬ ತಿಂಗಳವರೆಗೆ ಸಾಗಿತು ಜೀವನದಲ್ಲಿ ಇನ್ನಾವ ಮಾರ್ಪಾಡುಗಳು ಆಗಲಿಲ್ಲ. ಮೆದುಳಿಗೆ ವಿಶ್ರಾಂತಿಯಾದರೂ ಸಿಕ್ಕಿತು."[೧೮]

ಇಲ್ಲಿ ಒಂದು ದೃಶ್ಯ ರೂಪವನ್ನು ಕಟ್ಟಿಕೊಡುತ್ತದೆ. ಮಾನಸಿಕ ಅಸ್ವಸ್ಥರಾದವರು ಅನುಭವಿಸುವ ಯಾತನೆಯಂತೆ ಕಾಣುತ್ತದೆ. ವಿಚಾರದ ಒತ್ತಡಗಳಿಂದ ಬುದ್ಧಿ ಭ್ರಮೆಯಾಗುತ್ತದೆ. ಹಾಗೆಯೇ ಚಿತ್ತವಿಕ್ಷೇಪ, ಚಿತ್ತ ಚಾಂಚಲ್ಯ "ಖಾಲಿ ಮೆದುಳು ದೆವ್ವಗಳ ವಾಸಸ್ಥಾನ" ಎನ್ನುವ ಹಾಗೆ ಮಾನಸಿಕ ತೊಳಲಾಟದ ಮತ್ತು ಹೊಂಕರಿಸುವ ಆರ್ತನಾದ ಇವುಗಳು ನಾಯಕನನ್ನು ಕಾಡಹತ್ತಿದವು ಎನ್ನಬಹುದು. ಅದಕ್ಕಾಗಿ 'ಜ್ಞಾನ ಬಿಕ್ಷು ಕೈಗೊಂಡ ಕಾರ್ಯ ವಿಚಾರ ನಿರಸ್ತಂಗಿಕರಣ. ಆದರೆ ಮಾಡಹತ್ತಿದ್ದು ವಸಕುಲ ಶೋಕ' ಎಂಬ ಮಾತು ಸಮಂಜಸವಾಗಬಹುದು ಎನಿಸುತ್ತದೆ.

"ಧರ್ಮ ಎಂಬ ಮಾತೆನ್ನುತ್ತಿದ್ದರೆ ಮುಂದಿನ ಮಾತುಗಳು ತಪ್ಪದೇ ಬರುತ್ತದೆ. ೧. ದೇವರು, ಪರಲೋಕ, ಆತ್ಮ. ಅಮರತ್ವ ಕರ್ಮ ಜನ್ಮಾಂತರ, ದಿವ್ಯ ಜ್ಞಾನ, ಜಗತ್ತಿನಲ್ಲಿ ನಡೆಯುವ ಒಂದು ಧರ್ಮವನ್ನು ತೆಗೆದುಕೊಂಡರೂ ಬುದ್ಧಿಯಾಚೆಗಿನ ದಿವ್ಯಜ್ಞಾನ ಒಂದು ಎಂಬ ಮಾತನ್ನು ತಪ್ಪದೆ ಹೇಳುತ್ತದೆ. ಈ ವಿಷಯಕ್ಕೆ ಸಕಲ ಧರ್ಮಗಳಲ್ಲಿಯೂ ಏಕವಾಕ್ಯತೆ ಅದರಿಂದ ಮಾನವನು ದಿವ್ಯಜ್ಞಾನಕ್ಕೆ ಮುಟ್ಟುವನೆಂದು ಹೇಳುತ್ತದೆ."[೧೯]

"ನಾಯಕನು ಸ್ಪೆನ್ಸರ್‌ನ ಆಜ್ಞೆಯ ಮೀಮಾಂಸೆ ಎಂಬ ಪುಸ್ತಕವನ್ನು ಓದುತ್ತಿದ್ದ ಹಾಗೆ ವಿಲಕ್ಷಣ ವಿಷಯವು ಸೂಚಿತವಾಯಿತು. ಸ್ಪೆನ್ಸರ್ ವಿಶ್ವದ ಉತ್ಪತ್ತಿಯ ಬಗೆಗೆ ಅಭಿಪ್ರಾಯ ವ್ಯಕ್ತ ಪಡಿಸಿದ್ದಾರೆ. ವಿಶ್ವವು ಹೇಗೆ ಹುಟ್ಟಿತೆಂಬ ಪ್ರಶ್ನೆಗೆ ಮೂರು ಉತ್ತರಗಳು ಹೊರಡಬಲ್ಲವು ೧. ದೇವರು ಅದನ್ನು ಮಾಡಿದ್ದಾನೆ, ೨. ಸೂಕ್ಷ್ಮ ಸ್ವರೂಪದೊಳಗಿಂದ ರೂಪಿತವಾಯಿತು, ೩. ಅದುಹುಟ್ಟೆ, ಇಲ್ಲ ಎಂದೆಂದಿಗೂ ಇತ್ತು. ಇದಕ್ಕಿಂತ ಹೆಚ್ಚಿನ ಉತ್ತರವೆ ಹೊರಡದು. ಈ ಮೂರನ್ನು ಪರೀಕ್ಷಿಸಿದಾಗ ಒಂದಾನೊಂದು ಕಾಲದಲ್ಲಿ ಇರಲಿಲ್ಲ ಎಂಬುದು ಸ್ಪಷ್ಟ. ಕಣ್ಣಿಗೆ ಕಾಣುವ ಪ್ರಪಂಚದಲ್ಲಿ ಯಾವುದು ಶಾಶ್ವತವಲ್ಲ, ಎಲ್ಲಾ ಪ್ರತಿಕ್ಷಣ, ಸಾವು ಮತ್ತು ಹುಟ್ಟುಗಳನ್ನು ಕಾರ್ಯಕಾರಣ ನಿಯಮಗಳಿಗೆ ಅನುಗುಣವಾಗಿ ಪಡೆಯುತ್ತದೆ. ಕಾರ್ಯಕಾರಣನಾದ ಪರಮಾತ್ಮ ಇರುವನೆಂಬುದು ಯಾವುದರ ಆಧಾರದ ಅಂತ್ಯ ಇಲ್ಲ. ಅವ್ಯಾಹತವಾಗಿ ಮುಂದುವರಿಯುವ ಭ್ರಮಾತ್ಮಕ ರೂಪಗಳು. ಈ ಎರಡರ ಮುಂದೆ ನಾಸ್ತಿ ಎನ್ನುವ ಜೇಪ ಆಸ್ತಿ ಎಂದು ತಲೆಬಾಗುತ್ತದೆ ಈ ಪ್ರಪಂಚದಲ್ಲಿ ಎಲ್ಲವೂ ಬುದ್ಧಿಗಮ್ಯ ಎಲ್ಲ ಅಂತಹುದರ ಬಾಹ್ಯ ಪ್ರತೀಕವೆ ಈ ಆಕಾಶ ಕಾಲ."[೨೦]

"ಸಾಧಕರ ವಸತಿಸ್ಥಾನ ಎರಡು ಎಂದು ಹೇಳಬಹುದು ಒಂದು ಪಾರಮಾರ್ಥಿಕ ಇನ್ನೊಂದು ಯೋಗಾನುಭವ ಸಾಧಕ ವರ್ಗದಲ್ಲಿ ಬಹುಜನರು ಪಾರಮಾರ್ಥಿಕ ಸತ್ಯ ಪ್ರಮಾಣಿತಪಾದೊಡನೆ ಸಂತೃಪ್ತರಾಗುವರು ಕೆಲವರು. ಮುಂದುವರಿದು ಕೇವಲವನ್ನು ಕಂಡುಂಡು ತಣಿಯಲೆಳಸುವರು. ಈಗಿರುವ ಯಾವ ಬಾಹ್ಯ ಇಂದ್ರಿಯಗಳಿಂದಲು ಸಾಧ್ಯವಿಲ್ಲ ಸುಪ್ತ ಮಾನಸ ಶಕ್ತಿಗಳ ಬಾಗಿಲು ತೆರೆಯಬೇಕಾಗುವುದು ಇದಕ್ಕೆ ಯೋಗಾನು ಭವವೆಂದು ಹೆಸರು. ಅರವಿಂದರು ಇವರೆಡರ ಸಂಯೋಗವೆ ಈ ನವ ಯುಗಕ್ಕೆ ಬೇಕಾಗಿರುವ ಸಿದ್ಧಿಯೆಂದು ಹೇಳುತ್ತಿದ್ದಾರೆ. ಬರಿ ಪಾರಮಾರ್ಥಿಕ ಆಧ್ಯಾತ್ಮದಿಂದಾಗಲಿ ಅಂತರ್ಮಾನಸದಿಂದಾಗಲಿ ಸಂಪೂರ್ಣತೆ ಉಂಟಾಗದಿದ್ದರಿಂದ ಅವರು ಯೋಗಾನು ಭವಯುಕ್ತ ಎಂಬುದರ ಅಗತ್ಯವನ್ನು ಸ್ಪಷ್ಟಗೊಳಿಸುತ್ತಾರೆ."[೨೧]

ಈಗ ನಮ್ಮ ನಾಯಕನಿಗೆ ಕವಿ ಪ್ರವರಾದ ಏ.ಈ. ಅವರ ದರ್ಶನ ದೀಪಿಕೆಯನ್ನು ಓದುವದರಿಂದ "ಅಂರ್ತಮಾನಸ ಸಾಮ್ರಾಜ್ಯದ ಅಸ್ತಿತ್ವವು ಬುದ್ಧಿಗ್ರಾಹ್ಯವಾಯಿತು. ಪರಮಾರ್ಥ ಪೂರ್ಣರಾದ ಮಾರಿಸ್ ಮೆಟರ್ ಲಿಂಕರ ವಿಚಾರಗಳು ಈತನ ಪಾರಮಾರ್ಥಿಕ ಶ್ರದ್ಧೆಗೆ ಹೆಚ್ಚಿನ ಕಳೆಯನ್ನಿತ್ತವು. ನಾಯಕನಿಗೆ ಈ ಕಾಲದಲ್ಲಿ ಶ್ರದ್ಧೆಯು ಸಂಪೂರ್ಣ ಅಸಂದಿಗ್ಧವಾಗಿತೆಂಬ ಅರ್ಥವೆಲ್ಲಿ. ಈವರೆಗಿನ ಬುದ್ಧಿಗೆ ಸತ್ಯವೆಂದು ಅನ್ನಿಸುವುದಕ್ಕೆ ಮಾರ್ಗವಿಲ್ಲದ ಮಾತುಗಳನ್ನೆಲ್ಲಾ ಸತ್ಯವಾಗಿರಬಹುದೆಂದು ಗ್ರಹಿಸುವುದೊಂದು ಕಲೆಯು ಮಾತ್ರ. ಅಹುದೇ ಇಲ್ಲವೋ ಎಂದು ನಿರ್ಧರಿಸಿಕೊಳ್ಳುವ ನಸುಬೆಳಕಿಗೆ ಬಂದು ಮುಟ್ಟಿರುವುದೆಂದು ಹೇಳಬಹುದು. ನನ್ನ ಕಣ್ಣು ಕಟ್ಟಿದ ಕಗ್ಗತ್ತಲೆಯನ್ನು ನಿವಾರಿಸು, ಬೆಳಕಿಗೆ ಹಸಿದು ಬಾಯಿ ಬಿಡುವೆ, ತಮಸೋಮ ಜ್ಯೋತಿರ್ಗಮಯ."[೨೨]

ಈ ಕೊನೆಯ ಸಾಲುಗಳನ್ನು ನೋಡಿದಾಗ ಬಿ.ಎಂ.ಶ್ರೀ. ಅವರು 'ಕರುಣಾಳು ಬಾ ಬೆಳಕು ಮಬ್ಬಿದೀ ಮಸುಕಿನಲಿ' ಕೈಹಿಡಿದು ನಡೆಸೆನ್ನನು ಹಾಗೆ ಇಂಗ್ಲೀಷ್ ಕವಿ Benjhons onನ "Hymun to Intelactual Beauty" ಎಂಬ ಪದ್ಯಗಳು ನೆನಪಿಗೆ ಬರುತ್ತವೆ.

ಅರವಿಂದರ ಗ್ರಂಥಗಳಲ್ಲಿ ಜಗತ್ತಿನ ಆಗುಹೋಗುಗಳ ಸ್ಥಾನ ಕಾಲನಿಮಿತ್ತಗಳೆಲ್ಲಾ ಕಲ್ಪಾರಂಭದಲ್ಲೆ ನಿಶ್ಚಿತವಾಗಿಬಿಟ್ಟಿವೆ. ಅವುಗಳ ಸಲುವಾಗಿ ವ್ಯಾಕುವಾಗಬೇಡ ಎಂದು ಹೇಳಿದ ವಾಕ್ಯವನ್ನು ನಂಬುವುದಾದರೆ ವ್ಯಾಕುಲತೆ ಎಂಬುದು ಹೇಳಹೆಸರಿಲ್ಲದಂತೆ ಓಡಿ ಹೋಗಲಿಕ್ಕೆ ಸಾಧ್ಯವಿದೆ. ಈಗ ಜ್ಞಾನಭಿಕ್ಷು ಎರಡು ಉಪಾಯಗಳನ್ನು ಶೋಧಿಸಿ ತೆಗೆದನು ೧. ಜ್ಯೋತಿಷ್ಯದ ಸತ್ಯತೆಯು ಮನವರಿಕೆಯಾಗಬೇಕಾದರೆ ಜಗತ್ತಿನ ಸರ್ವ ಘಟನೆಗಳ ಹ್ರಾಸ, ವೃದ್ಧಿಗಳ, ಕಾಲ, ಸ್ಥಾನ ನಿಮಿತ್ತಗಳು ನಿಶ್ಚಿತವಾಗಿಯೇ ಇವೆ ಇಂದು ಸುಲಭವಾಗಿ ನಂಬಬಹುದು.

೨. ಪ್ರಯೋಗದ ಸಲುವಾಗಿ ಒಂದೆರಡು ವ್ಯಕ್ತಿಗಳನ್ನು ಆರಿಸಿಕೊಂಡು ಅವರೊಡನೆ ಐಕ್ಯದಿಂದ ಇರಲಿಕ್ಕೆ ಬೇಕು. ಇದರಿಂದ ಐಕ್ಯ ಪಥದ ವಿಘ್ನಗಳೇನೆಂಬುದನ್ನು ಹೇಗೆ ಅವುಗಳ ನಿವಾರಣೆಯಾಗುವುದೆಂದು ಗೊತ್ತಾಗುವುದರಿಂದ ಮುಂದೆ ಐಕ್ಯಸಾಧನದ ಪರಿಘನವನ್ನು ವಿಸ್ತರಿಸಿಕೊಳ್ಳಲಿಕ್ಕೆ ಸಾಧ್ಯವಾಗುವುದು."[೨೩]

"ಮಾನವ ಜೀವಿತದ ಘೋರ ಸ್ವರೂಪವನ್ನು ಕುರಿತು ಭೂಲೋಕದ ಭಯಾನಕ ಪರಿಸ್ಥಿತಿಯಿಂದ ದೂರವಾಗಿರುವ ಒಂದು ಸ್ಥಳದಲ್ಲಿ ಕೂಡಿಕೊಂಡು ಶಾಂತವಾಗಿ ಜೀವಿಸಬೇಕೆಂದು ನಿರ್ಧರಿಸಿಕೊಂಡೆವು. ನಮ್ಮ ಆಸ್ತಿ ಪಾಸ್ತಿಯನ್ನೆಲ್ಲಾ ಒಂದೆ ಗಂಟಾಗಿ ಮಾಡಿಕೊಂಡು ತನ್ನದೂ ನನ್ನದು ಎಂಬ ಭೇದ ವಿಲ್ಲದೆ ಸರ್ವರೂ ಒಂದಾಗಿದ್ದುಕೊಂಡು ಜೀವಿಸುವುದರಿಂದ ಮನಶ್ಯಾಂತಿ ದೊರಕುವುದು ಎಂದು ಬಾವಿಸಿದೆವು. ಕೆಲವರು ವಿವಾಹಿತರಾಗಿದ್ದರಿಂದ ನಾವು ಮಾಡಿಕೊಂಡ ವಿರ್ಪಾಡು ಪತ್ನಿಯರಿಗೆ ಸರಿಹೋಗದಿದ್ದರಿಂದ ನಮ್ಮ ಆಲೋಚನೆಯೆಲ್ಲಾ ನಿರರ್ಥಕವಾಯಿತು."[೨೪]

"ಒಬ್ಬೊಬ್ಬ ವ್ಯಕ್ತಿಯು ಭಿನ್ನ ಪ್ರಕೃತಿಯಿಂದ ಕೂಡಿರುತ್ತಾನೆ. ನಮ್ಮ ನಾಯಕನು ವ್ಯಾಸಂಗಿ ಮಹತ್ವಾಕಾಂಕ್ಷಿ ಆದರೆ ಅನಿಗ್ರಹಿ ಈತನ ಸತಿಯು ಅಶಿಕ್ಷಿತಳು, ಅರಿಯದವಳು ಸ್ವಾಭಾವಿಕವಾಗಿ ನಿರ್ವಿಕಾರಳು, ಈತನ ಮಿತ್ರ ಅಲ್ಪ ವ್ಯಾಸಂಗಿ ಆದರೆ ಮಹಾವ್ಯಕ್ತಿ. ಇವರ ಪ್ರೇಮ ಪ್ರಯೋಗವು ಎಷ್ಟೋ ಬಾರಿ ಮೂರು ಬಟ್ಟೆಗೆ ಬಂದು ಶುದ್ಧ ಹೃದಯ ಸರ್ವರಿಗೂ ಸಮಾನವಾಗಿದ್ದರಿಂದ ಗಮ್ಯಕ್ಕೆ ಬಂದು ಮುಟ್ಟಿದರು."[೨೫]

ಶ್ರೀ ಅರವಿಂದರ ಹಲವಾರು ಗ್ರಂಥಗಳು ಹಾಗೂ ಏ.ಈ. ಅವರ ದರ್ಶನ ದೀಪಿಕೆಯ ಕೂಲಂಕುಷವಾದ ವ್ಯಾಸಂಗ ಆ ಪ್ರಥಮ ಪರಿಚಯವನ್ನು ಗಟ್ಟಿಗೊಳಿಸಿ ಅಂತ ಮಾನಸ ಸಾಮ್ರಾಜ್ಯ ಬುದ್ಧಿಗ್ರಾಹ್ಯವಾಗುವಂತೆ ಮಾಡುತ್ತದೆ. ಈ ಎಲ್ಲಾ ಸಾಧನೆಯ ಜೊತೆಗೆ ಜಗತ್ತಿನ ಆಗುಹೋಗುಗಳ ಸ್ಥಾನ, ಕಾಲ, ನಿಮಿತ್ತಗಳನ್ನು ಅರಿಯಲು ಜ್ಯೋತಿಷ್ಯ ಶಾಸ್ತ್ರವನ್ನು ಜ್ಞಾನ ಭಿಕ್ಷು ಅರಿದು ಒರೆದು ನೋಡಿದ್ದುಂಟು, ಸತಿ ಸ್ನೇಹಿತರೊಂದಿಗೆ ಅನ್ಯೋನ್ಯ ಸಾಮರಸ್ಯ ಪಡೆಯಲು ಯತ್ನಿಸಿದ್ದುಂಟು ಇವು ಕೂಡಾ ಆಧ್ಯಾತ್ಮ ಪೋಷಣೆಗೆ ಪೋಷಕವಾದ ಅಂಶಗಳೆ.

"ಜ್ಞಾನ ಭಿಕ್ಷುವಿನ ೨೬ನೆ ವಯಸ್ಸಿನಲ್ಲಿರುವ ರೌದ್ರಕರುಣೆ ಒಂದು ಮಹತ್ವದ ಘಟ್ಟವಾದರೆ ಅದೇವಯಸ್ಸಿನಲ್ಲಿ ದೊರೆತ ಪ್ರಗಾಢ ಸ್ಪರ್ಶ ಇನ್ನೊಂದು ಚಿರಸ್ಮರಣೀಯ ಘಟನೆಯಾಗಿದೆ. ಮೊದಲನೆಯದರಲ್ಲಿ ದೇವರ ಬಗೆಗೆ ವಿಪರೀತ ಬಾವನೆ ಉಂಟಾಗಿ ಜಗತ್ತಿನ ಚಲನವಲನಕ್ಕೆ ಒಂದು ಒಂದು ಮಹಾನಿಯಮ ಉಂಟೇ ಹೊರತು ದಯಾಸಿಂಧುವಾದ ದೇವನೂನಿಲ್ಲ ಎಂಬ ತೀರ್ಮಾನಕ್ಕೆ ಬರುವಂತಾಗಿದ್ದರೆ. ಎರಡನೆಯವರಲ್ಲಿ ಆಸ್ತಿಕ್ಯವೇದದ ಬೆಳಕು ಮೂಡಿ ಅಗಾಧವಾದ ದರ್ಶನ ದೊರಕುವಂತಾಗುತ್ತದೆ. ಇದಿಷ್ಟು ಎರಡನೆ ಖಂಡದ ತಿರುಳು."[೨೬]

"ಪೂರ್ವರಂಗದ ಉತ್ತರ ಭಾಗದಲ್ಲಿ ಮಧುರಚೆನ್ನರು ಶ್ರೀ ಅರವಿಂದರ ವಿಚಾರಗಳಿಗೆ ಹೆಚ್ಚಿನ ಮಹತ್ವ ಕೊಟ್ಟಿದುದನ್ನು ಕಾಣಬಹುದು. ಹಾಗಿದ್ದು ಸ್ವಯಂ ಸಾಧನೆ ಅದರಿಂದ ಪಡೆದಿರುವ ಅನುಭವವೇ ಮುಖ್ಯವಾದವುಗಳೆಂಬುದನ್ನು ಅವರು ಅರಿತಿದ್ದಾರೆ. ಅರಿತುದನ್ನು ಆಚರಣೆಗೆ ತಂದಿದ್ದಾರೆ. ಮನಸ್ಸನ್ನು ನಿಯಂತ್ರಿಸಬೇಕನ್ನುವ ಯೋಗದ ಬಹುಮುಖ್ಯ ಸಾಧನೆ ವಿಚಾರ ನಿರಸ್ತಂಗೀಕರಣದಲ್ಲಿ ಎದ್ದು ಕಾಣುತ್ತದೆ.

ಉಪನಿಷತ್ತು ಗೀತೆ ಇವೇ ಮೊದಲಾದ ಗ್ರಂಥಗಳಲ್ಲಿಯ ಉಕ್ತಿಗಳು, ಈ ಭಾಗದಲ್ಲಿ ವಿಶೇಷ ಅವಕಾಶವನ್ನು ಪಡೆಯುತ್ತವೆ. ಆಧ್ಯಾತ್ಮ ಸಾಧಕನು ಜ್ಯೋತಿಷ್ಯದಲ್ಲಿ ಮುಂದುವರಿಯಬಲ್ಲನೆ ಎಂಬ ಪ್ರಶ್ನೆಯನ್ನು ಬಿಡಿಸುವ ಪ್ರಯತ್ನವೂ ಈ ಭಾಗದಲ್ಲಿ ನಡೆದಿದೆ. 'ರೌದ್ರ ಕರುಣೆ' ಪ್ರಗಾಢಸ್ಪರ್ಶ ಎಂಬ ಅಧ್ಯಾಯಗಳು ಒಬ್ಬ ಸಾಧಕನ ಜೀವನದ ಎರಡು ಅವಸ್ಥೆಗಳನ್ನು ಸ್ಪಷ್ಟವಾಗಿ ಚಿತ್ರಿಸುತ್ತವೆ. ಇಲ್ಲಿ ಮಧುರಚೆನ್ನರ ಅಂತರಂಗಿಕ ತಳಮಳವೆಲ್ಲಾ ಸೂರೆಗೊಂಡಿದೆ. ಉಳಿದ ಅಧ್ಯಾಯಗಳಲ್ಲಿ ಕೆಲವು ಆಧ್ಯಾತ್ಮಿಕ ಗ್ರಂಥಗಳು. ಅವುಗಳ ವಿಚಾರಗಳು ಬಂದು ಪೂರ್ವರಂಗವು ಕಥೆಯ ರೀತಿಯನ್ನು ಕಳೆದುಕೊಂಡು ವಿವೇಚನಾ ರೀತಿಯಲ್ಲಿ ಸಾಗಿದರೆ. ಇಲ್ಲಿ ಕಥಾ ನಾಯಕ ಆತನ ಜೀವಂತ ಹೋರಾಟ ಅದರ ಸ್ಪಷ್ಟ ಹಾಗೂ ನೇರ ಚಿತ್ರಣ ಬಂದು ಕಥೆಯ ತಿರುವಿಗೆ ಇಲ್ಲಿಯ ತಾತ್ವಿಕ ವಿಚಾರಗಳು ಕಥೆಯ ನಿರೂಪಣೆಯಂಥವು ಬಂದು ಹೆಚ್ಚಿನ ಆಕರ್ಷಣೆಯನ್ನು ನೀಡುತ್ತವೆ.

ಪ್ರಗಾಢಸ್ಪರ್ಶದ ಅನುಭವವಂತೂ ಕಾದಂಬರಿಯೊಂದರ ಕುತೂಹಲಕಾರಿಯಾದ ಸನ್ನಿವೇಶದಂತಿದೆ, ಪವಾಡ ದೃಶ್ಯವೂ ಆಗಿದೆ. ಸಾಧಕನು ಸರ್ವಪತನಗಳಲ್ಲಿಯೂ ಪರ್ಯಾಯದಿಂದ ತನ್ನ ಪ್ರಗತಿಯೇ ನಡೆದಿದೆಯೆಂಬ ಸಂಪೂರ್ಣ ಶ್ರದ್ಧೆಯುಳ್ಳವನಾಗಿರಲಿಕ್ಕೆ ಬೇಕು. ಸತ್ಯವಾಗಿಯೂ ಆತನಿಗೆ ಯೋಗಸಿದ್ಧಿ ತಪ್ಪಿದ್ದಲ್ಲ ಪರಮಾತ್ಮನು ಪೂರ್ಣ ಮಂಗಲ ಮಯನೆಂಬ ಮಾತು ನೆನಪಿರಲಿ. ಸಮಗ್ರ ಜಗತ್ತನ್ನಾಳುವ ಶಕ್ತಿಗೆ ಕನಿಷ್ಟ ಪಕ್ಷಕ್ಕೆ ನಿನಗಾದರೂ ಬುದ್ದಿಯಿಲ್ಲದೇಯಿಲ್ಲ ಎಂಬುದನ್ನು ಮರೆಯದಿರು" ಈ ಮುಂತಾದ ವಿಚಾರಗಳನ್ನು ಮಧುರಚೆನ್ನರು ಅನುಲಕ್ಷಿಸಿದಾಗ ದೇವರ ಬಗೆಗೆ, ಆತನ ಇರುವಿಕೆಯ ಬಗೆಗೆ ಇದ್ದ ಅಪನಂಬಿಕೆ ತಾನೇ ತಾನಾಗಿ ಕಡಿಮೆಯಾಗುತ್ತದೆ. ಅನಂತರ ಬೆಳಗಿನಲ್ಲಿ ಮಧುರಚೆನ್ನರು ಪಡೆದ ಪ್ರಗಾಢ ಸ್ಪರ್ಶ ಅನಾದೃಶ್ಯವಾದುದು. ಅದು ನನ್ನನಲ್ಲದಲ್ಲಿ ಒಂದು ರೀತಿಯಿಂದ ಬಂದಿದ್ದರೆ. ಇಲ್ಲಿ ಇನ್ನೊಂದು ರೀತಿಯಿಂದ ವ್ಯಕ್ತವಾಗಿದೆ.

ಈ ಪ್ರಗಾಢ ಸ್ಪರ್ಶದ ವರ್ಣನೆಯನ್ನು ಓದುತ್ತಿದ್ದಂತೆ, 'ನನ್ನ ನಲ್ಲ'ದ ನಾಲ್ಕನೆ ಎಸಳಿನ ಪದ್ಯ ಭಾಗವೇ ಇಲ್ಲಿ ಗದ್ಯರೂಪ ದರಿಸಿದುದು ಕಂಡುಬರುತ್ತದೆ. ಹಾಗಿದ್ದರೂ ಇಲ್ಲಿಯ ಗದ್ಯ ಅಲ್ಲಿಯ ಪದ್ಯಕ್ಕಿಂತ ಪ್ರಶಸ್ತವಾಗಿದೆ. ಹೃದ್ಯವಾಗಿದೆ ಸೊಗಸಾದ, ಗಂಭೀರವಾದ ಆಧ್ಯಾತ್ಮಿಕ ಬಾವತುಂಬಿದ ಇಲ್ಲಿಯ ವರ್ಣನೆ ಓದುಗರನ್ನು ಒಂದು ಕಲ್ಪನಾ ಲೋಕದಲ್ಲಿ ಮೈಮರೆಯುವಂತೆ ಮಾಡುತ್ತದೆ, ಅಷ್ಟಲ್ಲದೆ ಇದು ಬರಿಯ ಗದ್ಯ ಎನಿಸದೆ ಒಂದು ಕಾವ್ಯ ಭಾಗ ಇಲ್ಲಿ ಕಾಣುತ್ತದೆ. ಮಧುರಚೆನ್ನರ ಗದ್ಯ ವೈಶಿಷ್ಟ್ಯವಾಗಿಯೂ ನೋಡಬಹುದು."[೩೩]

ಈ 'ಪೂರ್ವರಂಗ' ಕೃತಿಯನ್ನು ಎಂ.ಎ. ವೆಂಕಟರಾವ್ ಅವರು ವಿಮರ್ಶೆಮಾಡುತ್ತಾ ಕೆಲವು ಮಹತ್ವದ ಮಾತುಗಳನ್ನು ಹೇಳಿದ್ದಾರೆ.

"ಇಂಥ ಆಧ್ಯಾತ್ಮಿಕ ಕಥೆಯು ಬಹುಶಃ ಆಧುನಿಕ ಕನ್ನಡ ಪ್ರಪಂಚಕ್ಕೆ ಇದೇ ಮೊದಲನೆಯದು. ಇದರಲ್ಲಿ ಚಿತ್ರಿಸುವ ಸಾಧನ ಕ್ರಮವನ್ನು ನೋಡಿದರೆ ಗ್ರಂಥಕರ್ತರು ಬಹಳ ಆಲೋಚನಾ ಪರರೆಂದು

ಸತ್ಯಾನ್ವೇಷಿಗಳೆಂದು ಧಾರಾಳವಾಗಿ ಹೇಳಬಹುದು. ಬೈಬಲ್, ಕುರಾನ್, ಸೆಂಟ್ ಆಗಸ್ಟಿನ್‌ರ ಆತ್ಮಕಥೆ ಮೊದಲಾದ ವಿದ್ವದ್‌ಗ್ರಂಥಗಳನ್ನು ಉದಾಹರಿಸುವುದು ಅವರ ಉದಾರ ಮನಸ್ಸನ್ನು ವಿಶಾಲ ದೃಷ್ಟಿಯನ್ನು ವ್ಯಕ್ತಗೊಳಿಸುತ್ತವೆ. ಆದರೆ ಇಲ್ಲಿ ಹೇಳಿರುವುದಷ್ಟನ್ನು ಎಣಿಕೆಗೆ ತೆಗೆದುಕೊಂಡರೆ ಸತ್ಯಾನ್ವೇಷಣೆಯು ಇಷ್ಟು ಸಣ್ಣ ಗ್ರಂಥದಲ್ಲಿ ಆಗಬಹುದಾದಷ್ಟು ಸಂಪೂರ್ಣವಾಗಿ ನಡೆದಿದೆ ಎಂದಾಗಲಿ. ಕ್ರಮಬದ್ಧವಾಗಿದೆಯೆಂದಾಗಲಿ ಹೇಳಲಿಕ್ಕಾಗುವುದಿಲ್ಲ" ಎಂದು ಮುಂತಾಗಿ ನುಡಿದಿರುವ ಅವರು ಈ ಗ್ರಂಥ ತತ್ವಶಾಸ್ತ್ರ ಪ್ರಮಾಣಗಳ ಮಾತೆ ಇಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ತಾತ್ವಿಕ ವಿಷಯಗಳನ್ನು ಒಳಗೊಳ್ಳುವ ಈ ಕೃತಿಯಲ್ಲಿ ತತ್ವಶಾಸ್ತ್ರದ ಪ್ರಮಾಣಗಳನ್ನು ಹುಡುಕುವುದು ಸಂಪೂರ್ಣ ತಪ್ಪೇನು ಅಲ್ಲ. ಆದರೆ ಇದು ತತ್ವ ನಿರೂಪಣೆಗಾಗಿಯೇ ಬರೆದ ಗ್ರಂಥದಲ್ಲಿ ಎಂಬುದನ್ನು ವಿಮರ್ಶಕರು ಗಮನಿಸುವುದು ಅವಶ್ಯಕವಾಗಿದೆ ಮಧುರಚೆನ್ನರ ಸ್ವತಃ ಆ ಮಾತಿಗೆ ಒಂದೆಡೆಯಲ್ಲಿ ಉತ್ತರ ಹೇಳಿದ್ದಾರೆ. ಪೂರ್ವರಂಗವು ತತ್ವಜ್ಞಾನದ ಪುಸ್ತಕವೇ ಅಲ್ಲ. ಒಂದು ಅನುಭಾವ ಪಡೆದ ಚಿಕ್ಕನಕ್ಷೆ ಮಾತ್ರ. ಅಷ್ಟಲ್ಲದೆ ಇದು ಪ್ರಾರಂಭದ ಸಾಧನೆಯನ್ನು ಚಿತ್ರಿಸುವ ಕೃತಿ. ಇಲ್ಲಿಯ ಕ್ರಮಬದ್ಧತೆ ವ್ಯಕ್ತಸಾಧನೆಯ ಕ್ರಮಬದ್ಧತೆಯನ್ನು ಅನುಸರಿಸುತ್ತದೆ ಎಂಬುದನ್ನು ಮರೆಯುವಂತಿಲ್ಲ.

ಹಾಗಿದ್ದರೂ ಈ ಕೃತಿ ಅನುಭಾವಮಾರ್ಗಕ್ಕೆ ನಿಶ್ಚಿತದಾರಿ ತೋರುವಂತಹುದಲ್ಲ ಇಲ್ಲಿಯದು ವ್ಯಕ್ತಿನಿಷ್ಠವಾದ ಸಾಧನೆಯಾಗುತ್ತದೆಯೆ ಹೊರತು. ಸರ್ವ ಸಾಮಾನ್ಯವಾದ ಕೆಲವು ನಿರ್ದಿಷ್ಟ ಸ್ಥಳಗಳನ್ನಾಗಲಿ, ಮೆಟ್ಟಿಲುಗಳನ್ನಾಗಲಿ ಸೂಚಿಸುವಂತದ್ದಲ್ಲ ಅಲ್ಲಲ್ಲಿ ಬರುವ ನಿರ್ದಿಷ್ಟ ಸ್ಥಲಗಳನ್ನಾಗಲಿ, ಮೆಟ್ಟಿಲುಗಳನ್ನಾಗಲಿ ಸೂಚಿಸುವಂತದ್ದಲ್ಲ ಅಲ್ಲಲ್ಲಿ ಬರುವ ಮಹಾನುಭಾವರ ವಿಚಾರಗಳು ಸ್ವತಃ ಮಧುರಚೆನ್ನರು ನಡೆಸಿದ ಸಾಧನೆಯ ಹೋರಾಟದ ಕೆಲವು ಸನ್ನಿವೇಶಗಳು ಒಂದೊಂದು ರೀತಿಯಿಂದ ಆಧ್ಯಾತ್ಮ ಸಾಧಕನಿಗೆ ತೊರುವಂತಿವೆಯೆಂದು ಮಾತ್ರ ಹೇಳಬಹುದು."[೨೯]

೪.೨. ಕಾಳರಾತ್ರಿ

ಮಾನವನ ಪುರುಷಾರ್ಥ ಸಿದ್ಧಿಗೆ ಹಲವು ಮಾರ್ಗಗಳು ತೆರೆದುಕೊಂಡಿರುತ್ತವೆ. ಇವುಗಳನ್ನು ಎರಡು ರೀತಿಯಾಗಿ ನೋಡಬಹುದು ೧. ನಿವೃತ್ತಿ ಮಾರ್ಗ, ೨. ಜ್ಞಾನ ಮಾರ್ಗ.

ನಿವೃತ್ತಿಮಾರ್ಗದಲ್ಲಿ ಪ್ರಾಪಂಚಿಕ ಬಂಧನದಿಂದ ಆತ್ಮವನ್ನು ಬಿಡಿಸಿ, ಕೊನೆಗೆ ಅದನ್ನು ತನ್ನ ಸ್ವರೂಪದಲ್ಲಿ ನಿಲ್ಲಿಸುವುದೇ ಪುರುಷಾರ್ಥ ಎಂದು ಸಾರುವುದು ಒಂದು ಮಾರ್ಗ, ಸಂಖ್ಯಾಯೋಗ ಮತ್ತು ನ್ಯಾಯ ವೈಷಿಕಗಳು ಒಟ್ಟಿನಲ್ಲಿ ಈ ಜಾತಿಗೆ ಸೇರುತ್ತವೆ. ಪಾತಂಜಲಯೋಗವು ಈ ಮಾರ್ಗದ ಹಂತಗಳಾದ ಪ್ರತ್ಯಾಹಾರ, ದಾರಣ, ದ್ಯಾನ, ಸಮಾದಿಗಳ ಮೂಲಕ ಖಚಿತವಾಗಿ ವರ್ಣಿಸಿದೆ. ಪುರುಷನೇ ಬೇರೆ ಆತನ ಮನಸ್ಸು ಇಂದ್ರಿಯಗಳು, ದೇಹ ಇವೆಲ್ಲಾ ಪ್ರಕೃತಿಗೆ ಸೇರಿದವು. ಮನಸ್ಸಿನಲ್ಲಿ ಎಡೆಬಿಡದೆ ಮೂಡುವ ಜ್ಞಾನ, ಭಾವ, ಸಂಕಲ್ಪಗಳ ಅಲೆಗಳನ್ನು ಬೇರುಸಹಿತ ಕಿತ್ತೊಗೆದರೆ ಪುರಷನ ನೈಜಕಾಂತಿ ಬೆಳಗುವುದು. ಶಾಂತವಾದ ಸರೋವರದಲ್ಲಿ ಆಕಾಶವು ಪ್ರತಿಬಿಂಬಿಸುವಂತೆ ಆತ್ಮನು ಸರ್ವಜ್ಞನಾಗುವನು. ಅದೇ ಮೋಕ್ಷ ಶಾಶ್ವತ ಸ್ವರೂಪ, ಅನುಭವದ ಪದವಿ. ಈ ಸ್ಥಿತಿಯಲ್ಲಿ ಪ್ರಪಂಚದ ವಿಚಿತ್ರ ವೈಭವಗಳು ಮರೆಯಾಗುವವು, ಮುಕ್ತ ಪುರುಷನ ಪಾಲಿಗೆ ಅವು ನಾಶವಾದಂತೆಯು ಹೌದು ಹೀಗೆನ್ನುವುದು ನಿವೃತ್ತಿ ಮಾರ್ಗದ ತತ್ವ, ಈ ಮಾರ್ಗವು ಬಹು ಕಷ್ಟ ಸಾಧ್ಯ ಇದಕ್ಕೆ ಸಂಪೂರ್ಣ ವೈರಾಗ್ಯವೂ ಬೇಕು. ಕಠೋರವಾದ ಚಿತ್ತದ ಏಕಾಗ್ರತೆಯು ಅವಶ್ಯಕ.

ಜ್ಞಾನ ಮಾರ್ಗದಲ್ಲಿ ಪ್ರಸಿದ್ಧವಾದ ಭಕ್ತಿಮಾರ್ಗ ಮತ್ತು ಕರ್ಮ ಮಾರ್ಗಗಳು ಪರಿ ಸಮಾಪ್ತಿ ಹೊಂದುತ್ತವೆ. ಜ್ಞಾನಮಾರ್ಗದ ದಿಕ್ಕು ಬೇರೆ ಪ್ರಪಂಚಾನ್ನು ಕೊಡವಿಹಾಕಿ ಅದರಿಂದ ನಿವೃತ್ತಿ ಹೊಂದುವ ಬದಲು ಸ್ಥಾನಗಳನ್ನು ಪರಮಾರ್ಥಿಕ ದೃಷ್ಟಿಯಿಂದ ಅರಗಿಸಿಕೊಂಡು ಮೋಕ್ಷವನ್ನು ಸಾಧಿಸುವುದು ಈ ಜ್ಞಾನ ಮಾರ್ಗ ಲಕ್ಷಣ. ಈ ಜ್ಞಾನ ಮಾರ್ಗವನ್ನು ಅವಲಂಬಿಸುವವರಿಗೂ ಸಾಧನ ಸಂಪತ್ತು ಹೇರಳವಾಗಿರಬೇಕು ನಮ್ಮ ದರ್ಶನ ಶಾಸ್ತ್ರಗಳು ಈ ಮಾರ್ಗವನ್ನು ಹೆಚ್ಚಾಗಿ ವರ್ಣಿಸಿವೆ.

ಅದರ ರಹಸ್ಯವನ್ನು ಬೇದಿಸಿ ರಚನೆಯನ್ನು ಕಂಡುಹಿಡಿದು, ಸೃಷ್ಟಿಯಲ್ಲಿ ಪರಮಾತ್ಮ ಪಾಶ್ಚಾತ್ಯರಲ್ಲಿ ಯೋಗಾನುಭವವನ್ನು ಪ್ರತಿಪಾದಿಸುವ ಗ್ರಂಥವನ್ನು ನೋಡಿದರೆ ಇವೆರಡು ವಿಧದ ಹಾದಿಗಳು ಅವಲಂಬಿಸಲ್ಪಟ್ಟಿರುವುದು ಸ್ಪಷ್ಟ ಪಡಿಸುವುತ್ತದೆ. ಜೀವನು ಪ್ರಪಂಚಾನುಭವವನ್ನು ಮನನಮಾಡಿ ಬೇರೆ ತತ್ವವನ್ನು ಗ್ರಹಿಸಲು ಹಾತೊರೆಯುತ್ತಾನೆ. ಹಲವು ಗ್ರಂಥಗಳನ್ನು ಪಠಣ ಮಾಡುತ್ತಾನೆ ಬಗೆಬಗೆಯ ಆಲೋಚನೆಗಳು ತಲೆ ದೋರುತ್ತವೆ. ಒಮ್ಮೆ ಪ್ರಪಂಚವು ಅರ್ಥರಹಿತವಾದ ಮಾಯಾಜಾಲ ಎಂದು ತೋರುತ್ತದೆ. ಅಂತರಂಗದಲ್ಲಿ ಮೂಡಿಬಂದ ನಿರಾಶೆ, ಆಶ್ಚರ್ಯ, ಭಯಗಳು, ಸಾಧಕನನ್ನು ಬಾಧಿಸುತ್ತವೆ. ಆಗಸಾಧಕನು ಹುರುಪುಗೊಂಡು ಸಾಧನೆ ಮಾಡುತ್ತನೆ. ಮಾನವನ ಹೃದಯವು ವೀಣೆಯಂತೆ ಅನಂತಪಾವ ಭಾವ ತರಂಗಗಳನ್ನು ಎಬ್ಬಿಸುತ್ತದೆ. ಇಂತಹ ಅನುಭವ ಲಹರಿಗಳನ್ನು ಚಿತ್ರಿಸುವ ಸಾಹಿತ್ಯವು ತನ್ನದೇ ಆದ ಒಂದು ಸೀಮೆಯನ್ನು ರಚಿಸಿಕೊಂಡಿದೆ.

ಇದು ತತ್ವಶಾಸ್ತ್ರದ ಕೈಗೆ ಸಿಕ್ಕುವಂತಹುದಲ್ಲ ಕಾವ್ಯದ ನಿಯಮಗಳನ್ನು ಬಳಿಸಾರುವುದಿಲ್ಲ ಭಾವನೆಯ ಆವೇಶವನ್ನು, ಅನುಭವದ ಸಾರ ಮತ್ತು ವೈಚಿತ್ರ್ಯ ಮೂಡಿದ ರೀತಿಯಲ್ಲಿ ರೂಪುಗೊಳ್ಳುತ್ತದೆ ಪೂರ್ವರಂಗ ಕಾಳರಾತ್ರಿಗಳು ಈ ತೆರನಾದ ಸಾಹಿತ್ಯಕ್ಕೆ ಸೇರಿದವುಗಳಾಗಿವೆ. ಒಬ್ಬ ವಿಚಾರ ಪರನಾದವ್ಯಕ್ತಿಯು ಸತ್ಯ ಸೌಂದರ್ಯ ಧರ್ಮಗಳ ಮರ್ಮವನ್ನು ಸಾಕ್ಷಾತ್ಕರಿಸಬೇಕೆಂದು ಹೊರಟ ದಾರಿಯಲ್ಲಿ ಪಡೆದ ಅನುಭವವನ್ನು ಯತಾಸ್ಥಿತಿಯಾಗಿ ಒಂದು ಆತ್ಮ ಕಥೆಯ ರೂಪದಲ್ಲಿ ಈ ಗ್ರಂಥಗಳು ಚಿತ್ರಿಸುತ್ತವೆ. ಜ್ಞಾನ ಭಿಕ್ಷುವು ಇಲ್ಲಿಯ ಕಥಾನಾಯಕನು ಪೂರ್ವರಂಗದಲ್ಲಿ ಅದು ಕ್ಷಣದಲ್ಲಿ ಇಳಿದುಹೋಗುವ ಆವೇಶಮಂತ್ರ ಕಗ್ಗತ್ತಲಲ್ಲಿ ಸಿಕ್ಕು ತನ್ನ ಪ್ರಯಾಣವನ್ನು ಮುಂದುವರೆಸುತ್ತಾನೆ. ಅರವಿಂದರ ಸಂದೇಶವೂ ಉಪನಿಷತ್ ವಾಕ್ಯಗಳು. ರೋರ್ಮ ರೊಲಾರವರ ಮಾತುಗಳು ಸಾಧುಸಂತರ ಅನುಭವಗಳು ಪುನರ್ಮನನ ಮಾಡಲ್ಪಡುತ್ತವೆ."

ಕಾಳರಾತ್ರಿ ಮಧುರಚೆನ್ನರ ಆಧ್ಯಾತ್ಮಿಕ ಸಾಧನೆಯ ಎರಡನೇ ಘಟ್ಟಕ್ಕೆ ಸಂಬಂಧಿಸಿದ ಗ್ರಂಥ. ಇದಕ್ಕೆ 'ಮದ್ಯರಂಗ'ವೆಂಬ ಇನ್ನೊಂದು ಹೆಸರನ್ನು ಸೂಚಿಸಿದ್ದಾರೆ.

ಪೂರ್ವರಂಗದ ಕೊನೆಯಲ್ಲಿ ದೇವನ ಅಸ್ತಿತ್ವದ ಸ್ಪಷ್ಟ ಅರಿವು ಮೂಡಿದ್ದು ಮಧುರಚೆನ್ನರ ಜೀವನದಲ್ಲಿ ಒಂದು ಮರೆಯಲಾರದ ಘಟನೆ. ಅದು ಅವರ ೧೪ ವರ್ಷಗಳಕಾಲದ ದೀರ್ಘ ಸಾಧನೆಯಿಂದ ಪಡೆದ ಒಂದು ದಿವ್ಯಾನುಭವ. ಅಂದರೆ 'ಪೂರ್ವರಂಗ' ಗ್ರಂಥದಲ್ಲಿಯ ವಿಷಯ ಮಧುರಚೆನ್ನರ ಜೀವನದ ಆಧ್ಯಾತ್ಮಿಕ ಸಾಧನೆಯ ಘಟ್ಟದ ೧೪ ವರ್ಷಗಳ ಕಥಾನಕವಾಗಿದೆ. ಅದರ ಮುಂದಿನ ಕಥೆಯೇ ಈ 'ಕಾಳರಾತ್ರಿಯ' ವಸ್ತು ಇದು ಅಷ್ಟು ದೀರ್ಘಕಾಲಿಕವಾದುದಲ್ಲ ಕೇವಲ ಮೂರು ವರ್ಷಗಳ ಸ್ಥಿತಿಗೆ ಸಂಬಂಧಿಸಿದುದು.

129753

'ಕಾಳರಾತ್ರಿ' ಒಂದು ಅಖಂಡ ಕೃತಿಯ ತುಂಡಾಗಿದ್ದರೂ ಅದಕ್ಕೆಂದು ಸ್ವತಂತ್ರ ಅಸ್ತಿತ್ವವಿದೆ. ಈ ಮಾತು ಬೆಳಗು ಕೃತಿಗೂ ಅನ್ವಯಿಸುವುದಾದರೂ ಪ್ರಸ್ತುತದಲ್ಲಿ ನೋಡಬೇಕಾದದ್ದು 'ಕಾಳರಾತ್ರಿಯನ್ನು' ಇದರಲ್ಲಿ ಎರಡು ಭಾಗಗಳಿವೆ : ೧. ಸಂಧ್ಯಾರಾಗ, ೨. ಅಂಧಕಾರ ಆತ್ಮನ ಕಾಳರಾತ್ರಿಯ ಘನಿಭೂತವಾದ ಚಿತ್ರಣವಿದೆ. ಈ ಕಾಳರಾತ್ರಿಯು 'ಬೆಳಗು' ಕೃತಿಯಲ್ಲಿಯೂ ಮುಂದುವರೆದಿದೆ.[೪೪]"

ಪೂರ್ವರಂಗದಲ್ಲಿ ನಾಯಕನು ಅನುಭವಿಗಳ ಭೇಟಿ, ಪರಸ್ಪರ ಮುಖಾಮುಖಿ ನಡೆದ ಘಟನೆ, ಪರಿಣಾಮ, ನಾಯಕನ ನಿರ್ಧಾರ ಇವುಗಳು ದೃಷ್ಟಾಂತ, ಕತೆ, ಸಂವಾದ ಮುಂತಾದವುಗಳೊಂದಿಗೆ ಮುಖಾಮುಖಿಯಾಗುವುದರ ಮೂಲಕ ಅನುಭಾವ ಮಾರ್ಗಕ್ಕೆ ನಿಶ್ಚಿತದಾರಿ ತೋರುವಂತಹುದಲ್ಲ. ಇಲ್ಲಿಯದು ವ್ಯಕ್ತಿ ನಿಷ್ಠ ಸಾಧನೆಯ ಹೊರತು ಸರ್ವಸಾಮಾನ್ಯವಾದ ಕೆಲವು ನಿರ್ದಿಷ್ಟ ಸ್ಥಲಗಳನ್ನಾಗಲಿ ಮೆಟ್ಟಿಲುಗಳನ್ನಾಗಲಿ ಸೂಚಿಸುವಂತಹದಾಗುವುದಿಲ್ಲ. ಅಲ್ಲಲ್ಲಿ ಬರುವ ಮಹಾನುಭಾವರ ವಿಚಾರಗಳು ಸ್ವತಃ ಮಧುರ ಚೆನ್ನರು ನಡೆಸಿದ ಸಾಧನೆಯ ಹೋರಾಟದ ಕೆಲವು ಸನ್ನಿವೇಶಗಳು ಒಂದೊಂದು ರೀತಿಯಿಂದ ಆಧ್ಯಾತ್ಮಿಕ ಸಾಧಕನಿಗೆ ದಾರಿ ತೋರುವಂತಿವೆಯೆಂದು ಮಾತ್ರ ಹೇಳಬಹುದು.

'ಸಿರಿಗನ್ನಡ' ಗ್ರಂಥಾಲಯ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಹಾಗೆಯೆ ಕಾಳರಾತ್ರಿಯಲ್ಲಿ ಲೌಕಿಕ ಬದುಕಿನ (ಸಾಂಸಾರಿಕ) ಜೊತೆ ಸಮಾಜದ ಜೊತೆ, ವೈಯಕ್ತಿಕ ಮತ್ತು ಕನಸಿನ ತಲ್ಲಣ, ಸಂಸಾರದ ಮೂಲಕವೂ ವೈಯಕ್ತಿಕ ಸಾಧನೆಯಲ್ಲಿ ಲೌಕಿಕದ ಬಿಕ್ಕಟ್ಟನ್ನು ಬಗೆಹರಿಸಬಹುದು ಎಂಬ ನಿಲುವಿಗೆ ಬರುವುದನ್ನು ಕಾಣಬಹುದು ಹಾಗೆಯೇ ಪುಸ್ತಕ ಮತ್ತು ಜ್ಯೋತಿಷ್ಯಶಾಸ್ತ್ರದ ಜೊತೆಯು ಮುಖಾಮುಖಿಯಾಗುವುದರ ಮೂಲಕ ಆಧ್ಯಾತ್ಮಿಕ ಸಾಧನೆ ಮಾಡುವುದನ್ನು ನೋಡಬಹುದು.

"ದೇವನ ಅಸ್ತಿತ್ವವನ್ನು ಖಚಿತಪಡಿಸಿಕೊಳ್ಳುವಲ್ಲಿ ಉದ್ಭವಿಸುವ ತೊಂದರೆಗಳು ಅಂಧಕಾರ ಭಾಗಕ್ಕೆ ಬರುವುದರೊಂದಿಗೆ ಹೆಚ್ಚುತ್ತಾ ಹೋಗಿದ್ದುದು ಕಂಡುಬರುತ್ತದೆ. ಮಧುರಚೆನ್ನರು ಈ ಹಿಂದಿನ 'ಪೂರ್ವ ರಂಗದ' ಸ್ಥಿತಿಗೂ ಈ ಮದ್ಯರಂಗದ ಅವಸ್ಥೆಗೂ ಇರುವ ಅಂತರವನ್ನು ಹೇಳಿಕೊಳ್ಳುತ್ತಾ, ಹೀಗೆ ನುಡಿದಿದ್ದಾರೆ. "ಪೂರ್ವರಂಗದಲ್ಲಿ ಶ್ರದ್ದೆಯನ್ನು ಹೆಚ್ಚು ಹೆಚ್ಚು ಶುದ್ಧಗೊಳಿಸುವುದಕ್ಕೆಂದು ಸಂದೇಹಗಳ ದಾಳಿಯು ತೂರಿಬರುವಂತೆ. ಮುಂದಿನ ಮಧ್ಯರಂಗದ ಕಾಲದಲ್ಲಿ ಶಕ್ತಿಯನ್ನು ಹೆಚ್ಚು ಬಲಪಡಿಸಲಿಕ್ಕೆಂದು ಸಂಕಟಗಳ ಸೈನ್ಯವು ಕ್ಷಣಕ್ಷಣಕ್ಕೆ ಹೊಸ ಉಗ್ರ ಸ್ವರೂಪದಿಂದ ಸಾಧಕನನ್ನು ಸಂಧಿಸುವುದು ಇದೇ ಕಾಳರಾತ್ರಿಯು"[೨೯] ಈ ಉಗ್ರ ಸ್ವರೂಪದಲ್ಲಿ ಲೌಕಿಕ ಹಾಗೂ ಪಾರಮಾರ್ಥಿಕ ಸ್ತರಗಳೆರಡೂ ಇರುವುದು ಕಂಡುಬರುತ್ತದೆ. ಲೌಕಿಕದಲ್ಲಿ ಪ್ರಾಪಂಚಿಕ ಪ್ರತಿಕೂಲತೆಗಳು ದೈಹಿಕ ರೋಗ ರುಜಿನಗಳು ಮುಂತಾದವುಗಳಿದ್ದರೆ. ಪಾರಮಾರ್ಥಿಕದಲ್ಲಿ ಕೆಲವು ಮಹಾನುಭಾವರು ವ್ಯಕ್ತಪಡಿಸಿದ ಅಸಂಭಾವ್ಯವೆನಿಸುವಂತಹ ವಿಚಾರಗಳು, ಕಠಿಣತಮಸಾಧನೆಗಳು ಈ ಮುಂತಾದವುಗಳಿವೆ. ಇಲ್ಲಿ ಪಾರಮಾರ್ಥಿಕ ತೊಡಕುಗಳಿಗೆ ಮುಖ್ಯವಾದವುಗಳನ್ನು ಸಾಧಕನು ಅನುಭವಿಸುವ ಕಷ್ಟಗಳಲ್ಲಿ ಮಧುರಚೆನ್ನರು ಮೂರು ಪ್ರಕಾರಗಳನ್ನು ಮಾಡಿದ್ದಾರೆ.

೧. ಮೊದಮೊದಲಿಗೆ ದಿಕ್ಕುಗೆಟ್ಟು ನಲೆಯಿಲ್ಲದೆ ತಳಮಳಿಸಿ ಅಳುವುದು

೨. ಭಗವತ್‌ಸತ್ತೆಯ ಪ್ರಥಮ ಪರಿಚಯವಾದ ಮೇಲೆ ಮುನ್ನಡೆದಾಗ ತನ್ನಗುಣಗಳ ನ್ಯೂನ್ಯತೆಯ ಮೂಲಕ ಪಶ್ಚಾತ್ತಾಪ ಹುಟ್ಟಿಸುವುದು

೩. ದೇವದೇವನ ಪ್ರೇರಕತ್ವವನ್ನು ಒಪ್ಪಿಕೊಂಡಮೇಲೆ 'ಕೇವಲದ' ಹಸಿವೆ ಹೆಚ್ಚಾಗುವುದು. ಆಗ ಮತ್ತೊಂದು ತೀರಸಂಕಟವು ಉದ್ಭವಿಸುವುದು ಇದೇ ಕಾಳರಾತ್ರಿಯೆಂಬುದು"[೩೦] ಹೀಗೆ ಕಾಳರಾತ್ರಿ ವಿವಿಧ ಅಂತಸ್ತುಗಳ ಪರಿಚಯ ಈ ಕೃತಿಯಿಂದ ಓದುಗನಿಗಾಗಿರುತ್ತದೆ."[೩೧]

"ಮೊದಲಿಗೆ ಅರವಿಂದರ ಪಾಂಡಿಚೆರಿಯ ಪುಸ್ತಕದ ಮುಖಾಮುಖಿಯಾಗುವುದರ ಮೂಲಕ ಸತ್ಯವನ್ನು ದೃಢಮುಷ್ಟಿಯಲ್ಲಿ ಹಿಡಿದು ಕಾಯ್ದುಕೊಳ್ಳುವುದಕ್ಕೆ ದಾರಾಗ್ರಹ ಪಡಬೇಡ. ಯಾಕೆಂದರೆ ಅದು ಒಮ್ಮೆಮ್ಮೆ ಇಂಥ ಹಿಡಿತ ಬಿಗಿತಗಳ ಕೈಯಿಂದ ಕೊಸರಿಕೊಂಡು ಹೋಗುವಷ್ಟು ತರಲವಾಗುತ್ತಿರುತ್ತದೆ ಮತ್ತು ಸಾಧಕನು ತಿರುಗಿ ದೇಹ ಬುದ್ಧಿಗೂ ಕೂಡಾ ಬರುತ್ತಿದ್ದಾನೆ. ಆದರೆ ಅದು ಅವನ ಶಾಶ್ವತವಾದ ಪತನವಲ್ಲ" ಇದು ಜ್ಞಾನ ಭಿಕ್ಷುವಿಗೆ ಬ್ರಹ್ಮಸಂಸ್ಪರ್ಶವಾಗುವ ಮುನ್ನಾವಿನವೇ ಮುಂದೆ ಬರಲಿರುವ ಕಾಳರಾತ್ರಿಯ ಬಗೆಗೆ ಮುಂಜಾಗ್ರತೆಯ ಪೂರ್ವಸೂಚನೆಯನ್ನು ದೇವದೇವನು ಮೊದಲೆ ಕೊಟ್ಟುದಾಗಿತ್ತು."[೩೨]

"ಹಾಗೆಯೇ ಮರುದಿನ ನಮ್ಮ ನಾಯಕನಿಗೆ ಸೂರ್ಯೋದಯದ ವೇಳೆಗೆ ಅನಂತ ವಿಶ್ವವೊಂದು ಅಗಾಧ ವ್ಯಕ್ತಿಯಾಗಿ ಕಾಣಿಸಿದ ಕೆಲಹೊತ್ತಿನ ಮೇಲೆ ಆತನಿಗೆ ಇರುಳಲ್ಲಿ ಓದಿದ ಹಿಂದಿನ ಆ ವಾಕ್ಯವು ನೆನಪಾಗದೆ ಇರಲಿಲ್ಲ ಆಗ ಅವನು ಹೀಗೆ ಅಂದುಕೊಂಡನು :- "ಸದ್ಯದ ಭಾವಾವೇಗವೂ, ಸತ್ಯದ ಸ್ಪಷ್ಟತೆಯೂ ಮಂದಯಿಸುವದಂತೂ ನೈಸರ್ಗಿಕ, ಹಾಗಾದರೆ ಸದ್ಯದ ಶಾಂತಿಯ ಉಕ್ಕು ಇಳಿಯುವುದು ನಿಜ. ಅರ್ಥಾತ್ ಮತ್ತೆಯೂ ಅಶಾಂತಿಯು ದಾಳಿ ಬೆನ್ನು ಹತ್ತುವುದೆಂದಾಯಿತು. ಆದರೆ ಅದೆಷ್ಟು ವಿಪರೀತಕ್ಕೆ ಬಂದರೂ ಮುಂಚಿನದಕ್ಕೂ, ಮಹದಂತರವೆಂದು ತೋರದೆ ಹೋಗಿರಲಿಕ್ಕಿಲ್ಲ. ಯಾಕೆಂದರೆ ಈವರೆಗಿನದು ನೆಲೆಹತ್ತದೆ ಗಾಬರಿಗೊಂಡು ಈಸುವಂತಿತ್ತು. ಆದರೆ ಇನ್ನು ಮುಂದಿನದು ನೆಲೆಹತ್ತಿ ಭರವಸೆಯಿಂದ ಈಸುವಂತೆ ಇದೆ. ಕಷ್ಟನಷ್ಟಗಳ ಹೊರೆಯು ಹಿಂದಿನಷ್ಟು ಉಳಿದರೂ ಹೊಸದಾಗಿ ಹುಟ್ಟಿದ ಭರವಸೆಯ ಮೂಲಕ ಅದು ಹಿಂದಿನದಕ್ಕಿಂತ ಎಷ್ಟು ಪಾಲು ಹಗುರೇ ಅನಿಸಿತು! ಒಟ್ಟಿಗೇನು? ಈಗಿನ ಆನಂದದ

ಹೊರಹಿಗ್ಗು ಹಾರಿಹೋದರೂ ಚಿಂತಿಸುವ ಕಾರಣವಿಲ್ಲ. ಒಳಗೆ ಹತ್ತಿದ್ದ ಹೊಸ ಮುದ್ರೆಯು ಎಷ್ಟು ಸವೆದರೂ ಅದರ ಕುರುಹು ಸಂಪೂರ್ಣವಾಗಿ ಎಂದಿಗೂ ಅಳಕಲಾರದು"[೩೩]

"ಒಬ್ಬ ವ್ಯಕ್ತಿಯ ಆನಂದವಾಗಲಿ, ದುಃಖವಾಗಲಿ ಬಹುಕಾಲ ಒಂದೇ ಪರಿಮಿತಿಯ ಮೇಲೆ ಉಳಿಯಲಾರದೆಂದು ನಾವು ದೈನಂದಿನ ಜೀವನದಲ್ಲಿ ಯಾವಾಗಲೂ ಕಾಣುತ್ತಿರುವೆವು. ಹಿಗ್ಗಿನ ಹೊರ ಉಬ್ಬರವು ಗಳಿಗೆಯದು ಗಳಿಗೆಗೆ ದಿನದುದ್ದಕ್ಕೆ, ವಾರದ್ದು ವಾರಕ್ಕೆ, ತಿಂಗಳದು ತಿಂಗಳಿಗೆ, ಕಡಿಮೆಯಾಗುತ್ತ ಹೋಗಿ, ಕೊನೆಗೆ ಜೀವನದಲ್ಲಿ ಅವ್ಯಕ್ತ ಉಲ್ಲಾಸದ್ದೊಂದು ಕಾಂತಿಯು ಸದಾ ಜೀವಂತವಾಗಿ ಉಳಿದು ಬಿಡುತ್ತದೆ.

ಜ್ಞಾನ ಭಿಕ್ಷುವಿಗೂ ಹೀಗೆಯೇ ಆಯಿತು. ಅಂದು ಸೂರ್ಯೋದಯಕ್ಕಿದ್ದ ಆನಂದಾವೇಶವೂ ಮಧ್ಯಾಹ್ನಕ್ಕುಳಿಯಲಿಲ್ಲ. ಮಧ್ಯಾಹ್ನದ್ದು ಸಂಜೆಗುಳಿಯಲಿಲ್ಲ. ಅಂದಿನದು ಮರುದಿನವಿಲ್ಲ : ಮರುದಿನದ್ದು ಅದರ ಮರುದಿನವಿಲ್ಲ. ಹೊರ ಉಬ್ಬರವು ಹೀಗೆ ಹರಿಯುತ್ತ ಬಂದಿತಾದರೂ ಒಂದು ಬಗೆಯ ಒಳಗಿನ ಧನ್ಯತೆಯು ಹಾಗೆಯೇ ಅಚ್ಚಳಿಯದೆ ಎಚ್ಚರವಾಗಿದ್ದಿತು."

"ಸಾಲದ ಮೂಲಕ ಆರ್ಥಿಕ ಕಷ್ಟ ಹೆಚ್ಚಿದ ಮನೆತನ, ನೆಚ್ಚಿನ ನಲ್ಲನಿಗೆ ಗುಣಬಾರದಬೇನೆ, ಅತ್ತೆಯ ಅಪಲಾಪ, ಭಯಾನಕ ಭವಿಷ್ಯ. ಇಂಥ ಭೂತಗಳು ಅವಳ ಬೆನ್ನಮೇಲೆ! ಸರಿಯಾಗಿ ಇಂಥ ಸಂಧಿಕಾಲದಲ್ಲಿ ಅವಳಿಗೊಂದು ಗಂಡು ಮಗು ಹುಟ್ಟಿತು! ಕೇಳುವುದೇನು. ಅವಳಿಗೆ ಒಡಿಸದ ಹಿಗ್ಗು! ಈ ಹಿಗ್ಗು ಅವಳ ಆಂತರೀಕ ಶಕ್ತಿಗಳ ವಿಕಸನಕ್ಕೆ ಹೊರ ಕಾರಣವಾಗಿ ಪರಿಣಮಿಸಿತು ಆಗಿನ ತನ್ನೊಳಗಿನ ಬದಲಾವಣೆಯ ವಿಷಯವನ್ನು ತನ್ನ ನಲ್ಲನಿದಿರಿಗೆ ತಾನೆ ವಿವರಿಸಿ ಹೇಳಿದ್ದು ಹೀಗೆ :"[೩೪]

"ಬಾಣಂತಿತನವನ್ನು ಅತ್ತೆ ಮಾಡಲೆಂದು ತಾಯಿಯೂ ತಾಯಿ ಮಾಡಲೆಂದು ಅತ್ತೆಯೂ ತಮ್ಮ ಕದನದಲ್ಲಿ ನನ್ನನ್ನು ನಡು ನೀರಿನಲ್ಲಿ ಬಿಟ್ಟರು. ಅತ್ತೆ ತನ್ನ ಮಟ್ಟಿಗೆ ತಾನು ಉಂಡು ಹೊಲಕ್ಕೆ ಹೋಗುವಳು. ತಾಯಿಯಂತೂ ಓಣಿಯ ಸಮೀಪಕ್ಕೂ ಕೂಡಾ ಸುಳಿಯಳು. ಹೀಗಾಗಿ ನನ್ನ ಬೆಂಕಿ ಬಿಸಿನೀರು ಹೊಟ್ಟೆ ನೆತ್ತಿ, ಎಲ್ಲಾ ನಾನೆ ಮಾಡಿಕೊಳ್ಳುತ್ತಿದ್ದೆನು. ಹಾಕಿದ ಬಾಗಿಲು ತೆರೆಯುವ ಕಾರಣವೆ ಇರಲಿಲ್ಲ. ತಿಂಗಳಗಟ್ಟಲೆ ಇಂಥ ನಿಬೀಡವಾದ ಮಗುವನ್ನು ಮಲಗಿಸಿಕೊಂಡು ಅದರ ಉಲಿದಾಟವನ್ನು ಸ್ನಿಗ್ಧ ಸೌಂದರ್ಯವನ್ನು ನೋಡುತ್ತ ಏಕಾಂತ ನೋಡುತ್ತಾ ಒರಗಿಕೊಂಡಿರುವುದು ನನ್ನ ದಿನದ ಕೆಲಸ. ಹೀಗೆ ಏಕಾಂತ ಮತ್ತು ಹಿಗ್ಗು ಇವುಗಳ ಸಂಪರ್ಕದಿಂದ ಮೆಲ್ಲನೆ ನನಗೆ ನನ್ನ ಒಳ ಅವಸ್ಥೆಯು ಅಗಾಧವಾಗಿ ಬದಲಾವಣೆಯನ್ನು ಹೊಂದುತ್ತಿದ್ದಂತೆ ಭಾಸವಾಗಹತ್ತಿತು."[೩೫]

"ಇತ್ತ ರೋಹಿಣಿಯು ತನ್ನ ನಲ್ಲನಿಗೆ ಅವಸ್ಥೆಯ ಬಗ್ಗೆ ಇನ್ನೂ ಹೇಳಿದ್ದೆಂದರೆ 'ನಾನು ಹಾಗೆ ಸುಮಾರು ಒಂದು ತಿಂಗಳು ದಟ್ಟ ಏಕಾಂತದಲ್ಲಿರಲು ಮುಂದೆ ಒಂದು ದಿನ ತಾಯಿಯು ಕೂಡಲೇ ಜಗಳ ಮಾಡಿಕೊಂಡು ಅವರ ಪರ್ಯಾದಿಯನ್ನು ನನ್ನ ಮುಂದೆ ಹೇಳುವುದಕ್ಕೆ ರಂಬಾಟದೊಡನೆ ಬಂದಳು. ಕೋಲಾಹಲಕ್ಕೆ ನಾನು ಅಂದೇ ಹೊಸದಾಗಿ ಬಾಗಿಲು ತೆರೆದು ಹೊರಗೆ ಕಾಲಿಟ್ಟದ್ದು! ಅವಳ ಕಥೆ ಕಣ್ಣಿಗೆ ಬಿದ್ದೊಡನೆ ನನ್ನ ಅಗಾಧ ಸ್ಥಿತಿಯಲ್ಲಾ ಸಂಪೂರ್ಣವಾಗಿ ಮಾಯವಾಯಿತು. ಈಗ ಏನೂ ಜ್ಞಾಪಕದಲ್ಲಿ ಉಳಿದಿಲ್ಲ "ಏನೋ ಅಗಾಧವಿತ್ತು; ಅದರಿಂದ ನನಗೆ ಎಲ್ಲಾ ತಿಳಿದಂತೆ ಅನಿಸಹತ್ತಿತು' ಎಂದು ಇಷ್ಟು ಮಾತ್ರವೇ ಈಗನನಗೆ ಮಸುಕುಮಸಕಾಗಿ ನೆನಪಿನಲ್ಲಿದ್ದಂತೆ ಇದೆ. ಹೀಗೆ ಬಂದಿದ್ದು ಹೋಯಿತೇಕೆ? ನನಗೇನೂ ತಿಳಿಯದಾಗಿದೆ ಈಗ ಆ ಅವಸ್ಥೆಯ ಅವಶೇಷ ಸ್ವರೂಪವಾಗಿ ನನ್ನಲ್ಲಿ ಉಳಿದಿದ್ದೆಂದರೆ 'ನಾನೀಗ ಹಿಂದಿರುಗಿ ಕಲ್ಲು ಮಂತ್ರ ಇಲ್ಲ' ಎಂಬ ಅನಿಸಿಕೆಯೊಂದೆ."[೩೬]

ಹೀಗೆ ಎರಡು ಮೂರು ಪ್ರಸಂಗಗಳು ಗತಿಸಿದವು. ಅವುಗಳ ಕಥೆಯನ್ನೆಲ್ಲಾ ತನ್ನ ಮಡದಿಗೂ, ಮಿತ್ರನಿಗೂ ಆಗಾಗ ಹೇಳುತ್ತಿದ್ದನು. ಆಮೇಲೆ ಅವನು ತನ್ನ ಹಿಂದಿನ ಆ ಹಿರಿ ಅನುಭವದ ಆತ್ಮಗೀತವನ್ನು ಬರೆದು ಮುಗಿಸಿದನು. ಅಷ್ಟು ಹೊತ್ತಿಗೆ ಒಂದಿರುಳು ಅವನಿಗೆ ಗೆಳಯನ ಅಂತರ್ಮಾನಸವು ಅರಳಿತು, ಅವರ ಕಥೆಹೀಗಿದೆ.

"ಜ್ಞಾನ ಬಿಕ್ಕು ತನ್ನ ಗೀತವನ್ನು ಬರೆದುಮುಗಿಸಿ ನಾಲ್ಕು ದಿನವಾಗಿತ್ತು. ಆ ನಾಲ್ಕು ದಿನವು ಹಗಲಿರುಳು ಆ ಹಾಡಿನ ಪ್ರಸ್ತಾಪ ಕೊನೆಗೊಂದು ದಿನ ಬೆಳಗಿನ ಜಾವದಲ್ಲಿ ಆತನ ಗೆಳೆಯ ಮಂಜುಳನು ಕನಸು ಕಂಡು ಎಚ್ಚೆತ್ತು ಹೀಗೆ ಹೇಳಿದನು.

"ಅಣ್ಣಾ, ಇದೇನು ಕನಸೋನನಸೊ ನನ್ನ ಜೀವನವೆಲ್ಲಾ ಒಂದು ಹೊಸ ಚೇತನದಿಂದ ತುಂಬಿಬಿಟ್ಟಿತು! ಕನಸಿನಲ್ಲಿ ನಾನು ನೀನು ಕೂಡಿ ಒಂದು ಅಡಪಿಯ ಹಾದಿಯನ್ನು ಹಿಡಿದು ಎಲ್ಲಿಗೋ ಹೊರಟಿದ್ದೆವು.

ಹಾದಿಯ ಮಗ್ಗುಲಿಗೆ ಒಂದು ಸಾಧಾರಣ ಜಾಲಿಯ ಗಿಡ. ಆ ಗಿಡದ ವಿಷಯದಲ್ಲಿ ಒಂದು ಅಖ್ಯಾಯಿಕೆಯಿದ್ದಂತೆ ಆಗ ನನಗೆ ನೆನಪಿಗೆ ಬಂದಂತಾಯಿತು ಆ ವಿಷಯವೇನೆಂದರೆ "ಗಿಡದೊಳಗೆ ಒಂದು ಸರ್ಪವಿದೆ ಯಾರಾದರೂ ತಮ್ಮ ಜೀವನದಲ್ಲಿ ದೇವರನ್ನು ನಿಜವಾಗಿ ಹುಡುಕಿ ನಿರಾಶೆಪಟ್ಟಿದ್ದರೆ ಅಂಥವರು ಅಲ್ಲಿಗೆ ಹೋಗಿ 'ದೇವರಿಲ್ಲಾ' ಎಂದು ನುಡಿದರೆ ಆ ಹಾವು ಹೊರಗೆ ಬಂದು ಅವರಿಗೆ ಕಚ್ಚುವುದು ಅದರಿಂದ ಅವರಿಗೆ ಸಾಕ್ಷಾತ್ಕಾರವಾಗುವುದು ಆದರೆ ಅವರು ಸತ್ಯಸತ್ಯವಾಗಿ ಮಾತ್ರ ದೇವರನ್ನು ಹುಡುಕಾಡಿ ದಣಿದಿರಬೇಕು ಅದಕ್ಕೆ ನೀನು ಹೇಳಿದೆ "ಹಾಗೇನು ಅಲ್ಲ. ನೀನು ದೇವನಿಗಾಗಿ ಕಾತರಿಸಿದ್ದು ನಿಜವಾಗಿಯೇ ಎಂದು ನಾನು ಬಲ್ಲೆ. ಈ ವಿಷಯದಲ್ಲಿ ತನ್ನದು ತನಗೆ. ಒಮ್ಮೊಮ್ಮೆ ಅವಿಶ್ವಾಸ ಹುಟ್ಟುತ್ತಿರುತ್ತದೆ. ಆದರೆ ಸಾಧಕ ಜೀವನದ ಬಗೆಗೆ ಬಹಳ ಪರಿಶೀಲನೆ ಮಾಡಿದ ನನಗೆ ಅದರ ನೆಲೆ ಕಲೆಗಳ ಪರಿಚಯವಿದೆ. ನಿನ್ನಲ್ಲಿ ಸತ್ಯ ಸತ್ಯವಾಗಿ ನಿಜ ಭಕ್ತಿಯಿದೆ. ಆದರೆ ಮೊದಲೆ ನಿನ್ನ ಬಗೆಗೆ ನೀನು ಅಧೈರ್ಯಪಟ್ಟುಕೊಂಡು ಗಿಡದ ಎದುರಿಗೆ ಹುದುಗಿಕೊಂಡು ನಿಂತು ಹಾಗೆ ನುಡಿದೆ ಆದರೆ ಈಗ ಆತ್ಮವಿಶ್ವಾಸದಿಂದ ಮೈಚಳಿಬಿಟ್ಟು ಮತ್ತೊಮ್ಮೆ ಹೀಗೆ ಹೇಳಲು ನಿನ್ನ ಮಾತಿನ ಮೇಲೆ ವಿಶ್ವಾಸ ಉಂಟಾಯಿತು."[೩೭]

"ಇದೆಲ್ಲವನ್ನು ಕೇಳಿ ನಮ್ಮ ನಾಯಕನಿಗೆ ಬಹಳ ಆಶ್ಚರ್ಯವಾಯಿತು ಒಬ್ಬರಲ್ಲೊಂದು ವಿಧದಿಂದ ಆತ್ಮವು ಅರಳಿದರೆ ಇನ್ನೊಬ್ಬರಲ್ಲಿ ಇನ್ನೊಂದು ಬಗೆಯಿಂದ ವಿಕಾಸ ಹೊಂದುತ್ತದೆಯಲ್ಲಾ ಮಡದಿಗೊಂದು ಬಗೆಯಿಂದ ಹೊಸನಾಡು ತೆರೆದರೆ, ಮಿತ್ರನ ಬಗೆಯಿಂದ ತೆರೆಯಿತಲ್ಲಾ! ದೇವನು ತಾನು ತನ್ನ ಭಕ್ತನಿಗೆ ಪ್ರಕಟವಾಗುವ ಅಸಂಖ್ಯ ಮಾರ್ಗಗಳನ್ನು ತನ್ನ ಕಡೆಗೆ ಕಾದಿಟ್ಟುಕೊಂಡಿರುತ್ತಾನೆಂದು ಅರವಿಂದರು ಹೇಳುವ ಮಾತು ಇಂದು ಈತನಿಗೆ ಬಹಳ ಸರಿಯನಿಸಿತು ಹಿಂದೆ ಸತಿಗೆ ಹೇಳಿದ "ನಿನ್ನ ಅಂತರ್ಮಾನಸವು ಇಂದು ಅರಳಿದ್ದು ಸತ್ಯ. ಅದು ಇನ್ನಷ್ಟು ದುಡಿದರೂ ಚಿಂತೆ ಬೇಡ ಯಾಕೆಂದರೆ ಹಾಗೆ ಆಗುತ್ತಿರುವುದು ಆಧ್ಯಾತ್ಮ ರಾಜ್ಯದೊಳಿಗಿನದೊಂದು ನಿಸರ್ಗ ನಿಯಮವೆಂದು ಅರವಿಂದರು ಹೇಳಿದ್ದಾರೆ. ಹೊಸ ಅನುಕೂಲತೆಗಳು ಸಿಕ್ಕ, ಹಾಗೆಲ್ಲಾ ಅದು ಪುನಃ ಅರಳುತ್ತ ಹೋಗುವದರಲ್ಲಿ ಸಂದೇಹವಿಲ್ಲ"[೩೮] ಎಂದು ಮಂಜುಳನಿಗೆ ಹೇಳಿದ.

"ಈ ಕಾಳರಾತ್ರಿಯ ಮೊದಲ ಬಾಗದಲ್ಲಿ ಕಥಾನಾಯಕನ ಪತ್ನಿ ಮತ್ತು ಸ್ನೇಹಿತರ ಅಂತರ್ಮಾನಸ ಅರಳಿದ. ವಿಷಯವಿದೆಯೆಂದು ಹೇಳಬಹುದು. ಈ ವಿಷಯದ ವರ್ಣನೆ ವಾಸ್ತವವಾಗಿದ್ದುದು ಆದರೂ ಕಾಲ್ಪನಿಕ ಎನಿಸುವಂತಿದೆ. ಅದರಲ್ಲೂ ಸ್ನೇಹಿತ ಮಂಜುಳನು ಕಂಡಕನಸು ಕಾಲ್ಪನಿಕ ಎಂದು ಭಾಸವಾಗುತ್ತದೆ. ಇಲ್ಲಿಯದೆಲ್ಲಾ ಪ್ರಾಮಾಣಿಕ ಸತ್ಯಸಂಗತಿ ಎಂಬುದನ್ನು ಮರೆಯುವಂತಿಲ್ಲ. ಏಕೆಂದರೆ ಹೆಣ್ಣು ತಾಯಿಯಾಗುವ ಅನುಭವವು ನಿಸರ್ಗ ಸಹಜವಾಗಿ ಬರತಕ್ಕದ್ದು ಹಾಗಾಗಿ ಸತಿಯ ಅನುಭವವು ಸತ್ಯವೆಂದೆ ಹೇಳಬಹುದು. ಹಾಗಿರುವುದರಿಂದ ಸತ್ಯಸಂಗತಿಯು ಕಾಲ್ಪನಿಕ ಕತೆಗಿಂತ ವಿಲಕ್ಷಣವಾಗಿದೆ."[೩೯]

ಜ್ಞಾನಭಿಕ್ಷುವಿನ ತಾಯಿಯ ಹರಮಾರಿ ಸ್ವಭಾವವನ್ನು ನಿಸ್ಸಂಕೋಚವಾಗಿ ಚಿತ್ರಿಸಿರುವುದನ್ನು ಕಾಣಬಹುದು. ಮಧುರಚೆನ್ನರು ಸಂಸಾರದ ಜೊತೆ ಮುಖಾಮುಖಿಯಾಗುವುದರ ಮೂಲಕ ತನ್ನ ಸಂಸಾರಕ್ಕೆ ಯಾವುದೇ

ಭದ್ರತೆಯನ್ನು ಒದಗಿಸದೆ ಆಧ್ಯಾತ್ಮದಕಡೆ ಮುಖಮಾಡಿ ಸಂಸಾರಿಕ ಅವಶ್ಯಕತೆಯನ್ನು ಗೌಣಮಾಡುತ್ತಾನೆ. ಏಕೆಂದರೆ ತಾಯಿಯು ಒಂದು ಸಂಸಾರದ ಜವಾಬ್ದಾರಿಯನ್ನು ಹೊತ್ತು ನಡೆಸುವವಳಾಗಿದ್ದಳು. ಹಾಗೆಯೆ ಅಸ್ತಿತ್ವದ ಪ್ರಶ್ನೆ ಕಾಡುವುದು ಸಹಜವಾಗಿದೆ ಇಂತಹ ಪ್ರಸಂಗವನ್ನು "ನೋಡಬಹುದು ಜ್ಞಾನ ಭಿಕ್ಷುವಿನ ವಾಸಸ್ಥಾನವು ಕೋಲಾಹಲ ಸಂತೆ. ಈತನ ತಾಯಿಯೂ ಅಳತೆಗೆಟ್ಟು, ಹೊಸ ಕಾರ್ಯವನ್ನು ಮಾಡುವಳು, ಅದರಲ್ಲಿ ಸಾಲವು ತೀರದಂಥ ಸ್ಥಿತಿಗೆ ಬರುತ್ತಿರುವುದನ್ನು ನೋಡಿ ಮನೆಮಾರುಗಳಿಗೆಲ್ಲಾ ಸಮಸ್ಯೆ ಬರುವುದೇ ಎಂಬ ಚಿಂತೆ ಹೆಚ್ಚಿದ ಹಾಗೆಲ್ಲಾ ಏನಾದರೂ ಹೊಸ ಆಟಹೂಡಿ ಹೆಚ್ಚುಗಳಿಸಿ ಹೇಗಾದರೂ ಸಾಲವನ್ನು ಹತ್ತಿಬೇಕೆಂಬ ಆಲೋಚನೆಯೇ ಅವಳ ತಲೆಯಲ್ಲಿ ಸುಳಿಯದು, ಇನ್ನೊಬ್ಬರು ಹೇಳಿದ್ದು ಸರಿದೋರದು ಈ ಸ್ಥಿತಿಯು ಅವಳಿಗೆ ಒದಗಿತು."[೪೦]

"ಮಗನು ಒಳ್ಳೆಯವನಿದ್ದ ಬಗೆಗೆ ಅದೇನೂ ಸಂದೇಹವಿರಲಿಲ್ಲವಾದರೂ ಆತನ ವಿಚಾರಗಳು ಅವ್ಯವಹಾರವಾಗಿದೆಯೆಂದು ಅವಳ ಒಳ ಅನಿಸಿಕೆ. ಅಲ್ಲದೆ ಇವನು ಸಂಸಾರವನ್ನೆಲ್ಲಾ ಹಾಳುಮಾಡಿಕೊಳ್ಳುವನೆಂಬ ಹೆದರಿಕೆ. ಮೇಲಾಗಿ ಮಾಡಿಮಟ್ಟಿದ ಜೀವವಾದ್ದರಿಂದ ಏನಾದರೊಂದು ಕೋಲಾಹಲವಿಲ್ಲದಿದ್ದರೆ ಅವಳ ಮನಸ್ಸಿಗೆ ಸೊಗಸೆ ಇರುತ್ತಿರಲಿಲ್ಲ ಮತ್ತು ಕೈಯೊಳಗಿನ ಜವಾಬ್ದಾರಿ ಕಳೆದುಕೊಳ್ಳಬಾರದು ಎನ್ನುವುದು. ಹೀಗಾಗಿ ತಾಯಿಯು ಈತನ ಸಲಹೆಯನ್ನು ಯಾವಾಗಲೂ ವಿರೋಧಿಸುತ್ತಿದ್ದಳು ಹಗ್ಗಹರಿಯದು ಕೋಲು ಮುರಿಯದು ಎನ್ನುವ ಬಿಕ್ಕಟ್ಟಿನ ಪರಿಸ್ಥಿತಿಗೆಬಂದಿತು."[೪೧]

ಇಲ್ಲಿ ತಾಯಿಯ ಹಠಮಾರಿ ಸ್ವಭಾವ ಎನ್ನುವದಕ್ಕಿಂತ ಕಾಳಜಿ ಎನ್ನುವುದು ಒಳಿತು ಏಕೆಂದರೆ ಇಲ್ಲಿ ಉದ್ದೇಶಿತ ಕೇಂದ್ರಬಿಂದು ಸಾಂಸಾರಿಕ ನಿರ್ವಹಣೆಯಾಗಿದೆ ಹೊಂದುವುದರ ಮೂಲಕ ಜವಾಬ್ದಾರಿಯನ್ನು ಹೊತ್ತುಕೊಳ್ಳದೆ. ಬೈರಾಗಿಯಾಗಿರುವ ಸ್ಥಿತಿಯು ತಾಯಿಗೆ ನಿರಾಸೆಯನ್ನುತಂದಿದೆ ಎಂದು ಹೇಳಬಹುದು.

ಈ ಕಾಳರಾತ್ರಿಯ ಅಂಧಕಾರದ ಭಾಗದಲ್ಲಿ ಶುಭಂಕರನಾಗಿರುವ ಶಿವನು ಭಯಂಕರ ರುದ್ರನಾಗಿರುವುದನ್ನು ಗುರುತಿಸಿದ್ದಾರೆ. ಇಲ್ಲಿ ಪೂರ್ವಸಾಧಕನು ಭಕ್ತಿಯೋಗದವನಾದರೆ ಉತ್ತರ ಸಾಧಕ ಶಕ್ತಿಯೋಗದವನಾಗಿರ ಬೇಕಾಗುತ್ತದೆ ಎಂಬುದನ್ನು ಅವರು ಅರಿತವರಾಗಿದ್ದಾರೆ. ಭಕ್ತಿಯೋಗದಿಂದ ಶಕ್ತಿಯೋಗದ ಕಡೆಗೆ ನಡೆದ ಸಾಧಕನಿಗೆ ಮಧ್ಯದಲ್ಲಿ ಅಂಧಕಾಸುರನ ಕೋಟೆಯನ್ನು ಭೇದಿಸಬೇಕಾದ ಪ್ರಸಂಗವಿರುತ್ತದೆ ಅದೇ ಕಾಳರಾತ್ರಿ. ಈ ಕಾಳರಾತ್ರಿಯಲ್ಲಿ ಪ್ರಾಪಂಚಿಕ ತೊಂದರೆಗಳು ಉಲ್ಬಣಿಸುವುದುಂಟು ತಾಯಿ ಮಕ್ಕಳಲ್ಲಿ ವಿರಸ ಉಂಟಾಗುವುದು. ಸಾಧಕನ ಆರೋಗ್ಯ ಸ್ಥಿತಿ ಕಾರುಣ್ಯಕ್ಕೀಡಾಗುವುದು ಮುಂತಾದವುಗಳೆಲ್ಲಾ ಇಲ್ಲಿ ನಡೆಯುತ್ತಿರುತ್ತದೆ. ಈ ಮಧ್ಯ ಜನತೆಯ ಅಂಧ ಪರಂಪರೆಗಳೂ ವಿಚಾರವಂತ ಸಾಧಕನ ಮನಸ್ಸನ್ನುಗಳೂ ಕಲುಕುತ್ತವೆ ಅದಕ್ಕೆ ಜಾತ್ರೆಯ ಪ್ರಸಂಗ ಒಂದು ಉದಾಹರಣೆಯಾಗಿದೆ.

ಮಾನವನು ಜಗತ್ತಿನಲ್ಲಿ ಪ್ರೇಮ, ಜೀವನ, ಸೌಂದರ್ಯ, ಮತ್ತು ಶುಭ ಇವುಗಳನ್ನೆ ಕಾಣತಿಳಿಸಿ ಆ ಪ್ರಕೃತಿದೇವಿಯ ಭೀಕರ ಮೃತ್ಯು ವೇಷದ ಕಡೆಗೆ ಕಣ್ತೆರೆದು ನೋಡುವುದಿಲ್ಲ. ದೇವನನ್ನು ಶುಭಂಕರನಾದ

ಶಿವನನ್ನಾಗಿ ಭಜಿಸುವನೆ ಹೊರತು ಭಯಂಕರವಾದ ರುದ್ರನನ್ನಾಗಿ ಪೂಜಿಸಲೊಪ್ಪಲಾರ ಆದರೆ ಜಗತ್ಕಾರ್ಯಕ್ಕೆ ಎರಡು ಸ್ವರೂಪಗಳ ಅಗತ್ಯವು ಸಮಾನವಾಗಿದೆ. ತ್ರಾಣ ಬಲ ಪರಾಕ್ರಮಗಳು ಅಪರಿಮಿತ ಪ್ರಕಾಶವು, ಕ್ರಿಯಾ ಸಹಕಾರಿಯಾದ ಹೃದಯಮಾದುರ್ಯದೊಡನೆ ಸಾಮರಸ್ಯವನ್ನು ಹೊಂದಬೇಕು. ಇಂದ್ರನಕೋಲು ಮಿಂಚು ಸೋಮನ ಅಮೃತ ಕಿರಣಗಳೊಂದ ಸ್ಪರಿಸಬೇಕು ಇದೇ ಉಭಯ ಮುಖವಾದ ಪೂರ್ಣತೆಯು ಎಂದು ಅರವಿಂದರು ವಿಚಾರದೊಡನೆ ಮುಖಮುಖಿಯಾಗುತ್ತಾನೆ.

"ಪೂರ್ವಸಾಧಕನು ಭಕ್ತಿಯೋಗದವನಾದರೆ ಉತ್ತರಸಾಧಕನು, ಶಕ್ತಿಯೋಗದವನಾಗಬೇಕಾಗುತ್ತದೆ. ಹಾಗೆಯೇ ಸತ್ಯಸೌಂದರ್ಯಗಳ ಸರ್ವಾಂಗಯಾಮಿತ್ವವನ್ನು ಅನುಭವಿಸಿ ಮುಗಿದಾಗಲೆ ಶಕ್ತಿ ಲಾಭದ ಪೂರ್ವಸಿದ್ಧತೆಗೆಂದು ಸಾಧಕನೆಡೆಗೆ ರುದ್ರನ ಭೂತಗಣದ ಜಂಗುಳಿಯೇ ಎನ್ನುವಂತೆ ಅಪರಿಹಾರ್ಯ ಸಂಕಟಗಳ ಸಮೂಹವೂ ಓಡಿಬರುತ್ತದೆ. ಓದಿಲ್ಲದೆ ಪಂಡಿತನಾಗಲಾರನೆಂಬಂತೆ ಹೊರಾಡದೆ ವೀರನಾಗುವುದಿಲ್ಲ ಎಂಬ ಮಾತು ಈ ಅವಸ್ಥೆಗೆ ತುಂಬಾಸಮಂಜಸವಾಗಿ ಹೋಲಿಕೆಯಾಗುತ್ತದೆ."[೪೨]

"ಮೂರುವರುಷಗಳಿಗೊಮ್ಮೆ ನಮ್ಮನಾಯಕನ ಮನೆತನದವರು ಕುಲದೈವದ ಜಾತ್ರೆಯನ್ನು ಮಾಡುತ್ತ ಬಂದುದನ್ನು ಅದನ್ನೀತನು ನಿಲ್ಲಿಸಿಬಿಡುವುದಕ್ಕೆ ಪ್ರಯತ್ನಿಸುತ್ತಿದ್ದುದನ್ನೂ ನಾನು ಪೂರ್ವರಂಗದಲ್ಲಿಯೇ ಬಣ್ಣಿಸಿರುವೆನಷ್ಟ? ಕಾಲಕ್ರಮದಿಂದ ಅದು ವರುಷವೂ ಬಂತು. ಏನು ಮಾಡುವುದು: ಹಳೆಯ ಸಂಪ್ರದಾಯವನ್ನು ಮುರಿಗೊಡಬಾರದೆಂಬುದು ಜನ ಜಂಗುಳಿಯ ಹಟ ಆದರೆ ಇಂಥ ಜಾತ್ರೆ ಮುಂತಾದ ಉತ್ಸವಗಳು ಬಾರವು ವೈಯಕ್ತಿಕವಾಗಿ ಒಂದು ಕುಟುಂಬದ ಮೇಲೆ ಹೊರೆ ಬೀಳುವುದು ಆರ್ಥಿಕ ರೀತಿಯಿಂದ ಬಹಳ ಕೆಟ್ಟದಾದರಿಂದ ಅದನ್ನು ನಿಲ್ಲಿಸಿಬಿಡಬೇಕೆಂಬುದು ನಮ್ಮ ನಾಯಕನ ವಿಚಾರ. ಯಾವ ಕೆಲಸವೆ ಆಗಲಿ, ಅದನ್ನು ಯಾಕೆ ಮಾಡಬೇಕೆಂಬ ವಿಚಾರವಿಲ್ಲದೆ ನಾವು ಅದಕ್ಕೆ ಕೈಯನ್ನೆ ಹಚ್ಚಬಾರದೆಂಬುದು ಜ್ಞಾನಭಿಕ್ಷುವಿನ ಅಭಿಮತವಾದರೆ, ಅದೇನೂ ನಾವು ಅರಿಯವು, ಹಿರಿಯರೇನು ದಡ್ಡರೆ? ಎಂಬುದು ಲೋಕಮತ."[೪೩] ಹೀಗೆ ಲೋಕದ ಎದುರಿಗೆ ಮುಖಾಮುಖಿಯಾಗಿ ಜಾತ್ರೆಯು ಪರಂಪರೆಯಿಂದ ಬೆಳೆದುಕೊಂಡು ಬಂದುದು, ಇದು ಕೂಡ ಒಂದು ಆಧ್ಯಾತ್ಮದ ಬಾಹ್ಯರೂಪ. ಇದನ್ನು ಕುರುಡು ಪರಂಪರೆ ಎನ್ನುವ ನಾಯಕನು ತಾನು ಇತರೆ ಶಾಸ್ತ್ರಜಾಲ ಮತ್ತು ಅನುಭಾವಿಗಳ ಆಧ್ಯಾತ್ಮದ ಪರಂಪರೆಯನ್ನು ಹಿಡಿದು "ಘೋರ ಸಾಹಸದ" ಅಧ್ಯಾಯದಲ್ಲಿ 'ಆತ್ಮಹತ್ಯೆ' ಮಾಡಿಕೊಳ್ಳಲು ಪ್ರಯತ್ನಿಸುವುದು, ಕಲ್ಯಾಣ ಕ್ಷೇತ್ರದರ್ಶನದಲ್ಲಿ ನೀರಲ್ಲಿ ಮುಳುಗುವುದು, ತೀರ್ಥ ಎಂದು ಗಂಟಲು ಮಟ್ಟ ಕುಡಿಯುವುದು ಇವೆಲ್ಲವು ಅಂಧಪರಂಪರೆಯಲ್ಲವೆ? ಅಂಧಾನುಕರಣೆಯಲ್ಲವೆ? ಎಂಬ ಪ್ರಶ್ನೆಯು ಹುಟ್ಟುತ್ತದೆ.

ಹಾಗೆಯೇ ನಾಡಿನ ಬಗ್ಗೆ ಚಿಂತಿಸುವ ಸಂದರ್ಭದಲ್ಲಿ "ನಮ್ಮ ನಾಡು ಬಡತನದ ಸಲುವಾಗಿ ಹೀನದೆಸೆಗೆ ಬರಲಿಲ್ಲ: ಧರ್ಮಗೇಡಿತನದಿಂದಲೂ ಹಾಳಾಗಲಿಲ್ಲ. ಆದರೆ ವಿಚಾರಶಕ್ತಿಯು ಹಾಳಾದ್ದರಿಂದ ಅಪಸತಿಗೆ ಇಳಿದಿದೆ. ಬಹುಜನರಿಗೆ ವಿಚಾರ ಮಾಡುವ ಸಾಮರ್ಥ್ಯವಿಲ್ಲ. ಕೆಲವರಿಗೆ ಸಾಮರ್ಥ್ಯವಿದ್ದರೂ ವಿಚಾರ

ಮಾಡುವ ಇಚ್ಛೆಯಿಲ್ಲ, (Inability to think and unwilingness to think) ಇವೇ ನಮ್ಮ ನಾಡಿನ ಹೀನದೆಸೆಯ ಹಿರಿಕಾರಣಗಳು" ಎಂದು ಅರವಿಂದರು ನಮ್ಮ ನಾಡಿನ ನಾಡಿಯನ್ನು ಮುಟ್ಟಿ 'ನಿದಾನ' ಮಾಡಿರುವರು."

Rantionalism (ಕಾರ್ಯಕಾರಣರಾದ) Utilization (ಉಪಯೋಗಿತವಾದ ಇವೆರಡು ಬೆಳೆಯದಿದ್ದರೆ ನಮ್ಮ ನಾಡಿನ ಉನ್ನತಿಯಾಗದು. ಹಿರಿಯರ ಮೇಲೆ ಹವಾಲೆ ಹಾಕುವ ಗತಾನುಗತಿಕ ಬುದ್ಧಿಗೆ ದಾಸರಾಗಿರುವರೆಗೂ ನಾವು ಹೆಚ್ಚಿನ ಆಶೆ ಮಾಡಿ ಫಲವಿಲ್ಲ" ಯಾಕೆ? ಏನು ಪ್ರಯೋಜನ?" ಎಂಬೆರಡು ಪ್ರಶ್ನೆಗಳು ನಮ್ಮ ನಾಡಿನ ರೋಮದಲ್ಲಿ ವ್ಯಾಪಿಸಬೇಕು ಅದಿಲ್ಲದೆ ನಮ್ಮ ಉನ್ನತಿಯಿಲ್ಲ.[೪೪] ಈ ಮಾತು ಎಲ್ಲೋ ರಾಷ್ಟ್ರೀಯವಾದ ರಾಷ್ಟ್ರ ಚಿಂತನೆಯ ಕಡೆಗೆ ಮತ್ತು ಹಿತಾಸಕ್ತಿಯ ಕೊರತೆಯನ್ನು ಕುರಿತಂತೆ ಹೇಳುವ ಮಾತುಗಳಾಗಿವೆ ಎನ್ನಿಸುತ್ತದೆ."

"ಸುಖ ವಿನೋದಗಳ ಬಾರವು ಸಾರ್ವಜನಿಕ ಸಂಘಗಳ ಕಡೆಗೊಂದಿರಬೇಕೆಂಬುದೂ ಮತ್ತು ಜಾತ್ರೆ ಮುಂತಾದ ಉತ್ಸವಗಳಲ್ಲಿ ಮನರಂಜನದ ಬಾಬತಿಗಿಂತ ಧಾರ್ಮಿಕ ಜಾತಿಯವರೆಂದು ಹೇಳಿಕೊಳ್ಳುವವರ ಊಟ ಉಡಿಗೆಯಲ್ಲಿಯ ಮುಕ್ಕಾಲು ಮೂರು ಭಾಗ ಹಣವು ನಿಂತುಹೋಗಬೇಕೆಂಬುದು ಹಾಗೂ ಮಧ್ಯವರ್ತಿಗಳ ಬಡಿದಾಟ ತಪ್ಪಿ ಸರ್ವರೂ ಅದೊಂದು ತಮ್ಮೆಲ್ಲರ ಮನರಂಜನೆಯ ಕಾರ್ಯವೆಂದು ಯಾವ ಸೆಡವೂ ಇಲ್ಲದೆ ಸರಾಗಗೊಳಿಸಬೇಕೆಂಬುದು ಮತ್ತೊಂದು ಇಷ್ಟಕ್ಕೂ ಮೀರಿ ಸಾರ್ವಜನಿಕರಲ್ಲಿ ಯಾರಿಗೂ ಎಷ್ಟು ನೋವಾಗದೆ ಅವರ ಹಿಗ್ಗಿನಿಂದಲೇ ಹಣವು ಕೊಡಬೇಕಲ್ಲದೆ. ಅದರ ಆಡಳಿತಗಾರರು ಪ್ರಮಾಣಿಕರಾಗಿರಬೇಕು ಎಂಬುದು ಮೇಲೆ ಹೇಳಿದ ಮೊದಲನೆ ಸುಧಾರಣೆಯ ನಮ್ಮ ನಾಯಕನಿಗೆ ಈಗ ಏಸೋ ವರುಷಗಳಿಂದ ಕಾಡಿಸಹತ್ತಿದೆ."[೪೫] ಇಲ್ಲಿ ಒಂದು ಚಾರಿತ್ರಿಕ ಸನ್ನಿವೇಶದಲ್ಲಿ ಸಮಾಜದ ಅನಿಷ್ಟ ಪದ್ಧತಿಗಳ ವಿರುದ್ಧ ನಡೆದ ಸುಧಾರಣಾವಾದಿಗಳ ಹೋರಾಟದ ಬಳಗವೆ ಪಶ್ಚಿಮ ಬಂಗಾಳದಲ್ಲಿ ಹುಟ್ಟಿಕೊಂಡಿತು. ಅದು ಕರ್ನಾಟಕ ನವೋದಯ ಲೇಖಕರ ಮೇಲೆ ಗಾಢ ಪ್ರಭಾವ ಬೀರಿತು. ಹಾಗಾಗಿ ಅಂತವರಲ್ಲಿ ಅರವಿಂದರ ಪ್ರಭಾವವು ಮಧುರಚೆನ್ನರ ಮೇಲಾಗಿರುವುದರಿಂದ ಧಾರ್ಮಿಕ ಸಮಾಜದ ಸುಧಾರಣೆಯನ್ನು ಕುರಿತು ಈ ಮಾತನ್ನು ಹೇಳಿದ್ದಾರೆ ಎನ್ನಿಸುತ್ತದೆ.

"ಇಂಥ ಸ್ಥಿತಿಯಲ್ಲಿ ಐನ್‌ಸ್ಟೀನ್‌ರ ಭೌತಶಾಸ್ತ್ರದ ವಿಚಾರವು ಮಧುರಚೆನ್ನರಿಗೆ ಅವರ ತಾತ್ವಿಕ ಸಾಧನೆಯಲ್ಲಿ ಹೊಸದಿಕ್ಕನ್ನು ತೋರಿಸುದುದು ಒಂದು ಮಹತ್ವದ ಅಂಶವಾಗಿದೆ. ಅದು ಕಾಲ ಮತ್ತು ಸ್ಥಲ (Time and space) ಸಂಬಂಧಿಸಿದುದು. ಮಧುರಚೆನ್ನರು ಅದನ್ನು ವಿವರಿಸಿದ್ದು ಹೀಗೆ ಮಹಾಸ್ಥಲದ ಸ್ಪಂದನವೇ ಮಹಾಕಾಲವು ಕಾಲವೂ, ಸ್ಥಲವು ಎರಡು ಭಿನ್ನ ವಸ್ತುಗಳಲ್ಲ. ಕಾಲವು ಸ್ಥಲದ್ದೆ ಇನ್ನೊಂದು ಮುಖ ಈಗ ನಾವು ವಸ್ತುಗಳನ್ನು ಉದ್ದ ಅಗಲ, ಪಿಂಡಗಳ ವಿಳಂಬವೆಂಬ ಮೂರು ಅಳತೆಗಳಿಂದ

ಅಳೆಯುತ್ತವೆ. ಇಲ್ಲಿ ಐನ್‌ಸ್ಟೀನ್‌ನು ಬರೆದ ಕೃತಿಯಲ್ಲಿ ಈ ವಿಶ್ವವು ನಾಲ್ಕು ಆಯಾಮಗಳಿಂದ ಕೂಟದ ಸ್ಥಲ ಜಾಲಗಳುದ್ದೆಂಬ ವಿಚಾರವನ್ನು ಗಮನಿಸಬಹುದು. ಕಾಲವು ಹಿಂದೆ ಮುಂದೆ ಅನಂತವಾಗಿದ್ದು ಅದರ ವರ್ತಮಾನ ಆಕಾಶವೊಂದೆ ನಮ್ಮ ಮುಂದೆ ಹಾಯ್ದು ಓಡುತ್ತಿರುತ್ತವೆ. ಮಹಾಸ್ಥಳವು ಮೇಲ್ಗಡೆಗೆ ಅನಂತ, ಹಿಂಗಡೆಗೆ ಮುಂಗಡೆಗೆ, ಬಲಗಡೆಗೆ, ಎಡಗಡೆಗೆ ನಾಲ್ಕು ಮೂಲೆಗೆ ದಶದಿಕ್ಕುಗಳನ್ನು ಅನಂತರವಾಗಿ ಪಸರಿಸಿದೆ. ಆ ಎರಡು ನಿಟ್ಟುಗಳೆಂದರೆ ಭೂತ ಮತ್ತು ಭವಿಷ್ಯ. ಆದರೆ ದಶದಿಕ್ಕುಗಳೆಂಬವು ಮಹಾಸ್ಥಲದ ವರ್ತಮಾನ ರೂಪಕ್ಕೆ ಮಾತ್ರ ಸಂಬಂಧಿಸಿವೆ. ಅದಕ್ಕೆ ಭೂತ ಭವಿಷ್ಯಗಳೆಂಬ ಇನ್ನೆರಡು ಸೇರಿದರೆ ಆ ಅನಂತ ಶಾಶ್ವತ ನಿಧಿಗೆ ಹನ್ನೆರಡು ದಿಕ್ಕುಗಳಾವುವು. ಹತ್ತುದಿಕ್ಕುಗಳಿಗೆಲ್ಲ ಉದ್ದಗಲ ಪಿಂಡಗಳೆಂಬ ಸಮಿತಿಗಳಲ್ಲೆ ವ್ಯಾಪಕವಾಗಿರುವುದರಿಂದ ಉಳಿದೆರಡು ದಿಕ್ಕುಗಳ ಸಮಷ್ಟಿಗೆ ಚತುರ್ಥಮಿತಿ ಎಂಬುದರ ವಿಸ್ತಾರ ದೊಡ್ಡದಾಂಗಿದೆ."[೪೬]

"ಕಾಲ ಎನ್ನುವುದು ಕಾರ್ಯಕಾರಣದ ಸಂಬಂಧವನ್ನು ಹೊಂದಿರುತ್ತದೆ ಹಾಗೆ ಕಾಲವನ್ನು ಮಾನವನು ದೃಶ್ಯರೂಪದಲ್ಲಿ ಕಾಣುವ ಅನುಭವದಮಟ್ಟಿಗೆ ಮಾತ್ರ ಗುರುತಿಸಬಲ್ಲನು ಮತ್ತು ವಿಚಾರದ ಆಳವನ್ನು ಸೂಚಿಸುವನು. ಪರಸ್ಪರ ವಿರುದ್ಧಸಿದ್ಧಾಂತಗಳಲ್ಲಿ ಒಂದು ಸುಳ್ಳಿರಲೇಬೇಕು ಎಂಬುದು ಈ ವಿಚಾರದ ಭೌತಿಕವಾದ. ಒಂದೇ ಕಾಲಕ್ಕೆ ಒಂದೇ ಸ್ಥಳದಲ್ಲಿ ಎರಡು ವಸ್ತುಗಳಿರಲಾರವು ಎಂಬುದರ ಉಪ ಸಿದ್ಧಾಂತವಿದ್ದಂತೆ. ವಸ್ತು ಎಂದರೇನು ಎಂಬ ಮಾತನ್ನು ಸದ್ಯಕ್ಕೆ ಬದಿಗಿಟ್ಟರೆ ಕಾಣುವ ವಸ್ತುರೂಪ ಎಂದುಕೊಳ್ಳಬಹುದು. ಒಂದೇಕಾಲಕ್ಕೆ ಒಂದೇ ವಸ್ತು ಅನೇಕರಿಗೆ ಅನೇಕ ರೂಪವಾಗಿ ತೋರುವುದೆಂಬುದು ತೀರಾ ವಾಸ್ತವದ ಸತ್ಯವೆಂದು ಕಂಡುಬರುತ್ತದೆ. ಕುರುಡರು ಆನೆಯನ್ನು ಗುರುತಿಸುವ ನ್ಯಾಯದಂತಲ್ಲ ಕಣ್ಣಿದ್ದವರು ಯಾವುದೇ ವಸ್ತುವನ್ನೂ ನೋಡುವಾಗ ಅನುಭವಕ್ಕೆ ಬರುವ ನ್ಯಾಯವಿದು. ದೃಷ್ಟಿಯ ವ್ಯಾಪ್ತಿಯು ಸ್ವರೂಪ ತಪ್ಪಿಲ್ಲ. ಆದಕಾರಣ ದರ್ಶನಗಳಲ್ಲೆಲ್ಲ ರೂಪದವರ್ಣನೆಯು ಸ್ವರೂಪದ ಸೂಚನೆಯು ಇದೆ. ಇಂದಿನ ಭಾಷಾ ಸಂಕೇತವು ಇಂದಿನ ದೃಷ್ಟಿಯಂತೆ ಸಂಕುಚಿತವಾಗಿದೆ. ದೃಷ್ಟಿಭೇದದಿಂದ ರೂಪ ಬೇದವು ರೂಪಭೇದದಿಂದ ದರ್ಶನ ಭೇದವೂ ಉಂಟಾಗಿರುವುದಲ್ಲದೆ ಭೇದಕ್ಕೆ ವಿರೋಧವಾದ ಛಾಯೆ ತಾಕಿ ರೂಪದೊಳಗಿನ ಸ್ವರೂಪದ ಧ್ವನಿಯು ಗೋಚರವಾಗುವದು ಮರೆಮಾಚಿ, ಖಂಡನಮಂಡನ ಶಾಸ್ತ್ರದಿಂದ ಅಖಂಡವು ಖಂಡಿತವಾಗಿಯು ಖಂಡಿತವಾಗಿದೆ. ಸತ್ಯದ ಎಲ್ಲಾ ಸೀಮೆಗಳನ್ನು ಒಳಗೊಳ್ಳುವ ನೋಟ ನಮಗೆ ಬೇಕಾಗಿದೆ ಪ್ರಕೃತಿ ಧರ್ಮಸಂಕೇತ, ಜೀವಪಿಂಡ, ಸಂಕೇತ, ವಿಶ್ವ ಬ್ರಹ್ಮಾಂಡ ಸಂಕೇತ ಪರಮೇಶ ಸಂಕೇತ ಈ ನಾಲ್ಕು ಕೋನಗಳನ್ನು ಮಧುರಚೆನ್ನರು ಕಂಡುಕೊಂಡಿದ್ದಾರೆ."[೪೭] "ಮಧುರಚೆನ್ನರು ಐನ್‌ಸ್ಟೀನ್‌ನ ಚತುರ್ಮುಖ ಸಿದ್ಧಾಂತವನ್ನು ಕಂಡುಕೊಂಡ ರೀತಿಯನ್ನು ಕುರಿತ ವಿವರಣೆ."

ಮರಾಠಿಯ 'ದಾಸ ಬೋಧದಲ್ಲಿ' ಶ್ರೀರಾಮದಾಸರು ಬರೆದ ಅಭಂಗದಲ್ಲಿ

"ನಿರಾಕಾರಿ 'ಕಾಳಮೇಳಾ ಕಾಹಿಂಚಾ'

ಉಪಾಧೀಶ ವಿಸ್ತಾರ ಝಾಂ

ತಥ ಕಾಳದಿಸೂನ ಅಲಾ

(ನಿರಾಕಾರದಿಂದ ವಿಶ್ವದಲ್ಲಿ ಕಾಲ ವೇಳಿ ಮುಂತಾದುವೇನು ಇಲ್ಲ ಅದಕ್ಕೆ ಉಪಾದಿ ದೊರಕಿದ ಮೇಲೆ ವಿಸ್ತಾರವೆಂಬುದು ಬಂದಿತು ಅಲ್ಲಿಯೇ ಕಾಲವು ಕಂಡಿತು.)

ಕಾಲವೆಂಬುದು ವಸ್ತು ಪರಮಾಣು ರೂಪವಾಗಿ

ಮೂಲೋಕ ತುಂಬಿರುವುದು

.....

.....

ಎಂದು ಹೇಳಿದ ರತ್ನಾಕರವರ್ಣಿ

ಎಂದರೆ ಇಬ್ಬರು ಹೇಳಿದ ವಿಚಾರವು ಒಂದು ವಿಚಾರವನ್ನು ಹೇಳಿದರು ಕಾಲವನ್ನು ನಿರ್ದಿಷ್ಟತೆಗೆ ಒಳಪಡಿಸಿದಾಗ ಮಾತ್ರ ಅದರ ಮರ್ಮವನ್ನು ತಿಳಿಯಬಹುದು. ಅನಿರ್ದಿಷ್ಟ ಅವಸ್ಥೆಯಲ್ಲಿ ಮೂರ್ತದಲ್ಲಾಗಲಿ, ಆ ಮೂರ್ತದಲ್ಲಾಗಲಿ ವಿಶ್ವವನ್ನು ಕಾಣಲಾಗುವುದಿಲ್ಲ ಎಂಬ ಮಾತು ಕಾಲವನ್ನು ನಾಲ್ಕನೆ ಆಯಾಮವಾಗಿ ಸ್ವೀಕರಿಸುವ ಕಾರ್ಯ ಭೌತಶಾಸ್ತ್ರದಲ್ಲಿ ನಡೆದಿದೆ. ಕಾಲವು ಒಂದು ವಿಶ್ವದ ಪ್ರತ್ಯೇಕ ಭಾಗವಾಗಿರದೆ ಭೌತಶಾಸ್ತ್ರದ ದೃಷ್ಟಿಯಿಂದ ಮಹತ್ವದ ಸಿದ್ಧಾಂತವಾಗಿರುವಂತೆ ಆತ್ಮಜ್ಞಾನದ ಮಹತ್ವದ ಸಿದ್ಧಾಂತವಾಗಿದೆ ಎಂಬುದನ್ನು ಐನ್‌ಸ್ಟೀನ್ ಸಿದ್ಧಾಂತಕ್ಕೆ ಹೋಲಿಕೆ ಮಾಡಿದ್ದಾರೆ. ಇಲ್ಲಿ ಅವರ ತೌಲನಿಕ ದೃಷ್ಟಿ, ಸೂಕ್ಷ್ಮ ಗ್ರಾಹಿತ್ವಗಳು ಅಗಾಧವಾಗಿ ಕಾಣುತ್ತವೆ. ಆತ್ಮಕಥನದ ಗದ್ಯವು ತಾತ್ವಿಕ ವಿವೇಚನೆಯಾಗಿ ಇಲ್ಲಿ ಕಾಣಿಸುತ್ತದೆ. ಆದುದರಿಂದ ಅದು ಗದ್ಯವು ಶಾಸ್ತ್ರವಾಗಿ ಮಾರ್ಪಡುತ್ತದೆ ಇದು ಮಧುರಚೆನ್ನರ ಕೃತಿಯ ಇನ್ನೊಂದು ವೈಶಿಷ್ಟ್ಯವಾಗಿದೆ."[೪೬]

"ಅರವಿಂದರ ಪೂರ್ಣಯೋಗದ ಮೂಲ ಸೂತ್ರಗಳು ಎರಡು ಚಿಕ್ಕ ಪುಸ್ತಕಗಳಲ್ಲಿ ಅಡಕವಾಗಿವೆ. ಒಂದು ಯೋಗದ ಗೊತ್ತುಗುರಿ, ಮತ್ತೊಂದು 'ಯೌಗಿಕ ಸಾಧನ' ಮೊದಲನೆಯ ಗ್ರಂಥದ ಮುಖ್ಯ ಸೂತ್ರಗಳಾದ ೧. ಮಾನವನ ಮೂಲ ಸ್ವಭಾವ ಮತ್ತು ಆತ್ಮಿಕ ಸಂಕಲ್ಪಶಕ್ತಿ ಇವೆರಡರ ಕಲಹದಲ್ಲಿ ಜೀವಬಾಧೆಯ ತಳಹಿಡಿಯುವ ಧರ್ಮವು ಕದಲುವುದರಿಂದ ಆತ್ಮಶಕ್ತಿಯ ಮಂದಗತಿಯು ಪಲ್ಲಟವಾಗಿ ತೀವ್ರಗತಿಯ ಪ್ರಕಟವಾಗುವುದು. ೨. ಬಳಿಕ ಮೂಲಸ್ವಭಾವದ ಪ್ರತಿಘಟನಾ ಧರ್ಮವು (Law of resistors) ತೂರಿ ಬರುವುದರಿಂದ ಸಂಕಲ್ಪ ಶಕ್ತಿಯು ಆಗ ಈಶನ ಪ್ರತ್ಯಕ್ಷ ಶಕ್ತಿಯ ಸಹಾಯವನ್ನು ಪಡೆದು ಅದನ್ನು ಇರಿಸುವುದು. ಆಗ ಮಾನವನಿಗೆ ಅದು ಸ್ವಶಕ್ತಿಯೆಂದೆನಿಸದೆ ತಮ್ಮೊಳಗಿನ ದೇವನ ಶಕ್ತಿಯೆಂದೆನಿಸುವುದು.

೩. ಆದರೂ ಮೂಲ ಸ್ವಭಾವವು ಸಂಧಿಯನ್ನು ಸಾಧಿಸಿ ಪುನಃ ಪುನಃ ಜಾಗೃತವಾಗಿ ಒಳಸೇರಲಿಕ್ಕೆ ಹವಣಿಸ ಹತ್ತುತ್ತದೆ ಅದರ ಧರ್ಮವನ್ನು (Law of resource) ಸಂಪೂರ್ಣವಾಗಿ ನಿರ್ನಾಮಗೊಳಿಸಲು ಸಮರ್ಥವಾದ ಸಂಕಲ್ಪಶಕ್ತಿಯು ಆಗ ಪವಾಡ ಶಕ್ತಿಯಾಗಿಬಿಡುತ್ತದೆ. ಮಾನವನಿಗೆ ದೈವತ್ವದ ಅನಿಸಿಕೆಯು ಬರುತ್ತದೆ. ಆಗ ಆತನ ಸಂಕಲ್ಪಕ್ಕೂ ದೇವನ ಸಂಕಲ್ಪಕ್ಕೂ ಅಂತರವು ಉಳಿಯುವುದೆ ಇಲ್ಲ. ಮೂರನೆಯದಕ್ಕೆ ಕೊನೆಗೆ ಸ್ವತಃ ಮಾನವನೇ ಯಾವಾಗ ದೇವನಾಗುವನೋ ಎಂಬ ಸ್ಥಿತಿಗೆ ಅವತಾರಿಯು ಮಹಾ ವಿಭೂತಿಯು ಮಾತ್ರ ಮುಟ್ಟುತ್ತಾನೆ (ಆದುದರಿಂದ ನೀನು ಪತನ ಪಿಲಂಬಗಳಿಗೆ ಎದೆಗೆಡಬೇಡ. ಅದು ಕೇವಲ ಶಕ್ತಿಯ ಬಲಗಳಿಗೆ ಸಂಬಂಧಿಸಿದ ಮಾತಾಗಿದೆ."[೪೯] ಹಾಗೆಯೇ (The mother) 'ಮಾತಾ' ಎಂಬ ಗ್ರಂಥದಲ್ಲಿನ ತತ್ವಗಳಾದ

"೧. ಪರಮಾತ್ಮನನ್ನುಳಿದು ಜೀವನವೊಂದು ದುಃಖದಾಯಕ ಭ್ರಮೆಯಾಗಿದೆ ಪರಮಾತ್ಮನೊಂದಿಗೆ ಎಲ್ಲವೂ ಆನಂದ, ಪಮರಾತ್ಮನಿಗೆ ಯಥಾರ್ಥವಾಗಿ ಸಮರ್ಪಿಸುವುದರಿಂದಲೆ ನಾವು ನಮ್ಮ ಮಾನವೀಯ ಕಷ್ಟಗಳಿಂದ ಪರಿತ್ರಾಣ ಹೊಂದುವುದು, ಪರಮಾತ್ಮ ಕೊಟ್ಟಿದ್ದನ್ನು ಯಾವಾಗಲೂ ಆನಂದದಿಂದ ಸ್ವೀಕರಿಸಬೇಕು, ತನ್ನನ್ನು ತಾನು ಆಳುವುದು ದೊಡ್ಡ ವಿಜಯವಾಗಿದೆ ಇದು ಸರ್ವಸ್ಥಾಯಿಸುಖಗಳಿಗೆ ಆಧಾರವಾಗಿದೆ. ತನ್ನತಪ್ಪುಗಳನ್ನು ಒಪ್ಪಿಕೊಳ್ಳುವುದು ಅತಿ ಶ್ರೇಷ್ಠ ಧ್ಯೇಯವಾಗಿದೆ. ರೋಷ ಹಾಗೂ ಅಪಮಾನಗಳನ್ನು ಮೀರಿನಿಂತ ವ್ಯಕ್ತಿಯು ನಿಜವಾಗಿ ದೊಡ್ಡವನಾಗುತ್ತಾನೆ. ಯಾವನು ಯಾವುದನ್ನು ಪ್ರೀತಿಸುವನೇ ಅವನು ಅದೇ ಆಗುತ್ತಾನೆ, ಸರಳತೆಯಲ್ಲಿ ಮಹಾಸೌಂದರ್ಯವಿದೆ. ಯಾವುದೇ ವ್ಯಕ್ತಿಯ ಶ್ರೇಷ್ಠತೆಯನ್ನು ಅವನ ಕೃತಜ್ಞತಾ ಶಕ್ತಿಯ ಮೇಲಿಂದ ಅಳೆಯಲಾಗುವುದು.

ಇದರಿಂದ ನಮ್ಮನಾಯಕನ ಮಿಸುಕಿಲ್ಲದ ಆತ ಸಮರ್ಪಣದಲ್ಲಿ ಒಂದು ಹೊಸ ಬಗೆಯ ಬೆಳಕು ಹುಟ್ಟಿದಂತಾಗಿದೆ ನಮ್ಮ ಬುದ್ಧಿಗೆ ಹೊಳೆದುದೆಲ್ಲಾ ಮಾಡುತ್ತಾ ಹೋಗೋಣ. ಆಗುವದು ಹೋಗುವುದು ಹೇಗೋ ಆತನ ಕಡೆ ಇದ್ದೆ ಇರುತ್ತದೆ ಎಂಬುದು ಜ್ಞಾನ ಭಿಕ್ಷುವಿನ ಒಳ ಅನಿಸಿಕೆ. ಇಲ್ಲಿ ತತ್ವಜ್ಞಾನದ ಅಧ್ಯಯನವೆ ಎದ್ದುಕಾಣಿಸುತ್ತದೆ ಒಂದು ಗ್ರಂಥದಿಂದ ಇನ್ನೊಂದು ಗ್ರಂಥಕ್ಕೆ ತಮ್ಮ ಆಧ್ಯಾತ್ಮ ಜ್ಞಾನದ ಅಧ್ಯಯನವನ್ನು ಮುಂದುವರೆಸುತ್ತಾ ಆ ಗ್ರಂಥಗಳೊಂದಿಗೆ ವೈಯಕ್ತಿಕವಾದ ಅನಿಸಿಕೆಗಳನ್ನು, ಅನುಭವಗಳನ್ನು ತೂಗಿನೋಡುತ್ತಾ, ಸಾಗಿದ ಮಧುರಚೆನ್ನರು ಕೊನೆಗೆ ಯೋಗ ಸಾಧನೆಯನ್ನು ವಿವೇಚಿಸುವ ಹಂತಕ್ಕೆ ಬಂದು ಮುಟ್ಟಿದ್ದಾರೆ. ಅಷ್ಟಾಂಗಿಕ ರಾಜಯೋಗವು ಆಚರಿಸುವುದಕ್ಕೆ ತಯಾರಾಗಿರುವುದರಿಂದ ಸಹಜಸ್ಥಿತಿಯ ಪ್ರಣವಾನುಸಂಧಾನವನ್ನು ಹೇಳಿಕೊಡಬೇಕೆಂಬುದು" ಎಂಬ ವಿಚಾರಗಳು ಬಂದು ನಿಲ್ಲುತ್ತದೆ. ನಾಮಸ್ಮರಣ ಧ್ಯಾನ, ಚಿಂತನೆಗಳ ಮಟ್ಟಿಗೆ ಅವರ ಸಾಧನೆ ಸೀಮಿತವಾಗಿರುವ ವಿಷಯ ಕಂಡುಬರುತ್ತದೆ.)"[೫೦]

ಸಮಾಜ ಎಂಬುದು ಒಂದು ಧಾರ್ಮಿಕ ಚೌಕಟ್ಟಿನಲ್ಲಿ ರಚನೆಯಾಗಿರುತ್ತದೆ. ವ್ಯಕ್ತಿ ಸಮಾಜದ ಘಟಕವು ಆಗಿರುವುದರಿಂದ ಧರ್ಮವನ್ನು ಬಿಟ್ಟುಬದುಕಲು ಸಾಧ್ಯವಿಲ್ಲ ಸಮಾಜಕ್ಕೂ ಧರ್ಮಕ್ಕೂ ವ್ಯಕ್ತಿಗೂ

ಒಂದು ಅವಿನಾಭಾವ ಸಂಬಂಧವಿರುವುದರಿಂದ ಧರ್ಮದಡಿಯಲ್ಲಿಯೇ ಜೀವನ ಮಾಡಬೇಕಾದ ಅನಿವಾರ್ಯತೆ ಇರುತ್ತದೆ. ಇಂತಹ ಒಂದು ಪ್ರಸಂಗವನ್ನು ನೋಡಬಹುದು. "ಮನೆಗೆ ಹೋಗಿ ಒಂದು ತಿಂಗಳಾಗಿಲ್ಲ. ಅಷ್ಟರಲ್ಲಿ ಸುತ್ತಮುತ್ತಲಿನ ಪ್ರಾಂತದಲ್ಲೆಲ್ಲ ಈತನು ಧರ್ಮ ಚಿಹ್ನೆಯನ್ನು ಕಿತ್ತಿಹಾಕಿದ ಮಹಾನಾಸ್ತಿಕನೆಂಬ ಕೂಗು ಮತ್ತು ಹರಡಿಬಿಟ್ಟಿತು. ಈತನನ್ನು ಅತೀಶಯವಾಗಿ ಪ್ರೀತಿಸುವವರೂ ನಿಜ ಆಧ್ಯಾತ್ಮ ಜೀವನದ ಆಸೆಯುಳ್ಳವರೂ ಆ ಭಾಗದಲ್ಲೆಲ್ಲ ಖ್ಯಾತಿ ಹೊಂದಿರುವವರು ಆದ ತರುಣ ಮಠಾಧೀಶರೊಬ್ಬರಿದ್ದರು. ಅವರು ಜ್ಞಾನಭಿಕ್ಷುವನ್ನು ಭೇಟಿಗೆಂದು ಕರೆಯಿಸಿಕೊಂಡು "ಜನತೆಯಲ್ಲೆಲ್ಲಾ ಗದ್ದಲವಾಗುವಂತೆ ಯಾಕೆ ಮಾಡಿದಿ ಎಂದು ಕೇಳಿದರು; ಅದಿಲ್ಲದೆ ಉನ್ನತಿ ಇಲ್ಲವೆಂದೂ ಗ್ರಹಿಸಿಲ್ಲ. ನನ್ನ ಮಟ್ಟಿಗೆ ಅದೊಂದು ಸಾಮಾಜಿಕ ಚಿಹ್ನೆ ಹೊರತು ಧಾರ್ಮಿಕವೇನೂ ಅಲ್ಲ."

ನನಗೇನೂ ಇಂಥದೊಂದು ಜಾತಿ ಮತದವನೆಂದು ಹೇಳಿಕೊಳ್ಳುವುದಕ್ಕೆ ಜೀವನದಲ್ಲಿ ಸಮ್ಮತಿಯನ್ನು ಸರ್ವ ಮಾನವರೆಲ್ಲಾ ಒಂದೇ ಜಾತಿ ಮನುಷ್ಯ ಜಾತಿಯೆಂಬುದು ಒಂದು ಈಗಿರುವ ಸರ್ವದೇಶ ರಗಳ ಜನಾಂಗಗಳ ಗ್ರಂಥಗಳ ಸತ್ಯತೆಯು ಸರ್ವರಿಗೆ ವಿಧಿತವಾಗಿ ಇನ್ನು ಮುಂದೆ ಒಂದೇಮನೆಯಲ್ಲಿ ಒಬ್ಬೊಬ್ಬರು ತಮ್ಮ ತಮ್ಮ ಅಭಿರುಚಿಯಂತೆ ಬೇರೆ ಯಾವುದಾದರೊಂದರಲ್ಲಿ ಹೇಳಿದ ಪದ್ಧತಿಯಂತೆ ಸಾಧನೆಯನ್ನು ಮಾಡುತ್ತಲಿರಬಹುದಾದ ಕಾಲವೊಂದು ಬೇಗನೆ ಬರುವುದರಲ್ಲಿ ನನಗೆ ಎಳ್ಳಷ್ಟು ಸಂದೇಹವಿಲ್ಲ ಈಗಿರುವ ಅಂಥ ಪರಂಪರೆಯನ್ನು ಧರ್ಮಾಧಿಪತಿಗಳ ದರ್ಪದ ಒತ್ತಾಯವನ್ನು ನಾವು ಎಳ್ಳಷ್ಟು ಸಹಿಸುವುದಿಲ್ಲ, ಲೋಕದೊಳಗಿಂದ ಅಂಥ ಅಜ್ಞಾನವು ಇಂಥ ಒತ್ತಾಯವೂ ಹೇಳಹೆಸರಿಲ್ಲದೆ ಹಾರಿಹೋಗಬೇಕೆಂದು ನಮ್ಮ ಆಂತರಾಳವು ಅನುಕ್ಷಣವೂ ಆಸೆಪಡುತ್ತದೆ. ನೀವು ನನಗೆ ಪರಮ ಪ್ರಿಯರೆಂಬ ಕಾರಣದಿಂದಲೆ ನಾನಿಲ್ಲಿಯವರೆಗೆ ಹರಿಗೊಂಡು ಬಂದೆನಲ್ಲದೆ ನೀವು ಧರ್ಮಾಧಿಕಾರಿಗಳೆಂಬ ಕಾರಣದಿಂದಲ್ಲ ಎಂಬುದನ್ನು ನಿಮ್ಮ ಲಕ್ಷ್ಯಕ್ಕೆ ತಂದುಕೊಡುತ್ತಾನೆ."[೫೧]

ಈ ಮಾತುಗಳು ಪುರೋಹಿತಶಾಹಿ ವರ್ಗವನ್ನು ಮತ್ತು ಸಮಾಜದ ಧಾರ್ಮಿಕ ಹಿತಾಸಕ್ತಿಯನ್ನು ತಿರಸ್ಕರಿಸುತ್ತವೆ ಇದಕ್ಕೆ ಪೂರ್ವರಂಗದಲ್ಲಿ ಬಂದ ಮೂರ್ತಿಪೂಜೆ ಎಂಬ ಅಧ್ಯಾಯದಲ್ಲಿನ ಬಲಿಪಾತ್ರೆಯನ್ನು ಹೋರುವುದರ ಮೂಲಕ ತಮ್ಮ ಸಂಕಟದ ಅನುಭವವನ್ನು ಬಿಡುವಂತಾಗಿದೆ. ಆಧ್ಯಾತ್ಮ ಎಂಬುದು ಧಾರ್ಮಿಕ ಮತ್ತು ಧಾರ್ಮಿಕೇತರ ಎನ್ನುವುದಾದರೆ, ಧಾರ್ಮಿಕೇತರನೆಲೆಯಲ್ಲಿ ನಿಂತು ನೋಡುವ ಮನೋಭಾವದವರಾಗಿದ್ದಾರೆ ಎನಿಸುತ್ತದೆ ಮತ್ತು ಧಾರ್ಮಿಕ ಸಾಮಾಜಿಕ ನಿಯಮಗಳ ವಿರುದ್ಧ ವೈಚಾರಿಕತೆಯನ್ನು ಎತ್ತಿಕಟ್ಟುವ ಕೆಲಸ ಮಾಡುತ್ತಾರೆ.

ಸಾಧುಸಂತರ ದೇವ ಯಾನಪಂಥ ಅಥವಾ 'ಸಾಕ್ಷಾತ್ಕಾರ ಯೋಗ'ವೆಂದು ಇದೆ ಮಹಾರಾಷ್ಟ್ರದ ಅನುಭಾವದ ಪೆಟ್ಟಗಳು ಅವರವರ ವ್ಯಾಖ್ಯಾನಗಳಿಂದ ವಿವರಿಸಲಾಗಿದೆ ಅಥವಾ ಕೊನೆಯಲ್ಲಿ ಜೋಡಿಸಿದ ಚಿಕ್ಕ ಎರಡು ಪ್ರಾಚೀನ ಪ್ರಕರಣಗಳ ಗ್ರಂಥಗಳ ಮೇಲೆ ಇಡೀ ಪುಸ್ತಕವು ಆಧುನಿಕ ಭಾಷ್ಯವಾಗಿದೆ ಎಂದು

ಹೇಳಬಹುದು. ಆ ಪ್ರಕರಣ ಗ್ರಂಥಗಳೊಂದಿರಲ್ಲಿ ಜಿಜ್ಞಾಸವೊಬ್ಬನು ಮಹಾಪುರುಷನೊಬ್ಬನಿಗೆ ವಿನ್ನವಿಸುತ್ತಾನೆ "ಅಷ್ಟಾಂಗಿಕ ಯೋಗವು ಆಚರಿಸುವುದಕ್ಕೆ ಅತಿಶಯವಾಗಿ ಬಿಗಿಯಾಗಿರುವುದರಿಂದ ಸಹಜ ಸ್ಥಿತಿಗೆ ಪ್ರಣವಾನು ಸಂಧಾನವನ್ನು ಹೇಳಿಕೊಡಬೇಕು."[೫]

"ಯಾವುದೊಂದು ಇಚ್ಛಿತ ಪದ್ಧತಿಯಿಂದ ಚಿತ್ತದ ಏಕಾಗ್ರತೆಯು ಸಾಧಿಸುತ್ತ ಬಂದ ಹಾಗೆಲ್ಲಾ ವಿವಿಧ ವರ್ಗದ ಪ್ರಕಾಶಗಳು ಅವುಗಳಲ್ಲಿ ಕೆಂಪು, ಬಿಳಿಪು, ಹಳದಿ, ನೀಲಿ ಮೊದಲಿನ ಮೂರುಕ್ರಮಗಳ ವಿಷಯದಲ್ಲಿ ಸಂತ ಮಹಾತ್ಮರ ಭಿನ್ನಾಭಿಪ್ರಾಯಗಳಿದ್ದರೂ ನೀಲಬಿಂದು ದರ್ಶನದಲ್ಲಿ ಏಕ ವಾಕ್ಯತೆಯಿದೆ. ಸ್ಥೂಲಸೂಕ್ಷ್ಮ ಕಾರಣಮಹಾಕಾರಣಗಳೆಂಬ ಶರೀರಗಳಲ್ಲಿ ಒಂದೊಂದರಲ್ಲಿ ಧಾನ್ಯಕ್ರಿಯೆಯು ಪರಿಣಾಮವಾಗುತ್ತಾ ನಡೆದಹಾಗೆಲ್ಲ ಒಂದೊಂದು ಬಣ್ಣಗಳು ಕಾಣಿಸಲಾರಂಭಿಸುವವು. ಎಷ್ಟುಜನ ಸಾಧಕರಿಗೆ ಕ್ರಮವಾಗಿ ಎಲ್ಲಾ ಬಣ್ಣಗಳು ಕಾಣುತ್ತಾ ಬರುವವೆಂಬ ನಿಯಮವಿಲ್ಲ. ಕೆಲವರಿಗೆ ತೀವ್ರ ಅಭ್ಯಾಸದ ಮೂಲಕ ಒಮ್ಮೆಲೆ ಕೊನೆಯ ಬಿಂದುವೆ ಗೋಚರಿಸುತ್ತಿರುತ್ತದೆ. ಇದಕ್ಕೆ ಅಣುಬ್ರಹ್ಮ ಎಂದು ಹೆಸರು.

"ಈ ಗ್ರಂಥದ ಮುಕ್ತಾಯಕ್ಕೆ ಬಂದಾಗ ಅಷ್ಟಾಂಗಿಕ ರಾಜಯೋಗ ಆಚರಿಸುವುದಕ್ಕೆ ಅತಿಶಯವಾಗಿ ಬಂದಿರುವುದರಿಂದ ಸಹಜ ಸ್ಥಿತಿಯ ಪ್ರಣವಾನು ಸಂಧಾನವನ್ನು ಹೇಳಿಕೊಡಬೇಕು ಎಂಬ ವಿಚಾರಕ್ಕೆ ಅವರ ಸಾಧನೆ ಬಂದು ನಿಲ್ಲುತ್ತದೆ. ನಾಮಸ್ಮರಣ, ಧ್ಯಾನ, ಚಿಂತನೆಗಳ ಮಟ್ಟಿಗೆ ಅವರ ಸಾಧನೆ ಸೀಮಿತವಾಗಿರುವ ವಿಷಯ ಇಲ್ಲಿ ಕಂಡುಬರುತ್ತದೆ. ಸಾಧುಸಂತರ ದೇವಯಾನ ಸಂಘದ ತಾತ್ವಿಕ ವಿಚಾರಗಳು ಕಾಳರಾತ್ರಿಯ ಪ್ರಖರತೆಯನ್ನು ಕಡಿಮೆ ಮಾಡಿದ್ದುದು ಗೋಚರವಾಗುತ್ತದೆ. ಒಟ್ಟಿನಲ್ಲಿ ಇಲ್ಲಿನ ವಿಷಯ ದೇವನ ಅಸ್ತಿತ್ವವನ್ನು ಹುಡುಕುವ ಯತ್ನಗಳಲ್ಲಿ ಒಂದು ಪ್ರಮುಖ ಭಾಗವಾಗಿದೆ. ತಾವು ಹೇಳಹೊರಟಿರುವ ಕಾಳರಾತ್ರಿಯ ಸ್ಥಿತಿಗತಿಗಳೆಲ್ಲಾ ಇಲ್ಲಿ ಪ್ರಕಟವಾಗಿಲ್ಲ ಅಂತೆಯೇ ಇದು ಅಪೂರ್ವ ಕೃತಿಯಾಗಿದೆ ಎಂದು ಹೇಳಬಹುದು.

ಈ ಗ್ರಂಥದ ನಾಯಕನ ಜೀವನದಲ್ಲಿ ಏರಿಳಿತಗಳು ಇಲ್ಲದಿಲ್ಲ. ಪ್ರಾಪಂಚಿಕ ತಾಪತ್ರಯಗಳದ್ದು ಒಂದು ಅವಸ್ಥೆಯಾದರೆ, ಅದರಿಂದ ಬಿಡುಗಡೆ ಹೊಂದಿ ಪ್ರಕೃತಿ ಸೌಂದರ್ಯ, ಅನುಭವ ಪಡೆಯುವುದು ಇನ್ನೊಂದು ಸ್ಥಿತಿಯಾಗಿದೆ. ಪಾರಮಾರ್ಥಿಕ ಜಿಜ್ಞಾಸೆ ಮುಂದುವರೆದಿದ್ದರೂ ಮತ್ತೊಂದು ಮಹತ್ವದ ಗತಿಯಾಗಿದೆ.

ಈ ಕೃತಿಯ ಬರವಣಿಗೆಯಲ್ಲಿ ಯಾವ ಬದಲಾವಣೆಯು ಕಂಡು ಬಂದಿಲ್ಲ. ಪೂರ್ವರಂಗದ ಶೈಲಿಯು ಇಲ್ಲಿ ಮುಂದುವರೆಯುತ್ತದೆ. ತಾತ್ವಿಕ ವಿಚಾರಗಳನ್ನು ಚರ್ಚಿಸುವಾಗ ಮಾತ್ರ ಭಾಷೆಯಲ್ಲಿ ನಿರ್ದಿಷ್ಟತೆ ಮತ್ತು ಗಾಂಭೀರ್ಯತೆ ಬರುತ್ತದೆ. ಎಂಥ ತೊಡಕಾಗಿರುವ ತಾತ್ವಿಕ ವಿಚಾರಗಳು ಸರಳತೆಯನ್ನು ಸ್ಪಷ್ಟತೆಯನ್ನು ಪಡೆದುಕೊಂಡಿವೆ.

ಕಥಾ ರೂಪದಲ್ಲಿ ಹೆಣೆದಿದ್ದರೂ ಕೂಡಾ ನಾಯಕನು ವಿವರಿಸುವ ಘಟನೆಗಳು ವಾಸ್ತವದಲ್ಲಿ ಅನುಭವಗಳೋ ಅಥವಾ ಕೃತಕತೆಗೆ ಆಧ್ಯಾತ್ಮದ ಲೇಪವನ್ನು ಹಚ್ಚಿದ್ದಾರೋ ಎಂಬ ಸಂಶಯವು ಕೂಡಾ ಬರುತ್ತದೆ ಮತ್ತು ಇದ್ದಕ್ಕಿದ್ದಂತೆ ಕಥೆಯ ಅಂದರವನ್ನು ಸಮಾಜಮುಖಿಯಾಗಿ, ಸಂಸಾರಮುಖಿಯಾಗಿ, ಪ್ರಕೃತಿಯ ಮುಖಿಯಾಗಿ ಶಾಸ್ತ್ರಾಧ್ಯಯನಗಳ ಮುಖಿಯಾಗಿ ತಿರುಗಿಸುತ್ತಾರೆ. ಒಟ್ಟಾರೆಯಾಗಿ ಪೂರ್ವರಂಗದಲ್ಲಿ ಅನುಭಾವಿಗಳ ಭೇಟಿ. ಕ್ರಿಯಾಶೀಲ ಸಂವಾದಗಳಲ್ಲಿ ತೊಡಗಿ ತೆಗೆದುಕೊಳ್ಳುವ ನಿರ್ಧಾರಗಳ ಮೂಲಕ ಅನುಭಾವ ಮಾರ್ಗವನ್ನು ಕಂಡುಕೊಳ್ಳುತ್ತಾರೆ. ಈ ಕಾಳರಾತ್ರಿಯಲ್ಲಿ, ಸಮಾಜ ಮತ್ತು ಸಂಸಾರಿಕ ಬದುಕಿನ ಜೊತೆ ಶಾಸ್ತ್ರಜಾಗೃತಿಗಳ ಮುಖಾಮುಖಿ, ವೈಯಕ್ತಿಕ ಕನಸಿನ ತಲ್ಲಣಗಳ ಮೂಲಕ ಅನುಭಾವಮಾರ್ಗ ಕಂಡುಕೊಳ್ಳುವುದನ್ನು ನೋಡಬಹುದು.

೪.೩. ಬೆಳಗು

ಕಾಳರಾತ್ರಿಯ ಮುಂದಿನ ಬಾಗವೆ 'ಬೆಳಗು' ಇದು ಸಾಧಕನ ಜೀವನದ ಇನ್ನೊಂದು ಘಟ್ಟವನ್ನು ಸೂಚಿಸುವಂತಿದ್ದರೂ, ಕಾಳರಾತ್ರಿಯ ಘಟ್ಟದ ವಿಚಾರವೇ ಹೆಚ್ಚಾಗಿ 'ಅಭಿವ್ಯಕ್ತಿ'ಗೊಂಡಿದೆ. ಈ ಪುಸ್ತಕದ ಆರಂಭದ ಪುಟಗಳಲ್ಲಿ ಎವಲಿನ್ ಅಂಡರ್‌ಹಿಲ್‌ರ ಅನುಭಾವವಾದದಲ್ಲಿಯ ಆತ್ಮನ ಕಾಳರಾತ್ರಿ (The drank right of the soul)ಯ ವಿಷಯದ ವಿವರಣೆ ದೊರಕುತ್ತದೆ.

ಕಾಳರಾತ್ರಿಯು ಮೆಲ್ಲಮೆಲ್ಲನೆ ನೆಲೆಗೊಳ್ಳುತ್ತಾ ಬರುವುದು. ಆತ್ಮದ ಶಕ್ತಿಗಳು ಅಂತಃಸ್ಪುರಣಗಳೂ ಕ್ರಮವಾಗಿ ಹಿಂದೆಗೆಯಲ್ಪಡುತ್ತವೆ. ಆನಂದದ ಪ್ರದೇಶಗಳು ಅಪರೂಪವಾಗುವವು. 'ಅನುಭಾವರಾಜ್ಯದ ಮಹಾಮೃತ್ಯು' ಅಥವಾ ಕೈಕೊಸರುವ ಅವಸ್ಥೆ ಎಂಬುದಕ್ಕೆ ಬಂದು ಮುಟ್ಟುತ್ತದೆ. ಅದರಂತೆಯೇ (ಅಲ್ಲಿಂದ ಮುಂದೆ) ಹೊಸದಕ್ಕೆ (ಐಕ್ಯ ಜೀವನಕ್ಕೆ) ಮುಂದುವರಿಯಬೇಕಾದರೂ ಕ್ರಮಗತಿಯು ಸಾಮಾನ್ಯವಾಗಿ ಮಂದವಾಗಿ ಇರುತ್ತದೆ. ಕಗ್ಗತ್ತಲೆಯ ವಿಪತ್ತುಗಳು ವೈಷಮ್ಯಗಳು ಅಧೀನವಾಗಿಬಿಡುತ್ತವೆ. ನಕಾರವನ್ನು ನಿಶ್ಚಯವು ಆಕ್ರಮಿಸುವುದು ಅವಜ್ಞತೆಯ ಮೋಡವನ್ನು ಪ್ರಭಾಕಿರಣಗಳು ಭೇದಿಸುವವು."[೫೩]

ಇಂಥ ಸ್ಥಿತಿಯ ಅನುಭವ ಪಡೆಯುತ್ತಿರುವ ಮಧುರಚೆನ್ನರಿಗೆ "Will and leave the result to God" ಎಂಬ ಶ್ರೀಅರವಿಂದರ ಸಂದೇಶ ಒಂದು ತಾರಕಮಂತ್ರವಾಗಿ ದೊರಕುತ್ತದೆ. ಈ ಸಂದೇಶದ ವಿವರಣೆ ಕೂಡಾ ಬೆಳಗಿನಲ್ಲಿ ಒಂದು ಅಧ್ಯಾಯ ತುಂಬ ಕಂಡುಬಂದಿದೆ. ಅವರ ಮುಂದೆ ದೈಹಿಕ ಅಸ್ವಸ್ಥತೆಯ ಚಿತ್ರಣ ಕಾಣಿಸಿಕೊಳ್ಳುತ್ತದೆ. ಇದು ಒಂದು ಕಾದಂಬರಿಯ ಕಥೆಯಂತೆ ಓದಿಸಿಕೊಂಡು ಹೋಗುತ್ತದೆ. ಜ್ಞಾನಭಿಕ್ಷು ಪ್ಲೇಗುಬಂದು ನರಳುತ್ತಿರುವ ಗೆಳೆಯನನ್ನು ಬೆಟ್ಟಿಯಾದದ್ದು. ನಂತರ ಸ್ವತಃ ಜ್ವರಪೀಡಿತನಾದದ್ದು, ಅದು ತನಗೆ ಪ್ಲೇಗು ಬಂದಿತೆಂದು ಭಾವಿಸಿಕೊಂಡಿದ್ದು, ಇನ್ನೇನು ಕೊನೆಯ ಘಟ್ಟ ಎಂದು ತಿಳಿದುಕೊಂಡದ್ದು ಆದರೂ ಡಾಕ್ಟರನ್ನು ಕರೆಯಿಸಿ ತೋರಿಸಿದ್ದು. ಅವರು ಅದಕ್ಕೆ ಮಲೇರಿಯಾ ಎಂದು ತಕ್ಕ ಉಪಚಾರ ನೀಡಿದ್ದು. ಒಮ್ಮೆಲೆ ಪರಿಸ್ಥಿತಿ ಬದಲಾದದ್ದು ಈ ಎಲ್ಲಾ ವಿಷಯ ಕುತೂಹಲವನ್ನು ಕೆರಳಿಸುತ್ತಾ ಹೋಗುತ್ತದೆ. ಇದಕ್ಕೂ ಏನೇ ಆಗುವುದೆಲ್ಲಾ ನಮ್ಮ ಹಿತಕ್ಕೆ ಆಗುವುದೆಂಬ ವೇದಾಂತಿಕ ಅರ್ಥಕೊಟ್ಟದ್ದು ಮಾತ್ರ ಬೇರೆ ದಿಕ್ಕಿಗೆ ಕರೆದುಕೊಂಡು ಹೋಗುತ್ತದೆ.

ಈ ಕೃತಿಯಲ್ಲಿ ಶ್ರೀವಿಜಯಗೋಸ್ವಾಮಿಯವರ ಆಧ್ಯಾತ್ಮಿಕ ಜೀವನದ ಆತ್ಮದ ಕಾಳರಾತ್ರಿಯ ಅನುಭವ ವಿಶೇಷವಾಗಿ ಚಿತ್ರಿತವಾಗಿದೆ. ಶ್ರೀವಿಜಯಗೋಸ್ವಾಮಿಯವರು ಮಧುರಚೆನ್ನರಂತೆ ಬ್ರಹ್ಮ ಸಂಸ್ಪರ್ಶ ಪಡೆದ ಮೇಲೆ ಕೆಲವು ತೊಂದರೆಗಳಿಗೆ ಒಳಗಾಗುತ್ತಾರೆ. ಅವರೇ ಹೇಳುವಂತೆ ಕಾಳರಾತ್ರಿಯ ಸ್ಥಿತಿಯಲ್ಲಿ "ಜೀವನವು ಶುಷ್ಕ ದೆಸೆಗೆ ಬಂದು ಅಂತರಂಗವು ಪುನಃ ಅಗ್ನಿಜ್ವಾಲೆಗಳ ಆಗರವಾಗಿ ಬಿಟ್ಟಿತು"[೫೪] ಅಂತೆ ಇಂಥ ಸ್ಥಿತಿಯಲ್ಲಿ ಅವರಿಗೆ ಸಾಂತ್ವಾನ ನೀಡಿ, ದಾರಿ ತೋರುವ ಕಾರ್ಯವಾದದ್ದು ತಾತ್ವಿಕ ಗ್ರಂಥಗಳಿಂದ. ಮಧುರಚೆನ್ನರು ಕಾಳರಾತ್ರಿಯನ್ನು ಪಾಟುತ್ತಿರುವವು ಅವರಂತೆಯೇ ಎಂದು ತೋರುತ್ತದೆ.

"ಈ ಸಂದರ್ಭಕ್ಕೂ ಹೊಂದಿಕೊಂಡು ವಿಶ್ವದ ಅನೇಕ ಮಹಾನುಭಾವರಲ್ಲಿ (ವಿಶೇಷವಾಗಿ ಭಾರತೀಯ ಅನುಭಾವಿಗಳಲ್ಲಿ) ಕಂಡುಬರುವ ಕಾಳರಾತ್ರಿಯ ಅವಸ್ಥೆಯನ್ನು ಮಧುರಚೆನ್ನರು ಗಮನಿಸಿದ್ದುದು ಅತ್ಯಂತ ಮಹತ್ವದ್ದಾಗಿದೆ. ಬುದ್ಧ, ಬಸವ, ವಿವೇಕಾನಂದ, ಪರಮಹಂಸ, ನಾಮದೇವ, ತುಕಾರಾಂ, ಮಹ್ಮದ್ ಪೈಗಂಬರ್ ಮೊದಲಾದವರ ಜೀವನದಲ್ಲಿಯ ಅಂಥ ಸನ್ನಿವೇಶಗಳನ್ನು ಮಧುರಚೆನ್ನರು ಆರಿಸಲ್ಪಟ್ಟಿದ್ದಾರೆ. ಅವರ ದೃಷ್ಟಿಯಲ್ಲಿ ಈ ಕಾಳರಾತ್ರಿಯ ಅನುಭವ ಸಾರ್ವಕಾಲಿಕ ಹಾಗೂ ಸಾರ್ವದೇಶಿಕವಾದುದು.[೫೫] ಹಾಗಿದ್ದರು ಅದು ಸಾರ್ವತ್ರಿಕವಾಗಿ ಆಧ್ಯಾತ್ಮಿಕ ಸಾಧಕರಲ್ಲಿ ಇರುವುದು ನಿಶ್ಚಿತವೆಂದು ಅವರು ಭಾವಿಸಿದ್ದಾರೆ. ಅದು ಏನೆ ಇರಲಿ ಕಾಳರಾತ್ರಿ ಬರುವುದು ಒಂದು ಅನಿಷ್ಟವಲ್ಲ ವಿಜಯಗೋಸ್ವಾಮಿಯವರು ಅಂದುಕೊಂಡಂತೆ "ಇದು ಪತನವಲ್ಲ, ಬಂದೇತೀರುವ ಒಂದು ಅವಸ್ಥೆ ಅಷ್ಟೆ." ಈ ಭಾಗದಲ್ಲಿ ಮಧುರಚೆನ್ನರು ಕೊಡುವ ಅನೇಕ ಆಧಾರಗಳು ಅವರ ಬಹುಶ್ರುತತ್ವಕ್ಕೆ ನಿದರ್ಶನವಾಗಿ ನಿಲ್ಲುತ್ತವೆ ಎಂಬುದನ್ನು ಗಮನಿಸಬಹುದಾಗಿದೆ.

ಜ್ಯೋತಿಷ್ಯಶಾಸ್ತ್ರದ ಲೆಕ್ಕಾಚಾರದಂತೆ ತಮ್ಮ ಅಂತನಿರ್ದೇಶನಕ್ಕಾಗಿ ಕಾಯುವ ಮಹತ್ವಪೂರ್ಣ ಸನ್ನಿವೇಶವೊಂದು ಈ ಪುಸ್ತಕದಲ್ಲಿದೆ. ಸಂಶೋಧನೆಯ ಸ್ತರದಲ್ಲಿ ಆಧ್ಯಾತ್ಮ ಸಾಧನೆ ನಡೆಸಿದ ಮಧುರಚೆನ್ನರಿಗೆ ಜ್ಯೋತಿಷ್ಯ ಶಾಸ್ತ್ರವು ನಂಬಲರ್ಹ ಎನಿಸಿದ್ದಿತೇ? ಎಂಬ ಪ್ರಶ್ನೆ ಉದ್ಭವಿಸುತ್ತದೆ ಹಾಗೆಯೇ ಅದಕ್ಕೆ ಉತ್ತರವು ಇಲ್ಲಿ ದೊರಕುತ್ತದೆ. ಮಧುರಚೆನ್ನರು ಏಳುವರ್ಷಕಾಲ ಈ ಶಾಸ್ತ್ರವನ್ನು ಅಧ್ಯಯನ ಮಾಡಿ "ಇನ್ನೂ ಸಂಶೋಧಿಸಲ್ಪಡುತ್ತಿರುವ ಅಸಂಪೂರ್ಣ ವಿಷಯ" ಎಂಬುದನ್ನು ಗುರುತಿಸಿ, ತಮಗೆ ಆ ಶಾಸ್ತ್ರ ತಿಳಿದಿದ್ದು "೧೨ ಆಣೆಗಳಷ್ಟು ಮಾತ್ರ" ಎಂದು ಹೇಳಿದ್ದಾರೆ. ಅವರ ಮಟ್ಟಿಗೆ ಹನ್ನೆರಡು ಆಣೆಗಳಷ್ಟು ನಿಜವಾಗಿಯೂ ಕಂಡಿರುವುದು ಇಲ್ಲಿ ತಿಳಿದುಬರುತ್ತದೆ. "ನಮ್ಮ ನಾಯಕನಿಗೆ ಜನ್ಮಕಾಲದಲ್ಲಿ ಹರ್ಷಲ್ಲನೆಂಬ ಗ್ರಹವು ಯಾವ ರಾಶಿಯ ಅಂಶದಲ್ಲಿದ್ದಿತೇ ಆ ಸ್ಥಳದಲ್ಲಿ ಮುಂದೆ ಎಂದೆಂದು ಬುಧನು ಬಂದಿದ್ದಾನೆಯೆ ಅಂದಂದಿನ ಸುಮಾರಿಗೆ ಈತನಿಗೆ ಅಂತ ನಿರ್ದೇಶನ ಬಂದಿರುವುದಾಗಿ ಕಂಡುಬಂದಿತು"[೫೬] ಇದು ಒಂದು ಅನುಭವ. ಈ ಕಾರ್ಯನಡೆದದ್ದು ಕಾಳರಾತ್ರಿಯ ಅವಸ್ಥೆಯಲ್ಲಿಯೆ.

ಈ ಕಾಳರಾತ್ರಿ ಅವಸ್ಥೆಯು ಒಂದು ಸನ್ನಿವೇಶ ಇಲ್ಲಿ ಗಮನಾರ್ಹವಾದು ಎನಿಸುತ್ತದೆ. ಅದು ಹೀಗಿದೆ "ಡಿಸೆಂಬರ್ ತಿಂಗಳು ಸಮೀಪಿಸಿದ ಹಾಗೆಲ್ಲಾ ಆತನ ಕಾಳರಾತ್ರಿಯ ಬೆಂಕಿಗೆ ಗಾಳಿ ನೆರವಾದಂತಾಗುತ್ತದೆ. ಅಂತರಾಳದಲ್ಲೆಲ್ಲ ಒಂದು ಅವರ್ಣನೀಯ ದಿಗ್ಭ್ರಮೆ. ಅಲ್ಲದೆ ಮೊದಲೆ ಲಿಕಿ ಲಿಕಿಯಾಗಿರುವ ಜೀವಕ್ಕೆ ಇರುಳಿನ ಭಯಂಕರ ಸ್ವಪ್ನಗಳ 'ಉಪಟಳ' ಬೇರೆ ಸ್ವಪ್ನದಲ್ಲಿ ಭಯಪಟ್ಟು, ಗಟ್ಟಿ ಧ್ವನಿಯಿಂದ ನಮ್ಮ ನಾಯಕನು ರೋಧಿಸುತ್ತಿರುವುದನ್ನು ನೋಡಿದರೆ ಬದಿಯಲ್ಲಿರುವವರಿಗೆ ಕನಿಕರವುಂಟಾಗದಿರದು. ಕನಸಿನಲ್ಲಿ ಈತನನ್ನು ಅತ್ಯುಗ್ರಹಿಂಸೆಯಿಂದ ಕೊಲ್ಲುವುದಕ್ಕೆ ಏನಾದರೊಂದು ಅಘಟಿತ ಘಟನೆ ನಡೆದು ಹಾಗೆ ಆಗುವುದು. ಆದ್ದರಿಂದ ಆತನು ಅತಿಶಯವಾಗಿ ಹೆದರಿ ಚೀರುವನು. ಹಸಿದ ಹುಲಿಯು ಹಾರಿಬಂದರೆ ಹರಿಣವೊಂದು ಎಷ್ಟು ಎದೆಗೆಡಬಹುದೋ ಅಷ್ಟು ನಮ್ಮ ನಾಯಕನ ಪರಿಯಾಗುತ್ತಿತ್ತು."[೫೭] ಆತ್ಮನ

ಕಾಳರಾತ್ರಿಯಲ್ಲಿ ಇಂಥ ವಿಲಕ್ಷಣವಾದ, ಕನಿಕರವನ್ನುಂಟು ಮಾಡುವ ಅನುಭವಗಳು ಇರುತ್ತವೆಂಬುದು ಈ ಸನ್ನಿವೇಶದಿಂದ ಗೊತ್ತಾಗುತ್ತದೆ. ಜಾನ್‌ಬನಿಯನ್ 'The piligrim's Progress' ದಲ್ಲಿಯೂ ಇದೇ ರೀತಿಯ ಅನುಭವವಿರುವುದನ್ನು ಕಾಣಬಹುದು. ಮಧುರಚೆನ್ನರು ಆ ಪುಸ್ತಕವನ್ನು ಅನಂತರ ಓದಿದ್ದು, ಅದರ ಪರಿಣಾಮ ತಮ್ಮ ಮೇಲೆ ಗಾಢವಾಗಿ ಆಗಿದ್ದು ಮುಂತಾದವುಗಳನ್ನೆಲ್ಲಾ ಇಲ್ಲಿಯೇ ವಿವರಿಸಿದ್ದಾರೆ. ಅಲ್ಲಿಯ ಸಾಧಕನು ಅನುಭವಿಸುವ ತಳಮಳವು ಮಧುರಚೆನ್ನರ ಮನಸ್ಸನ್ನು ಸೆಳೆದಿದ್ದು ಕಂಡುಬರುತ್ತದೆ ಮುಖ್ಯವಾಗಿ ಆತನುಡಿದ "I saw in my dream thet the man began to run. Now he had not for from his own door. But his wife and childrens perceiving it began to carry after him to return : But the man put is ears and ran on crying life. Life-eternal life. So he looked not behind him but fled, life, eternal life' ಎಂಬುದು ಮಾತ್ರ ಅವರ ಬಯಕೆಯ ಮಂತ್ರವಾಗುತ್ತದೆ."[೫೮]

ಬೆಳಗು ಪುಸ್ತಕದ ನಾಲ್ಕು ಅಧ್ಯಾಯಗಳು ತುಂಬಾ ವ್ಯಾಪಿಸಿರುವ 'Piligrim's Progress' ದ ಕಥೆ ಮಧುರಚೆನ್ನರನ್ನು ಎಷ್ಟು ಆಕರ್ಷಿಸಿದ್ದಿತೆಂಬುದನ್ನು ವರ್ಣಿಸಿ ಹೇಳುವುದು ಕಷ್ಟದ ಕೆಲಸ. ಅದು ಅವರ ಸಾಧನೆಯಲ್ಲಿ ಒಂದು ಮೈಲುಗಲ್ಲಾಗಿಯೇ ಕಾಣುತ್ತದೆ. ಅದರ ಜೊತೆಗೆ 'In tune with infinete' ಮತ್ತು 'Through the gate of god' ಎಂಬ ಪುಸ್ತಕಗಳ ಪ್ರಭಾವವು ಕೆಲಮಟ್ಟಿಗೆ ಅವರ ಮೇಲಾಗಿದ್ದುದು ಕಂಡುಬರುತ್ತದೆ.

"ಈ ಮಧ್ಯ ಮಹಾತ್ಮಗಾಂಧಿಯವರನ್ನು ಕಂಡದ್ದು 'Love your enimies' ಎಂಬ ವಿಚಾರವನ್ನು ಆಚರಣೆಗೆ ತಂದಿದ್ದು. ಮೊದಲಾದ ಸಂಗತಿಗಳು ಬಂದು ಹೋಗುತ್ತವೆ. ವಿಶೇಷವಾಗಿ ಕಾಳರಾತ್ರಿ ಕೊನೆಗೊಂದು ಬೆಳಗು ಕಾಣುವವರೆಗಿನ ಸಂದರ್ಭವು ಕಷ್ಟಪೂರ್ಣವಾಗಿದೆ. ಅಂಥ ಕಷ್ಟದಲ್ಲಿಯೂ ದೇವರಲ್ಲಿ ಅಚಲ ವಿಶ್ವಾಸವನ್ನು ಉಳಿಸಿಕೊಂಡು ಬಂದಿರುವುದೇ ಒಂದು ಮುಖ್ಯಸಂಗತಿ. ಅದೇ ಮುಂದಿನ ಬೆಳಗಿನ ದಾರಿ."[೫೯]

'ಪೂರ್ವರಂಗ', 'ಕಾಳರಾತ್ರಿ' ಮತ್ತು 'ಬೆಳಗು' ಇವು ಸಾಮಾನ್ಯವಾಗಿ ಒಂದೇ ಬಗೆಯ ತಂತ್ರಕ್ಕೊಳಗಾಗಿವೆ. ಆದರೂ ಅಧ್ಯಾಯಗಳ ನಿರೂಪಣೆಯಲ್ಲಿನ ಸ್ವಲ್ಪ ವ್ಯತ್ಯಾಸವಿದೆ. 'ಪೂರ್ವರಂಗ'ದಲ್ಲಿ ಎರಡು ಭಾಗಗಳಿದ್ದು, ಅಲ್ಲಿಯ ಪ್ರತಿಯೊಂದು ಅಧ್ಯಾಯಕ್ಕೂ ಒಂದೊಂದು ಸ್ವತಂತ್ರ ಶೀರ್ಷಿಕೆಗಳಿವೆ. 'ಕಾಳರಾತ್ರಿ'ಯಲ್ಲಿಯೂ ಎರಡು ಭಾಗಗಳಿರುವುದು ನಿಜ. ಆದರೆ ಇಲ್ಲಿಯ ಅಧ್ಯಾಯಗಳನ್ನು ಸಂಖ್ಯೆಗಳಿಂದಲೇ ಸೂಚಿಸಲಾಗಿದೆ. ಅದರೆ ಇಲ್ಲಿ ಎರಡು ಭಾಗಗಳಲ್ಲಿ. ಇದು ಅಮುಖ್ಯ ಎನಿಸಬಹುದಾದ ವ್ಯತ್ಯಾಸ.

ಪೂರ್ವರಂಗದಲ್ಲಿ ಲೌಕಿಕ, ಪಾರಮಾರ್ಥಿಕ ಜೀವನಗಳೆರಡರ ಸಮಸಮ ಬೆಳವಣಿಗೆ ಕಂಡುಬರುತ್ತದೆ. 'ಕಾಳರಾತ್ರಿ'ಯಲ್ಲಿ ಲೌಕಿಕದ ಸ್ಥಾನ ಗೌಣವಾಗುತ್ತದೆ. ಈ ಮಾತು 'ಬೆಳಗು'ಕೃತಿಗೂ ಅನ್ವಯಿಸುವುದು.

ಅಂದರೆ ಈ ಎರಡು ಕೃತಿಗಳಲ್ಲಿ ತಾತ್ವಿಕ ಚಿಂತನೆ, ಆಧ್ಯಾತ್ಮಗ್ರಂಥಗಳ ವ್ಯಾಸಂಗ ವಿಫುಲವಾಗಿ ಒಂದು ಲೌಕಿಕ ಜೀವನವನ್ನು ಮರೆಸುವಂತೆ ಮಾಡಿದೆ.

ಈ ಮೂರು ಗ್ರಂಥಗಳಲ್ಲಿಯೂ ಭಾಷೆ ಒಂದೇ ರೀತಿಯದಾಗಿದೆ. ಒಂದೆರಡು ಕಡೆಗಳಲ್ಲಿ ಕಾವ್ಯಮಯ ವರ್ಣನೆಗಳೂ ಬಂದಿವೆ. ಅಂತರಂಗವನ್ನು ಮಿಡಿಯುವ ಸಹಜ ಸನ್ನಿವೇಶಗಳು ಇವೆ. ಹೆಚ್ಚಾಗಿ ಇಲ್ಲಿರುವುದು ಓದುಗರನ್ನು ಚಿಂತನೆಗೆ ತೊಡಗಿಸುವ ತಾತ್ವಿಕ ವಿವೇಚನೆ ಮತ್ತು ಆಧ್ಯಾತ್ಮ ಗ್ರಂಥಗಳ ವಿವರಣೆ. ಮಧುರಚೆನ್ನರು ಮಾಡಿದ ಭಾರತೀಯ ಮತ್ತು ಪಾಶ್ಚಾತ್ಯ ತಾತ್ವಿಕ ವಿವೇಚನೆ ಮತ್ತು ಆಧ್ಯಾತ್ಮ ಗ್ರಂಥಗಳ ವಿವರಣೆ. ಮಧುರಚೆನ್ನರು ಮಾಡಿದ ಭಾರತೀಯ ಮತ್ತು ಪಾಶ್ಚಾತ್ಯ ಗ್ರಂಥಗಳ ಅಭ್ಯಾಸ ಅಗಾಧವಾಗಿರುವುದನ್ನು ಕಾಣಬಹುದು.

ಈ ಎಲ್ಲಾ ಗದ್ಯ ಕೃತಿಗಳು ರೂಪಗೊಂಡಿದ್ದು ಮಧುರಚೆನ್ನರು ತಮ್ಮ ವಯಸ್ಸಿನ ಮೂವತ್ತು ವರುಷಗಳನ್ನು ದಾಟುವುದರಲ್ಲಿಯೇ. ಇಷ್ಟು ಚಿಕ್ಕ ವಯಸ್ಸಿನಲ್ಲಿ ಅವರು ನಡೆಸಿದ ಸಾಧನೆ, ಮಾಡಿದ ವ್ಯಾಸಂಗ ನಿಜಕ್ಕೂ ಬೆರಗುಗೊಳಿಸುವಂಥದು. ಬೇಂದ್ರೆಯವರು ಕಾಳರಾತ್ರಿಗೆ ಬರೆದ ಮುನ್ನುಡಿಯಲ್ಲಿ "ಮಧುರಚೆನ್ನರು ತಮ್ಮ ಅನುಭವಕ್ಕೆ ಹತ್ತುದಿಕ್ಕಿನಿಂದ ಶಾಸ್ತ್ರದ ಅನುಭಾವಿಗಳ ಪ್ರಮಾಣಗಳನ್ನೊದಗಿಸಿದ್ದಾರೆ. ಲೇಖಕರು ಶಾಲೆಯಲ್ಲಿ ಕಲಿತದ್ದು ಕನ್ನಡ ಮುಲ್ಕಿ ಪರೀಕ್ಷೆಯವರೆಗೆ, ಇರುವುದು ಹಳ್ಳಿಯಲ್ಲಿ. ಯಾವಾಗಲೂ ಹತ್ತಿರದಲ್ಲಿರುವ ಗೆಳೆಯರೂ ಅದೇ ಜಾತಿಗೆ ಸೇರಿದವರು. ಆದರೆ 'ಮಧುರಚೆನ್ನ'ರ ಜ್ಞಾನಲಾಲಸೆಯ ಅವರ ಸಾಧನೆಯಂತೆಯೇ ಅತಿ ತೀವ್ರತರವಾದದ್ದು. ಜಿನಹಂಕ ಚಿನಿವಾಲನಂತೆ ತನ್ನ ಕಡೆಗೆ ಬಂದಿದ್ದು ಎಂಥ ಬಂಗಾರವೆಂದು ಅದರ ಬಣ್ಣವನ್ನು ಬೇರೆ ಬೇರೆ ಓರೆಗಲ್ಲಿಗೆ ಹಚ್ಚುವುದು ಅವರ ಅವಿಶ್ರಾಂತ ಉತ್ಸಾಹ, ಪ್ರಯತ್ನ, ವಿವೇಕ, ಇಂಗ್ಲಿಷ್, ಮರಾಠಿ, ಸಂಸ್ಕೃತ, ಬಂಗಾಲಿ, ಹಿಂದಿ ಸಾಹಿತ್ಯಗಳನ್ನು ಅನುಕೂಲಿಸಿದಷ್ಟು ತಿರುವಿ ಹಾಕಿದ್ದಾರೆ. ಸ್ವಪ್ರಯತ್ನದಿಂದ ಅವರ ಅಂತಃಕರಣದಂತೆಯೇ ಅವರ ಬುದ್ಧಿಯೂ ಚೂಪಾಗಿದೆ. ಇಷ್ಟಾಗಿಯೂ ಅವರ ವಯಸ್ಸು ಮೂವತ್ತರ ಸೀಮೆಯನ್ನು ಈಗ ದಾಟಲಿದೆ...."[೨] ಎಂದಿರುವುದು ಒಂದು ವಾಸ್ತವ ಸತ್ಯವಾದ ಮಧುರಚೆನ್ನರ ಪರಿಚಯವಾಗಿದೆ. ಇಂಥ ಜಿಜ್ಞಾಸುಪೂರ್ಣ, ಪ್ರತಿಭಾನ್ವಿತವೂ ಆದ ವ್ಯಕ್ತಿತ್ವ ಉಳ್ಳವರು ವಿರಳವೆಂದು ಹೇಳಬೇಕು.

ಟಿಪ್ಪಣಿಗಳು

೧. ಗುರುಲಿಂಗ ಕಾಪಸೆ, ಮಧುರಚೆನ್ನರ ಜೀವನ ಮತ್ತು ಕೃತಿಸಮೀಕ್ಷೆ, ಪು.೨೪೦

೨. ಪಂಡಿತಾರಾಧ್ಯ, ಸಾಹಿತ್ಯ ವಿಮರ್ಶೆ, ೧೯೯೯, ಪು.೨೦೦

೩. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೧೪೬

೪. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೧೪೭

೫. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೧೫೦

೬. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೧೫೧

೭. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೧೬೩

೮. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೧೫೫

೯. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೧೫೬

೧೦. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೧೫೯

೧೧. ಗುರುಲಿಂಗ ಕಾಪಸೆ, ಮಧುರಚೆನ್ನರ ಜೀವನ ಮತ್ತು ಕೃತಿ ಸಮೀಕ್ಷೆ, ಪು.೨೪೨

೧೨. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೨೨೩

೧೩. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೨೪೨

೧೪. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೨೪೩

೧೫. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೧೭೪

೧೬. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೧೭೫

೧೭. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೧೭೬

೧೮. ಗುರುಲಿಂಗ ಕಾಪಸೆ, ಮಧುರಚೆನ್ನರ ಜೀವನ ಮತ್ತು ಕೃತಿ ಸಮೀಕ್ಷೆ, ಪು.೨೪೧

೧೯. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೧೭೯

೨೦. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೧೮೪

೨೧. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೧೮೪

೨೨. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೧೮೭

೨೩. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೧೮೮

೨೪. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೧೮೯

೨೫. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೧೯೦

೨೬. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೧೯೪

೨೭. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೧೯೪

೨೮. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೧೯೭

೨೯. ಮಧುರಚೆನ್ನ ಬದುಕು ಬರಹ ಚಿಂತನೆ, ಗುರುಲಿಂಗ ಕಾಪಸೆ, ಪು.೪೨, ೪೩

೩೦. ಎ.ಎಂ. ವೆಂಕಟರಾಮನ್, ಕಾಳರಾತ್ರಿ ಲೇಖನ, ಸಂಕ್ರಮಣ ಪತ್ರಿಕೆ

೩೧. ಗುರುಲಿಂಗ ಕಾಪಸೆ, ಮಧುರಚೆನ್ನರ ಜೀವನ ಮತ್ತು ಕೃತಿ ಸಮೀಕ್ಷೆ ಪು.೨೬೯

೩೨. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೨೩೩

೩೩. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೨೩೪

೩೪. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೨೩೪

೩೫. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೨೩೬

೩೬. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೨೩೭

೩೭. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೨೩೮

೩೮. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೨೪೦

೩೯. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೨೪೧

೪೦. ಗುರುಲಿಂಗ ಕಾಪಸೆ, ಮಧುರಚೆನ್ನರ ಜೀವನ ಮತ್ತು ಕೃತಿ ಸಮೀಕ್ಷೆ ಪು.೨೪೭

೪೧. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೨೫೧

೪೨. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೨೫೨

೪೩. ಗುರುಲಿಂಗ ಕಾಪಸೆ, ಮಧುರಚೆನ್ನರ ಜೀವನ ಮತ್ತು ಕೃತಿ ಸಮೀಕ್ಷೆ ಪು.೧೪೭

೪೪. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೨೭೭

೪೫. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೨೮೮

೪೬. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೨೮೯

೪೭. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೨೮೦

೪೮. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೨೯೫

೪೯. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೨೯೬

೫೦. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೨೫೨

೫೧. ಗುರುಲಿಂಗ ಕಾಪಸೆ, ಮಧುರಚೆನ್ನರ ಜೀವನ ಮತ್ತು ಕೃತಿ ಸಮೀಕ್ಷೆ ಪು.೨೪೯

೫೨. ಗುರುಲಿಂಗ ಕಾಪಸೆ, ಆತ್ಮಶೋಧ, ೧೯೯೮, ಪು.೨೪೮

೫೩. ಗುರುಲಿಂಗಕಾಪಸೆ, ಆತ್ಮಶೋಧ, ಪು.೧೫೦

೫೪. ಬೆಳಗು, ಮಧುರಚೆನ್ನ, ಪು.೨

೫೫. ಬೆಳಗು, ಮಧುರಚೆನ್ನ, ಪು.೨೭

೫೬. ಬೆಳಗು, ಮಧುರಚೆನ್ನ, ಪು.೧೫

೫೭. ಬೆಳಗು, ಮಧುರಚೆನ್ನ, ಪು.೪೪

೫೮. ಬೆಳಗು, ಮಧುರಚೆನ್ನ, ಪು.೫೨

೫೯. ಬೆಳಗು, ಮಧುರಚೆನ್ನ, ಪು.೫೨

ಅಧ್ಯಾಯ ೫

ಕೃತಿಗಳ ತಾತ್ವಿಕ ವಿಮರ್ಶೆ

ಪೂರ್ವರಂಗ, ಕಾಳರಾತ್ರಿ, ಬೆಳಗು ಇವು ಸೃಜನಾತ್ಮಕ ಕೃತಿಗಳು. ಇವುಗಳ ವೈಶಿಷ್ಟ್ಯ ಇರುವುದು ತಂತ್ರದಲ್ಲಿ. ಅಷ್ಟನ್ನು ಬಿಟ್ಟರೆ ಇಲ್ಲಿಯ ಗದ್ಯಶೈಲಿ ಕಾದಂಬರಿಯ ಮಾದರಿಯದು. ಕಾರಂತ, ಅ.ನ.ಕೃ. ಅವರಂತೆ ನವೀನವಾದದ್ದಲ್ಲ. ಗಳಗನಾಥರ ಪರಂಪರೆಯನ್ನು ಹೋಲುವಂಥದು ನಮ್ಮ ನಾಯಕ ನಮ್ಮ ವಾಚಕರು ಎಂಬುದನ್ನು ನೆನಪಿಸಿಕೊಡುತ್ತ ಓದುಗರನ್ನು ಗಮನದಲ್ಲಿಟ್ಟುಕೊಂಡು ಇಲ್ಲಿಯ ಗದ್ಯ ಸಾಗುತ್ತದೆ. ಉದಾ. ಒಂದೆರಡು ವಾಕ್ಯಗಳನ್ನು ನೋಡಬಹುದು.

೧. ನಮ್ಮ ನಾಯಕನಿಂದು ಬಸವಾದಿ ಶರಣರ ಪಾದದೂಳಿಯಿಂದ ಪಾವನವಾದ ಕಲ್ಯಾಣ ಕ್ಷೇತ್ರವನ್ನು ಸಂದರ್ಶಿಸಲು ಹೊರಟಿದ್ದಾನೆ.

೨. ಹೊಸ ವರುಷದ ಕಥೆಯನ್ನು ಆರಂಭಿಸುವುದಕ್ಕೆ ಮುಂಚೆ ನಮ್ಮ ವಾಚಕರ ಸಂದಿಗ್ಧ ಮನಸ್ಥಿತಿಯನ್ನು ಅಥಮಾಡಿಕೊಂಡು ಸಾಗುವುದು ಒಳಿತಲ್ಲವೇ

ಹೀಗೆ ಮಧುರಚೆನ್ನರ ಕಥಾನಕಗದ್ಯ ಹಳೆಯ ಪರಂಪರೆಯನ್ನು ಉಳಿಸಿಕೊಂಡಿದ್ದರೂ ಸಂಪೂರ್ಣವಾಗಿ ಹಳೆಯದಾಗಿಲ್ಲ. ಆಧುನಿಕ ಗದ್ಯದ ಲಕ್ಷಣಗಳನ್ನು ಕೆಲಮಟ್ಟಿಗೆ ಹೊಂದಿದೆ. ಜ್ಞಾನಭಿಕ್ಷುವಿನ ಸತಿ ರೋಹಿಣಿ. ಇವಳು ನಮ್ಮ ಕಥಾನಾಯಕನ ಮಲತಂಗಿಯ ಮಗಳು. ಈ ಮನೆತನದ ಮೂಲಕ ಇವಳ ಅತ್ತೆಯ ಹೃದಯದಲ್ಲಿ ಇವಳ ವಿಷಯಕ್ಕೆ ಸಹಾನುಭೂತಿಯಿಲ್ಲ. ಅತ್ತೆಗೂ ಈಕೆಯ ತಾಯಿಗೂ ಮೊದಲಿನಿಂದಲೂ ಮುನ್ನೂರು ಚಂಗು .....ಮೇಲಾಗಿ ಇಬ್ಬರಿಗೂ ಬ್ರೆಕ್ ಬೇರೆ ಇಲ್ಲ. ವಿಧವೆಯರು ಎಂದರ್ಥ. ಹೀಗೆ ಸಾಗುವ ಗದ್ಯದಲ್ಲಿಯ ಕ್ರಿಯಾಪದ ಇಲ್ಲದ ಸಣ್ಣ ಸಣ್ಣ ವಾಕ್ಯಗಳು, ಮುನ್ನೂರು ಚಂಗು, ಬ್ರೆಕ್, ಎಂಬಂತಹ ಮಾತುಗಳು ಹೊಸತನವನ್ನು ಸ್ಪಷ್ಟವಾಗಿ ಸೂಚಿಸುತ್ತವೆ.

ಕಾದಂಬರಿಯ ರೀತಿಯಲ್ಲಿರುವ ಈ ಗದ್ಯಕೃತಿಗಳಲ್ಲಿ ತಾತ್ವಿಕ ವಿಚಾರಗಳು ಮಹತ್ವ ಸ್ಥಾನವನ್ನು ಪಡೆದಿದೆ. ಅಂತಲ್ಲಿ ಗದ್ಯವು ಹೆಚ್ಚು ವಿವರಣಾತ್ಮಕವಾಗಿಯೇ ಸಾಗಿರುವುದನ್ನು ಕಾಣಬಹುದು. ಧರ್ಮವೆಂಬ ಮಾತನ್ನೆತ್ತಿದರೆ ದೇವರು, ಪರಲೋಕ, ಆತ್ಮ, ಅಮರತ್ವ, ಕರ್ಮ, ಜನ್ಮಾಂತರು, ದಿವ್ಯಜ್ಞಾನ. ಈ ಮಾತುಗಳ ಸಂಬಂಧವು ತಪ್ಪದೆ ಬರುತ್ತದೆ. ಜಗತ್ತಿನ ಯಾವ ಜಾಗದಲ್ಲಿ ನಡೆಯುವ ಒಂದು ಧರ್ಮವನ್ನು ತೆಗೆದುಕೊಂಡರೂ ಅದು ಬುದ್ಧಿಯಾಚೆಗಿನ ದಿವ್ಯಜ್ಞಾನ ಎಂಬುದೊಂದು ಉಂಟೆಂಬ ಮಾತನ್ನಾದರೂ ಅದು ಬುದ್ಧಿಯಾಚೆಗಿನ ದಿವ್ಯಜ್ಞಾನ ಎಂಬುದೊಂದು ಉಂಟೆಂಬ ಮಾತನ್ನಾದರೂ ತಪ್ಪದೆ ಹೇಳುತ್ತದೆ. ಈ ವಿಷಯಕ್ಕೆ ಪದ್ಧತಿಯನ್ನು ಹೇಳಿಕೊಟ್ಟು ಅದರಿಂದ ಮಾನವನು ದಿವ್ಯಜ್ಞಾನಕ್ಕೆ ಮುಟ್ಟುವನೆಂದು ಹೇಳುತ್ತದೆ. ಹೀಗೆಂದ ಬಳಿಕ ಬೇರೆಬೇರೆ ಧರ್ಮಗಳ ಭಿನ್ನಭಿನ್ನ ವಿಚಾರಗಳಲ್ಲಿ ತಲೆಕೆಡಿಸಿಕೊಳ್ಳುವುದಕ್ಕಿಂತ ಅವುಗಳಲ್ಲಿ ಯಾವುದೋ ಒಂದು ಪದ್ಧತಿಯಿಂದ ದಿವ್ಯಜ್ಞಾನಕ್ಕೆ ಪ್ರಯತ್ನಿಸಿದರೆ ಆನಂತರ ಏನಿದೆಯೋ ಅದೆಲ್ಲಾ ತಾನೇ

ಹೊರಬೀಳುವದಲ್ಲಾ? ಇಲ್ಲಿ ಧರ್ಮ ಹಾಗೂ ಅದರ ಸಾಧನೆಯ ವಿಚಾರವನ್ನು ಚರ್ಚಿಸುವ ಮಧುರಚೆನ್ನರು ಎಳೆಎಳೆಗಳನ್ನು ಬಿಡಿಸಿ ತೋರಿಸುವ ಕಾರ್ಯಮಾಡಿದುದನ್ನು ಗಮನಿಸಬಹುದು. ಈ ಬಗೆಯ ವಿವರಣೆಯಿಂದ ಅದರ ಗದ್ಯ ತಿಳಿಯಾಗುವದು ಸ್ಪಷ್ಟವಾಗಿಯೇ ಇದೆ.

ಪೂರ್ವರಂಗದ ಕೃತಿಯನ್ನು ಎಂ.ಎ. ವೆಂಕಟರಾವ್ ವಿಮರ್ಶೆ ಮಾಡುತ್ತಾ ಮಹತ್ವದ ಮಾತುಗಳನ್ನು ಹೇಳಿದ್ದಾರೆ. ಇಂಥ ಆಧ್ಯಾತ್ಮಿಕ ಕಥೆಯು ಬಹುಶಃ ಆಧುನಿಕ ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಇದೆ ಮೊದಲನೆಯದು. ಇದರಲ್ಲಿ ಚಿತ್ರಿಸಿರುವ ಸಾಧನಾ ಕ್ರಮವನ್ನು ನೋಡಿದರೆ ಗ್ರಂಥಕರ್ತರು ಬಹಳ ಆಲೋಚನಾಪರರೆಂದು ಹೇಳಬಹುದು. ಬೈಬಲ್, ಕುರಾನ್, ಸೆಂಟ್ ಆಗಸ್ಟಿನ್ ಆತ್ಮಕಥೆ ಮೊದಲಾದ ಉದ್ಗ್ರಂಥಗಳನ್ನು ಉದಾಹರಿಸುವುದನ್ನು ನೋಡಿದರೆ ವಿಶಾಲ ದೃಷ್ಟಿಯನ್ನು ವ್ಯಕ್ತಗೊಳಿಸುತ್ತದೆ. ಆದರೆ ಇಲ್ಲಿ ಹೇಳಿರುವಷ್ಟನ್ನೆ ತೆಗೆದುಕೊಂಡರೆ ಸತ್ಯಾನ್ವೇಷಣೆಯು ಇಷ್ಟು ಸಣ್ಣ ಗ್ರಂಥದಲ್ಲಿ ಆಗಬಹುದಾದಷ್ಟು ಸಂಪೂರ್ಣವಾಗಿ ನಡೆದಿದೆಯೆಂದಾಗಲಿ, ಕ್ರಮಬದ್ಧವಾಗಿದೆ ಎಂದು ಹೇಳುವುದಕ್ಕೆ ಬರುವುದಿಲ್ಲ... ಎಂದು ಮುಂತಾಗಿ ನುಡಿದಿರುವ ಅವರು ಈ ಗ್ರಂಥದಲ್ಲಿ ತತ್ವಶಾಸ್ತ್ರದ ಪ್ರಯಾಣಗಳ ಮಾತೆ ಇಲ್ಲ? ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ತಾತ್ವಿಕ ವಿಷಯಗಳನ್ನು ಒಳಗೊಳ್ಳುವ ಈ ಕೃತಿಯಲ್ಲಿ ತತ್ವಶಾಸ್ತ್ರದ ಪ್ರಮಾಣಗಳನ್ನು ಹುಡುಕುವುದು ಸಂಪೂರ್ಣ ತಪ್ಪೇನೂ ಅಲ್ಲ. ಆದರೆ ಇದು ತತ್ವನಿರೂಪಣೆಗಾಗಿಯೇ ಬರೆದ ಗ್ರಂಥವಲ್ಲ ಎಂಬುದನ್ನು ವಿಮರ್ಶಕರು ಗಮನಿಸಬೇಕು. ಮಧುರಚೆನ್ನರು ಸ್ವತಃ ತಮ್ಮ ಗ್ರಂಥದಲ್ಲಿ ಪೂರ್ವರಂಗವು ತತ್ವಜ್ಞಾನದ ಪುಸ್ತಕವೆ ಅಲ್ಲ ಅನುಭಾವ ಪಥದ ಒಂದು ನಕ್ಷೆ ಮಾತ್ರ.? ಅಷ್ಟೆ ಅಲ್ಲದೆ ಪ್ರಾರಂಭವಾದ ಸಾದನೆಯನ್ನು ಚಿತ್ರಿಸುವ ಕ್ರಮಬದ್ಧತೆಯನ್ನು ಅನುಸರಿಸಿರುತ್ತದೆ ಎಂಬುದನ್ನು ಮರೆಯುವಂತಿಲ್ಲ. ಒಂದು ಕೃತಿಯನ್ನು ಅಧ್ಯಯನದ ವಿಶ್ಲೇಷಣೆ ಮಾಡಲು ತಾತ್ವಿಕ ಅಂಶಗಳೆ ಪ್ರಮುಖವಾಗಿದೆ. ಈ ಕೃತಿಯಲ್ಲಿ ತಾತ್ವಿಕ ಪ್ರಮಾಣಗಳ ಮಾತೆ ಇಲ್ಲ ಎಂಬ ನಿರ್ಧಾರವು ಇಡೀ ಅಧ್ಯಯನದ ತೊಡಕುಗಳಾಗಿ ಕಂಡುಬರುತ್ತದೆ. ಹಾಗಾಗಿ ಇದು ಒಂದು ಆತ್ಮಶೋಧದ ಮಿತಿ ಎಂದು ಹೇಳಬಹುದು.

ಹಾಗಿದ್ದರೂ ಈ ಕೃತಿ ಅನುಭಾವ ಮಾರ್ಗಕ್ಕೆ ನಿಶ್ಚಿತ ದಾರಿ ತೋರುವಂತವುದಲ್ಲಿ. ಇಲ್ಲಿಯದು ವ್ಯಕ್ತಿನಿಷ್ಠವಾದ ಸಾಧನೆಯಿ ಹೊರತು, ಸರ್ವ ಸಾಮಾನ್ಯವಾದ ಕೆಲವು ನಿರ್ದಿಷ್ಟ ಸ್ಥಲಗಳನ್ನಾಗಲಿ ಸೂಚಿಸುವಂತಹುದಲ್ಲ. ಅಲ್ಲಲ್ಲಿ ಕಂಡುಬರುವ ಮಹಾನುಭಾವರ ವಿಚಾರಗಳು, ಸ್ವತಃ ಮಧುರಚೆನ್ನರು ನಡೆಸಿದ ಸಾಧನೆಯ ಕೆಲವು ಸನ್ನಿವೇಶಗಳು ಒಂದೊಂದು ರೀತಿಯಿಂದ ಆಧ್ಯಾತ್ಮ ಸಾಧಕನಿಗೆ ದಾರಿ ತೋರುವಂತವುಗಳಾಗಿವೆಯೆಂದು ಮಾತ್ರಹೇಳಬಹುದು. ಅನುಭಾವ ಆತ್ಮಕತೆಯೆಂದು ಕರೆಯಿಸಿಕೊಳ್ಳುವ ಬರವಣಿಗೆಯು ಅಧ್ಯಯನ ಮಾಡಲು ಅಗತ್ಯವಾದ ಪೂರ್ವಸಿದ್ಧತೆಯು ಸಾಹಿತ್ಯ ವಿಮರ್ಶಕನಿಗೆ ಇದೆಯೋ. ಇಲ್ಲವೋ ಎನ್ನುವುದು ಅಷ್ಟು ಮಹತ್ವದ ಪ್ರಶ್ನೆಯಲ್ಲ. ಅನುಭಾವಿಕ ಪ್ರಮಾಣಿಕತೆ, ತೀವ್ರತೆ, ಅನುಭಾವಿಯು ಹುಡುಕುವ, ಕಂಡುಕೊಳ್ಳುವ ಮಾರ್ಗಗಳ ವಿಸ್ತಾರ ವೈವಿಧ್ಯ ಮುಂತಾದವು ನಮ್ಮ ಅನುಸಂಧಾನದ ಗೌಣವೆಲೆಗಳು. ಅವುಗಳನ್ನು ಗುರುತಿಸಲು, ಅಳೆಯಲು, ಬೆಲೆಕಟ್ಟಲು, ನಮಗೆಸೂಕ್ತ ಮಾನದಂಡಗಳು

ಇಲ್ಲ. ಆತ್ಮಕತೆಯ ಆಶಯ ಆಕೃತಿಗಳ ಮೇಲೆ ಬೀರಿರುವ ಪ್ರಭಾವವನ್ನು ಪರಿಗಣಿಸದೆ ಬಿಡುವಿಲ್ಲ. ಆದ್ದರಿಂದ ಇದು ತಂತಿಯ ಮೇಲಿನ ನಡಿಗೆ.

ಆತ್ಮಕಥನವು ಆಧ್ಯಾತ್ಮ ಕೃತಿಯಾಗಿರುವುದರಿಂದ ಇತರ ಸಾಹಿತ್ಯ ಕೃತಿಗಳನ್ನು ವಿವಿಧ ಆಯಾಮಗಳಿಂದ ನೋಡಲು ಸಾಧ್ಯವಾಗುವುದಿಲ್ಲ. ಅನುಭಾವ ಆತ್ಮಕತೆ ಇಲ್ಲಿ ಮುಖ್ಯವಾಗಿ ಕನ್ನಡ ಸಾಹಿತ್ಯದಲ್ಲಿ, ಆತ್ಮಕಥನದ ಮಹತ್ವವನ್ನು ಕುರಿತು ಹೇಳುತ್ತಲೇ ಮಧುರಚೆನ್ನರ ಬಹುಭಾಷಿಕ ವ್ಯಕ್ತಿತ್ವವನ್ನು ಪರಿಚಯಿಸುತ್ತದೆ. ಸತ್ಯಾನ್ವೇಷಣೆಯು ಈ ಕೃತಿಗಳನ್ನು ಪರಿಪೂರ್ಣವಾಗಿ ಬಂದಿಲ್ಲ ಎಂಬ ಸಂಶಯವನ್ನು ವ್ಯಕ್ತಪಡಿಸುತ್ತಾರೆ. ತಾತ್ವಿಕ ಚರ್ಚೆಗೆ ಒಳಗಾಗುವ ಸಂಭವವನ್ನು ತುಂಬಾ ದೂರವಿಡುತ್ತಾರೆ ಮತ್ತು ತಾತ್ವಿಕ ವಿಚಾರಗಳನ್ನು ಹುಡುಕುವುದು ಸಂಪೂರ್ಣ ತಪ್ಪೇನು ಅಲ್ಲ ಎಂದು ಹೇಳುವವರ ಮೂಲಕ ವ್ಯಾಪ್ತಿಗೆ ಒಳಪಡಿಸುತ್ತಾರೆ. ಅಧ್ಯಯನದ ಇತರ ಮಗ್ಗಲುಗಳನ್ನು ಅನ್ವಯಿಸಿ ಅಧ್ಯಯನದ ಇತರ ಮಗ್ಗಲುಗಳನ್ನು ಅನ್ವಯಿಸಿ ಅಧ್ಯಯನ ಮಾಡಲು ಅವಕಾಶವಿಲ್ಲದಂತೆ ಈ ಆತ್ಮಕಥನದ ಚೌಕಟ್ಟು ರಚನೆಯಾಗಿದೆ.

ಮಧುರಚೆನ್ನರು ಅನುಭಾವಿಗಳೊಡನೆ ಚರ್ಚಿಸುವುದರ ಮೂಲಕ ಸಂವಾದಿಯಾಗುವದರ ಮೂಲಕ, ಅವರ ಅನುಭವವನ್ನು ತಮ್ಮದಾಗಿಸಿಕೊಳ್ಳಲು ನೋಡುವರು. ಅದು ಇವರ ಕೈಗೆ ನಿಲುಕದೆ ಹೋದಾಗ ಸ್ವಪ್ರಯತ್ನಕ್ಕೆ ಮಾರ್ಗ ತೋರಿಸುವುದನ್ನು ನೋಡಬಹುದು.

ಅನುಭಾವಕ್ಕೆ ಸಂಬಂಧಿಸಿದ ಕೃತಿಗಳನ್ನು ತೀವ್ರವಾಗಿ ವಿಮರ್ಶಿಸಲು ಸಾಧ್ಯವಿಲ್ಲ ಎಂಬ ಮಾತು ಕಂಡುಬರುತ್ತದೆ. ಇತರ ಸಾಹಿತ್ಯ ಕೃತಿಗಳನ್ನು ಸಮಗ್ರ ಅಧ್ಯಯನಕ್ಕೆ ವಿಮರ್ಶೆಗೆ ಒಳಪಡಿಸಲು ಕಷ್ಟವಾಗುತ್ತದೆ. ಏಕೆಂದರೆ ಅನುಭಾವ ಎಂಬುದು ಸಾರ್ವತ್ರಿಕವಾಗಿ ಅನ್ವಯವಾಗುವಂತದಲ್ಲ. ವೈಯಕ್ತಿಕವಾದುದು ಹಾಗಾಗಿ ಇದನ್ನು ಇಚ್ಚೆ ಇದ್ದರೂ ಇಲ್ಲದಿದ್ದರೂ ಸ್ವೀಕಾರ ಮಾಡಬೇಕಾಗುತ್ತದೆ. ಆದ್ದರಿಂದ ತಂತಿಯ ಮೇಲಿನ ನಡಿಗೆ ಎಂದು ಕರೆಯಬಹುದು.

ಅನುಭಾವ ಮಧುರಚೆನ್ನರ ಸಾಹಿತ್ಯದ ಮೊದಲು ಹೌದು ತುದಿಯು ಹೌದು. ಅಷ್ಟೆ ಅಲ್ಲ ಅದು ಮೂಲತಃ ಸಾಧಕನ ವ್ಯಕ್ತಿತ್ವವೊಂದರ ಆಧ್ಯಾತ್ಮಿಕ ಪ್ರಯಾಣದ ಅಂತರಾನುಭವಗಳ ಸ್ವಾಗತಲಹರಿಯಾಗಿದೆಯೇ ಹೊರತು, ಸಾಹಿತ್ಯ ನಿರ್ಮಿತಿಯ ಉದ್ದೇಶ ತುರ್ತಿನಿಂದ ರಚಿತವಾದದ್ದಲ್ಲ. ಆದಕಾರಣವೆ ಅದು ಈ ಜನ್ಮದಲ್ಲಿ ಪರಮಾತ್ಮನ ಪ್ರತ್ಯಕ್ಷ ಅನುಭವವನ್ನು ಪಡೆಯುವುದಕ್ಕಿಂತ ಹೆಚ್ಚಿನದೇನೂ ಇಲ್ಲ, ಎಂಬ ಹಾದಿಯಲ್ಲಿ ಹೊರಟು ಪಯಣಿಗನ ಹಂಬಲ, ವ್ಯಾಕುಲ, ಸಂಘರ್ಷ, ಸತ್ಯದ ಸಕೃದ್ದರ್ಶನದಿಂದ ಒದಗುವ ಸಂಭ್ರಮ, ತದನಂತರ ಥಟ್ಟನೆ ಕವಿದುಕೊಳ್ಳುವ ಕಾಳರಾತ್ರಿಯ ತಲ್ಲಣಗಳು ಮತ್ತು ಮುಂದಿನ ಅರುಣೋದಯದ ಬೆಳಕಿನ ಆನಂದ ಇತ್ಯಾದಿಗಳ ಕಥನ ಮಾತ್ರವಾಗುತ್ತದೆಯೇ ಹೊರತು ಸಾಮಾಜಿಕ ಪ್ರಜ್ಞೆ, ವಾಸ್ತವಿಕತೆ, ರಾಷ್ಟ್ರೀಯತೆ ನಿಸರ್ಗ ಸೌಂದರ್ಯ ನಿಷ್ಠೆಯಂತಹ ಕಾಳಜಿಗಳು ಮುಖ್ಯವಾಗುವುದಿಲ್ಲ. ಇದನ್ನೆ ಇವರ ಸಾಹಿತ್ಯ ಸಂವೇದನೆಯ ಕೊರತೆ ಎಂದು ತಿಳಿಯಬೇಕಾಗಿಲ್ಲ. ಯಾಕೆಂದರೆ ಯಾವ ಶಕ್ತಿಗೆ ಹೊಸ ಎಚ್ಚರ ಹುಟ್ಟಿ, ಅದರ ಮೂಲವನ್ನು ಅರಿಯುವ ಮತ್ತು ಬೆರೆಯುವ ಅನುಭಾವದ ಹಂಬಲವೊಂದೆ ಹಾಸಲುಟು.

ಹೊದೆಯಲುಂಟು ಎಂಬ ಅವಸ್ಥೆ ವಿಶೇಷವಾಗುತ್ತದೆಯೇ ಅವಕ್ಕೆ ತಾನುಂಟು ತನ್ನ ದೈವ ಉಂಟು ಎಂಬುದನ್ನು ಬಿಟ್ಟರೆ ಬೇರೇನು ಬೇಕಾಗುವುದಿಲ್ಲ.

ಅರವಿಂದರು ಕೂಡಾ ಅನುಭಾವಿಗಳ ಅದರೂ ಅವರಲ್ಲಿ ಸಾಮಾಜಿಕ ಪ್ರಜ್ಞೆ, ವಾಸ್ತವಿಕತೆ, ರಾಷ್ಟ್ರೀಯತೆ, ನಿಸರ್ಗ ಸೌಂದರ್ಯ, ನಿಷ್ಠೆಯಂತಹ ಕಾಳಜಿಗಳು ಮುಖ್ಯವಾಗುತ್ತದೆ. ಕೇವಲ ಆಧ್ಯಾತ್ಮ ದೃಷ್ಟಿಯಿಂದಲೆ ಎಲ್ಲವನ್ನು ನೋಡುವ ಮನಸ್ಸುಳ್ಳವರಾಗಿರುವುದರಿಂದ ಇವರ ಆತ್ಮಕಥನವು ಸಾಹಿತ್ಯವನ್ನು ಬರೆಯುವ ಉದ್ದೇಶದಿಂದಲೆ ರಚಿತವಾಗಿಲ್ಲ. ಪ್ರಾಚೀನ ಸಾಹಿತ್ಯದಲ್ಲಿ ಕಂಡುಬರುವ ಕೇವಲ ನಾನು ಲಿಪಿಕಾರ ಮಾತ್ರ ಎಂದು ಹೇಳುವುದರ ಮೂಲಕ ಕಾವ್ಯವನ್ನು ದೇವರೆ ಬರೆಸಿದ ಎಂಬ ನಂಬಿಕೆಯನ್ನು ಇಟ್ಟುಕೊಂಡಿದ್ದರು. ಈ ಪ್ರಭಾವವು ಮಧುರಚೆನ್ನರ ಮೇಲೆ ಬಿದ್ದಿದೆ ಏನೋ ಎನಿಸುತ್ತದೆ. ಇನ್ನೊಂದು ಮಾತಿನಲ್ಲಿ ಹೇಳುವುದಾದರೆ ಮಧುರಚೆನ್ನರು ಯಾವುದೇ ವಸಾಹತುಶಾಹಿ ಆಡಳಿತದ ಕಡೆಗೆ ಕಿವಿಗೊಡಲಿಲ್ಲ. ಚಿಕ್ಕ ಹಳ್ಳಿಯ ಸಂಸ್ಕೃತಿಕ ಪರಿಸರದಲ್ಲಿ ಬೆಳೆದಿದ್ದರಿಂದ ಅವರಿಗೆ ರಾಷ್ಟ್ರೀಯತೆ, ಮುಂತಾದ ಕಾಳಜಿಗಳು ಬೇಕಾಗಿರಲಿಲ್ಲ. ಎಲ್ಲವೂ ದೈವ ಎಂಬ ಮನೋಭಾವನೆ ಎಂಬುದು ಅವರಲ್ಲಿ ತುಂಬಿದೆ ಎಂದು ಹೇಳಬಹುದು.

ಅಧ್ಯಾಯ ೬

ಉಪಸಂಹಾರ

ಮಧುರಚೆನ್ನರ ಆತ್ಮಶೋಧ ಅಧ್ಯಯನದ ಫಲಿತಗಳು

ಅನುಭವ ಇರುವಲ್ಲಿ ಅಮೃತತ್ವದ ಸ್ಫಿರ

ಕನ್ನಡ ಸಾಹಿತ್ಯ ಪರಂಪರೆಯಲ್ಲಿ ನವೋದಯ ಯುಗವೆಂದು ಕರೆದ ೧೯ನೆ ಶತಮಾನದಲ್ಲಿ ಇಂಗ್ಲಿಷ್ ಸಾಹಿತ್ಯದ ಪ್ರಭಾವ ಮತ್ತು ಸಂಸ್ಕೃತ, ದೇಸಿ ಜ್ಞಾನ ಪರಂಪರೆಗಳ ಮೂಲಕ ಅಭಿವ್ಯಕ್ತವಾದ ಸಾಹಿತ್ಯ ರಚನೆಗಳು ವಿಪುಲವಾಗಿವೆ. ಕನ್ನಡ ಸಾಹಿತ್ಯದಲ್ಲಿ ಅನುಭಾವಿ ಆತ್ಮಚರಿತ್ರೆಗಳು ಕಂಡು ಬಂದಿದ್ದರೂ ಕೂಡಾ ಮಧುರಚೆನ್ನರ ಆತ್ಮಚರಿತ್ರೆಯ ಹೆಚ್ಚು ವಿಶಿಷ್ಟವಾಗಿದೆ ಎಂಬುದನ್ನು ಈ ಅಧ್ಯಯನದ ಸಂದರ್ಭದಲ್ಲಿ ಅವಲೋಕಿಸಲಾಗಿದೆ. ಕನ್ನಡ ಅನುಭಾವಿಕ ಪರಂಪರೆಯಲ್ಲಿ ಮಧುರಚೆನ್ನರ ಆತ್ಮಶೋಧ (ಆತ್ಮಕಥನ)ವು ತನ್ನ ಅಸ್ತಿತ್ವ ಪ್ರಕಟಪಡಿಸಿ ಆತ್ಮಕಥನ ಪರಂಪರೆಯು ಇಂದಿಗೂ ಜೀವಂತವಾಗಿ ಉಳಿದುಕೊಂಡು ಬಂದಿದೆ. ಅದರ ಸತ್ವಯುತ ಮೌಲ್ಯಗಳು ಮತ್ತು ಜೀವಕೇಂದ್ರಿತ ನೆಲೆಗಳಿಂದ ರೂಪುಗೊಂಡಿರುವ ರಚನೆಗಳಿಂದಾಗಿದೆ ಎಂಬುದನ್ನು ಸಂಶೋಧನಾ ಅಧ್ಯಯನದ ಸಂದರ್ಭದಲ್ಲಿ ಕಂಡುಕೊಳ್ಳಲಾಗಿದೆ.

ಕನ್ನಡದಲ್ಲಿ ಮಧುರಚೆನ್ನರ ರಚನೆಗಳು ಅನನ್ಯವಾಗಿದೆ. ಮುಖ್ಯವಾಗಿ ಅವರ ರಚನೆಗಳು ಅಂಡರ್‌ಹಿಲ್, ಪರಮಹಂಸ, ವಿವೇಕಾನಂದ, ವಿಜಯಗೋಸ್ವಾಮಿ, ಸುಧಾರಣಾ ಪಂಥದ ಪ್ರಭಾವದಿಂದ ರಚನೆಯಾಗಿದೆ. ಮೇಲ್ನೋಟಕ್ಕೆ ವೀರಶೈವ ಮತಕ್ಕೆ ಅಂಟಿಕೊಂಡಂತೆ ಕಂಡರು, ಅವರ ರಚನೆಗಳಲ್ಲಿ ಅದ್ವೈತಿಗಳಾಗಿ ಕಂಡರೂ ಯಾವುದೇ ಮತಧರ್ಮಗಳ ಪ್ರತಿಪಾದಕರಾಗದೆ ಮಾನವತಾವಾದದ ಪ್ರತಿಪಾದಕರಾಗಿದ್ದರು ಎಂಬುದು ಬಹುಮುಖ್ಯ ಸಂಗತಿ. ಭಕ್ತಿಮಾರ್ಗ ಪರಂಪರೆಯ ಅಭಿವ್ಯಕ್ತಿಕರಾಗಿ ಗಮನಸೆಳೆಯುತ್ತಾರೆ. ಮಧುರಚೆನ್ನರು ಅಕ್ಕಮಹಾದೇವಿ, ಅಲ್ಲಮಪ್ರಭು, ಬಸವಣ್ಣ, ಅರವಿಂದ, ಪರಮಹಂಸ ಇವರ ನಿಲುವುಗಳಿಗೆ ಹತ್ತಿರವಿದ್ದಂತೆ ಬಾಸವಾದರೂ 'ಎಲ್ಲರೊಳಗಿದ್ದು ಎಲ್ಲರಂತಲ್ಲದೆ' ವಿಶಿಷ್ಟ ಅಭಿವ್ಯಕ್ತಿಕರಾಗಿ ಸೆಳೆಯುತ್ತಾರೆ. ಹಾಗಾಗಿ ಅವರು ಯೋಗಿ, ಭಕ್ತಕವಿ, ಅನುಭಾವಿಯಾಗಿ ಅವರವರ ದಕ್ಕಿಸಿಕೊಳ್ಳಬಹುದಾದಷ್ಟು, ನಿಲುಕುತ್ತಲೆ ಇದ್ದಾರೆ ಮತ್ತು ದಿವ್ಯದರ್ಶನದ ಸಾಕಾರವಾಗಿ ನಿಲ್ಲುತ್ತಾರೆ.

ಸಮಕಾಲೀನ ಧಾರ್ಮಿಕ ನೆಲೆಗಟ್ಟಿನಲ್ಲಿ ಅತ್ಯಂತ ನಿಷ್ಠುರವಾದ ನಿಲುವುಗಳುಳ್ಳ ಮಧುರಚೆನ್ನರದು ಪರೀಕ್ಷಕಗುಣ. ತಮ್ಮ ಕಾಲದ ಧಾರ್ಮಿಕ ಬಿಕ್ಕಟ್ಟುಗಳು ಸಂಘರ್ಷಗಳು ಮತ್ತು ಮತಗಳ ಕಚ್ಚಾಟಗಳಿಗೆ ಕಿವಿಗೊಡದೆ, ಏಕಸಾಕ್ಷಿತ್ವ ಪಾದದಲ್ಲಿ ಸಾಧನೆ ಮಾಡಿದುದು ಮಧುರಚೆನ್ನರ ವೈಶಿಷ್ಟ್ಯ. ಅವರ ಸಮಕಾಲೀನರಲ್ಲಿ ಇಷ್ಟು ಸ್ಪಷ್ಟ ಹಾಗೂ ನೇರವಾದ ನುಡಿಗಳಲ್ಲಿ ದಾಖಲಾಗಿರುವುದು ಅಪರೂಪ ಎನ್ನಬೇಕು. ಸಮಾಜದ ಒಳಿತಿಗೆ ತಮ್ಮ ರಚನೆಯಲ್ಲಿ ನಿಷ್ಕಲ್ಮಶ ಭಕ್ತಿಗೆ ಪ್ರಾಧಾನ್ಯತೆ ನೀಡುತ್ತದೆ. ಡಂಬಾಚಾರದ ಭಕ್ತಿ, ಧರ್ಮ, ಆಚರಣೆ, ಢಾಂಬಿಕಗುರುಗಳು ಇವುಗಳನ್ನು ಉಗ್ರವಾಗಿ ಖಂಡಿಸುತ್ತಾರೆ.

ಸಮಾಜದಲ್ಲಿನ ಜಾತಿ, ಕುಲ, ಮತ, ಆಚರಣೆಗಳನ್ನು ನಿರಾಕರಿಸುವ ಮಧುರಚೆನ್ನರು ಸಂಸಾರದ ಭವ ಬಂಧನಗಳಲ್ಲಿದ್ದುಕೊಂಡೆ ವೈರಾಗ್ಯವನ್ನು ಆರಾಧಿಸಿದವರು. ಹಾಗಾಗಿ ಅವರ ರಚನೆಗಳಲ್ಲಿ ಯೋಗ ಮತ್ತು ಭೋಗದ ಸಮನ್ವಯವಿದೆ. ಮುಕ್ತಿಯ ಮಾರ್ಗಕ್ಕೆ ಭಕ್ತಿಯೋಗದ ಅನುಸಂಧಾನ ನಡೆಸುತ್ತಾರೆ. ಮಧುರಚೆನ್ನರದು ನವೋದಯ ಪರಂಪರೆಯಲ್ಲಿ ಭಕ್ತಿಯೋಗದ ಮಾರ್ಗ. ಈ ಮಾರ್ಗದಲ್ಲಿ ನಡೆಯುವ ಸಾಧಕ ಬಾಹ್ಯ ಆಕಾಂಕ್ಷೆಗಳು, ದೇಹದ ಮೋಹ ತೊರೆದು ನಿಜದ ಗುರುವಿನ ಮಾರ್ಗದರ್ಶನದಲ್ಲಿ ಭಕ್ತಿಯೋಗದ ಮೂಲಕ ಹೊಸ ಬದುಕನ್ನು ನೋಡುವ, ಹೊಸ ಪ್ರಪಂಚವನ್ನು ಕಾಣುವ ಸತ್ಯ ಪ್ರಕಾಶದ ಬಾಗಿಲನ್ನು ತೆರೆಯುತ್ತಾರೆ. ಮಧುರಚೆನ್ನರ ಭಕ್ತಿಯೋಗದ ಅನುಸಂದಾನದಲ್ಲಿ ಬೆಳದಿಂಗಳು ಸ್ಥಾಯಿಯಾಗಿದೆ.

ಮಧುರಚೆನ್ನರನ್ನು ಅನುಭಾವಿಯಾಗಿ, ದಾರ್ಶನಿಕರಾಗಿ ಕಾಣುವದಂತೂ ಹೊಸ ಚೈತನ್ಯವನ್ನು ನೀಡುತ್ತದೆ. ಜಗತ್ತಿನೆಲ್ಲೆಡೆ ಅನುಭಾವವೆಂಬ ಒಲವು ಹರಡುತ್ತಿದ್ದಾಗಲೆ ಮಧುರಚೆನ್ನರು ತಮ್ಮ ರಚನೆಗಳಲ್ಲಿ ಮಾಗಿದ ಅನುಭಾವಿಯಂತೆ ಕಾಣುತ್ತಾರೆ. ಮಧುರಚೆನ್ನರನ್ನು ಅನುಭಾವಿ ಎಂದೆ ಕರೆದರೂ ಅಲ್ಲೂ ವಿಶಿಷ್ಟ ಸ್ಥಾನವಿದೆ. ಆಧ್ಯಾತ್ಮ ಆಶೆಯಗಳ ತೀವ್ರ ಸ್ಪಂದನವಿರುವ ಮಧುರಚೆನ್ನರು ಸಮಕಾಲೀನ ಧಾರ್ಮಿಕ ಅಂಧಾನುಕರಣೆಗೆ ತೀವ್ರವಿರೋಧ ವ್ಯಕ್ತಪಡಿಸುವಂತೆ ಕಂಡುಬರುತ್ತದೆ. ಆದರೆ ಅವರ ಅಭಿವ್ಯಕ್ತಿಯು ಭಕ್ತಿ ಮತ್ತು ವೈಚಾರಿಕ ನೆಲೆಯಲ್ಲಿಯೇ ನಡೆಯುತ್ತದೆ. ಅನುಭಾವದ ಆತ್ಮಪ್ರಕಾಶದ ಮೂಲಕ ಕಂಡ ದಿವ್ಯಜ್ಞಾನವನ್ನು ತಮ್ಮ ಆತ್ಮಕಥನದಲ್ಲಿ ಹರಳು ಗಟ್ಟಿಸಿದ್ದಾರೆ. ಭಾರತೀಯ ಅನುಭಾವಿ ಪರಂಪರೆ ಎನ್ನುವುದು ಕೂಡಾ ದೇಸಿಯ ನೆಲೆಗಟ್ಟಿನಲ್ಲಿ ವಿವಿಧ ಭಾಷೆ ಸಂಸ್ಕೃತಿಗಳ ಮೂಲಕ ಅಭಿವ್ಯಕ್ತಗೊಂಡ ಪ್ರಕಾರ. ಭಾರತೀಯ ಅನುಭಾವಿ ಪರಂಪರೆಗೆ ಕನ್ನಡದ ಕೊಡುಗೆಯಂತೂ ಅನನ್ಯವಾಗಿದೆ. ಮಧುರಚೆನ್ನರು ಚಿಕ್ಕಂದಿನಲ್ಲಿಯೇ 'ಶಿವಲೀಲಾಮೃತ' ಗ್ರಂಥವನ್ನು ಓದಿ ಆಧ್ಯಾತ್ಮದ ಹಾದಿ ಹಿಡಿದು ನಂತರ ಇತರ ಭಾಷೆಯನ್ನು ಕಲಿಯುವದರ ಮೂಲಕ ತಮ್ಮ ಆತ್ಮಕಥನದ ಪರಂಪರೆಯೊಂದಿಗೆ ಅನುಭಾವ ಸಾಹಿತ್ಯದಲ್ಲಿ ವಿಶಿಷ್ಟ ಸ್ಥಾನವನ್ನು ಕಲ್ಪಿಸಿಕೊಂಡಿದ್ದಾರೆ. ಈ ಹಿನ್ನೆಲೆಯಲ್ಲಿ ಅನುಭಾವಿ ಪರಂಪರೆಯ ಸಂತರೊಂದಿಗೆ ನವೋದಯ ಸಾಹಿತ್ಯದ ಇತರ ಲೇಖಕರಿಗಿಂತ ವಿಶಿಷ್ಟವಾಗಿ ನಿಲ್ಲುತ್ತಾರೆ. ವಿವಿಧ ನೆಲೆಗಳಲ್ಲಿ ಅಭ್ಯಸಿಸುವಾಗ ಕಂಡುಬಂದ ಅದರ ವ್ಯಾಪಕತೆ ಬೆರಗು ಹುಟ್ಟಿಸುತ್ತದೆ.

ಮಧುರಚೆನ್ನರ ಸಾಧನೆಯನ್ನು ಅವರ ಸಾಹಿತ್ಯ ರಚನೆಯಿಂದ ತಿಳಿಯಬಹುದು. ಅವರು ಸಂಶೋಧಕರಾಗಿ, ಭಾಷಾಶಾಸ್ತ್ರಜ್ಞರಾಗಿ, ನಾಟಕಕಾರರಾಗಿ ಅದರಲ್ಲೂ ಅನುಭಾವಿ ಕವಿಯಾಗಿ ಸಾಹಿತ್ಯ ಕೃಷಿಗೈದಿದ್ದಾರೆ. ಹಾಗೆಯೇ ಆತ್ಮಕಥನಕಾರರಾಗಿ ವೈವಿಧ್ಯಮಯ ವಸ್ತುವಿಷಯ ತಂತ್ರಗಳನ್ನು ರೂಪಿಸಿದ ಕೀರ್ತಿ ಮಧುರಚೆನ್ನರಿಗೆ ಸಲ್ಲುತ್ತದೆ. ಇವರ ಆತ್ಮಕಥನ (ಆತ್ಮಶೋಧವು) ಮನುಷ್ಯನ ಅನುಭಾವ ಸ್ವಭಾವದ ಸೂಕ್ಷ್ಮತೆಗಳನ್ನು ಸೆರೆಹಿಡಿಯುತ್ತವೆ. ನಿರೂಪಣೆಯು ಜಟಿಲ ಸ್ವರೂಪವಾಗದೆ ಸರಳ ಮತ್ತು ಸ್ಥೂಲ ರೂಪದ್ದಾಗಿದೆ.

ಆತ್ಮಕಥನವು ಅನುಭಾವದ ಹಿನ್ನೆಲೆಯಲ್ಲಿಯೇ ರಚಿತಗೊಂಡಿದ್ದು ಇದರಲ್ಲಿ ಸಹಜವಾಗಿಯೇ ಆದರ್ಶವಾದ, ವೈಚಾರಿಕತೆ, ಅನುಭಾವವಾದದಂತ ಜೀವನಪರವಾದ ತಾತ್ವಿಕತೆಯ ಗಟ್ಟಿ ನೆಲೆಗಳು ಅವರ ಕಥಾವಸ್ತುವನ್ನು ಒಳಗೊಂಡಿವೆ.

ಪ್ರಥಮ ಕೃತಿಯಾದ ಪೂರ್ವರಂಗವು ಜ್ಞಾನಭಿಕ್ಷುವಿನ ಅನುಭಾವದ ನೆಲೆಗಳನ್ನು ಶೋಧಿಸುವ ವಿಧಾನ. ಬೇಟಿಯಾಗುವ ವ್ಯಕ್ತಿಗಳು ಅವರೊಂದಿಗೆ ನಡೆಸಿದ ಕ್ರಿಯಾಶೀಲ ಸಂವಾದ, ನಾಯಕನು ತೆಗೆದುಕೊಂಡ ನಿರ್ಧಾರಗಳನ್ನು ಮತ್ತು ಎಲ್ಲರ ಅನುಭವಗಳು. ಅನುಭಾವದ ಮಟ್ಟಕ್ಕೆ ಏರಲು ಅನುಕೂಲವಾಗುವ ಹಾಗೆ ಸಾರ್ವತ್ರಿಕರಣಗೊಳ್ಳುವ ಪ್ರಯತ್ನ ವಿಫಲವಾಗಿ ಅನುಭಾವ ಎಂಬುದು ವೈಯಕ್ತಿಕ ಸಾದನೆ, ಕೇವಲ ಮಾರ್ಗದರ್ಶಕವಾಗಬಹುದೆ ವಿನಃ ಸಂಪೂರ್ಣ ನೆರವಿಗೆ ಬರಲಾರವು ಎಂಬುದನ್ನು ತಿಳಿಸುತ್ತದೆ. ಈ ಆತ್ಮಕಥೆಯು ಅರವಿಂದ, ರಾಮಕೃಷ್ಣಪರಮಹಂಸ, ದ್ರಷ್ಟಾರಕವಿ, 'ಏ.ಈ.', ಅಂಡರ್‌ಹಿಲ್‌ರವರ ಅನುಭಾವ ಪಂಕ್ತಿ ಹಾಗೂ ವಿಚಾರವಾಣಿಯಿಂದ ಆರಂಭವಾಗುತ್ತದೆ.

ಕಾಳರಾತ್ರಿಯಲ್ಲಿ ಸಾಂಸಾರಿಕ, ಆಧ್ಯಾತ್ಮಿಕ ತೊಂದರೆ ತಾಪತ್ರಯಗಳನ್ನು ಸಾಮಾಜಿಕ ಅಂಶಗಳಾದ, ಮೂಡನಂಬಿಕೆ, ಅಂಧಾನುಕರಣೆ, ಇಹ ಮತ್ತು ಪರದ ಸುತ್ತಲು ಹರಡಿಕೊಂಡಿರುವ ಸಮಸ್ಯೆಗಳ ಚಿತ್ರಣವಿದೆ. ಇವುಗಳನ್ನು ಸುಧಾರಣೆಯತ್ತ ಸಾಗಿಸುವ ವಿಚಾರವನ್ನು ಮಾಡುವ ಮಧುರಚೆನ್ನರಿಗೆ ಅಡ್ಡಿಯಾಗುವ ಸಾಮಾಜಿಕ ಅಭಿಪ್ರಾಯಗಳನ್ನು ಚಿತ್ರಿಸಿದ್ದಾರೆ. ತಾಯಿ, ಪತ್ನಿ, ಗೆಳೆಯ ಇವರ ಮನಪರಿವರ್ತನೆ, ಕೃತಿಗಳ ಜೊತೆ ಮುಖಾಮುಖಿಯಾಗಿ, ಕೃತಿಗಳಲ್ಲಿರುವ ದೋಷವನ್ನು ಅಪಕ್ವ ತಿಳುವಳಿಕೆಯನ್ನು, ಗುರುತಿಸುವ ಮೂಲಕ ಕೇವಲ ಕಥೆಗಾರರಾಗದೆ ಸಂಶೋಧಕರಾಗಿರುವುದನ್ನು ನೋಡಬಹುದು. ಅವರೆ ಹೇಳುವ ಹಾಗೆ "ನಾನು ಕಥೆಗಾರನಲ್ಲ ಸಂಶೋಧಕನು" ಎಂಬ ಮಾತು ಸಮಂಜಸವಾಗಿ ಹೊಂದಿಕೊಳ್ಳುತ್ತದೆ ಎಂದರೂ ತಪ್ಪಾಗದು.

ಬೆಳಗು ಕೃತಿಯಲ್ಲಿ ಅಂಡರ್‌ಹಿಲ್‌ರ ವಿಚಾರಗಳು ಜಾನ್ ಬನಿಯನ್‌ರ 'ಪಿಲಿಗ್ರಿಮ್ಸ್ ಪ್ರೋಗ್ರೆಸ್' ಕೃತಿಯಲ್ಲಿನ ಅನುಭಾವ ಪಯಣದ ಕಥೆಯು ನಾಲ್ಕು ಅಧ್ಯಾಯಗಳವರೆಗೆ ವಿಸ್ತರಿಸಿಕೊಂಡಿರುವುದನ್ನು ನೋಡಿದರೆ ವಡ್ಡಾರಾಧನೆಯ ಕಥೆಗಳ ಸ್ವರೂಪವೆ ಕಂಡುಬರುತ್ತದೆ. ಮತ್ತು ಅಕ್ಕಮಹಾದೇವಿಯ ಜೀವನ ಚರಿತ್ರೆಯನ್ನು ಕಾದಂಬರಿಯ ರೂಪವಾಗಿಸಿದೆ. ಎಚ್. ತಿಪ್ಪೇರುದ್ರಸ್ವಾಮಿಯವರ 'ಕದಳಿಯ ಕರ್ಪೂರ'ದಲ್ಲಿ ಅಕ್ಕಮಹಾದೇವಿಗೆ ಉಂಟಾಗುವ ತೊಂದರೆ ತಾಪತ್ರಯಗಳು ನಡು ಹಾದಿಯಲ್ಲಿ ಕಾಮಪೀಪಾಸಿಗಳ ಕಾಟ. ಜಾತ್ರೆಗೆ ಹೊರಟ ಗಾಡಿಯಲ್ಲಿ ಇವಳು ಹೋಗುವುದು, ಕಲ್ಯಾಣದ ಅನುಭವ ಮಂಟಪದಲ್ಲಿ ಸತ್ಪರೀಕ್ಷೆ (ಪಾದವಿವಾದ ಖಂಡನಮಂಡನ)ಗಳಿಗೆ ಒಳಪಡಿಸುವುದು, ಅಲ್ಲಿಯೇ ಧ್ಯಾನ ಮಾಡುತ್ತಾ ಐಕ್ಯವಾದಳು. ಇದೇ ರೀತಿಯ ದುರ್ಗಮಪಥಗಳ ಹಾದಿಯಿಂದ ಜ್ಞಾನಭಿಕ್ಷು ಸಿದ್ಧಿಗೆ ಏರುವದು ಇದೇ ಕಥೆಯು ಮುಂದುವರಿಯುತ್ತದೆ.

ಹೀಗೆ ಕಥೆಯನ್ನು ಕಾದಂಬರಿಯಂತೆ ರಾತ್ರಿಯಲ್ಲಿ ಕಂಡ ಆಧ್ಯಾತ್ಮಿಕ ಪ್ರಯಾಣದ ಕನಸನ್ನು ಕಟ್ಟಿಕೊಡುವಂತೆ ತಮ್ಮ ಜೀವನದ ಅನುಭವಗಳನ್ನು ಸಿಂಹಾವಲೋಕನ ಕ್ರಮದಲ್ಲಿ ಕಟ್ಟಿಕೊಡುವಂತೆ ತಮ್ಮ ಜೀವನದ ಅನುಭಾವಗಳನ್ನು ಮೂಡಿಸುವ ಹಾಗೆ ಎಚ್ಚರದ ಕಡೆಗೆ ತಿರುಗಿಸುವ ಮನೋಭಾವವನ್ನು ತೋರಿರುವುದು ಕಂಡುಬರುತ್ತದೆ. ಈ ಮೂರು ಕೃತಿಗಳಲ್ಲಿ ಕಂಡುಬರುವ ಘಟನೆಗಳ ತಿರುವು ಕಥೆಯನ್ನು ಕೃತಕವಾಗಿಸದೆ ಓದುಗನಿಗೆ ಆಧ್ಯಾತ್ಮಿಕ ಪ್ರಪಂಚದಲ್ಲಿ ವಿಹರಿಸುವ ಅನುಭವವನ್ನು ಉಂಟು ಮಾಡುತ್ತವೆ.

ಮುಗ್ಧ ಭಕ್ತಿಯಿಂದ ಹಿಡಿದು, ಸಿದ್ಧಿಭಕ್ತಿಯವರೆಗೆ ಸಾಗುವ ಪಯಣದ ಹಾದಿಯಾಗಿದೆ. ಅನುಭಾವ ಪ್ರಪಂಚದ ರಮ್ಯಶಾಲೆಯಂತೆ ಕಂಗೊಳಿಸುವ ಮಧುರಚೆನ್ನರ ಆತ್ಮಕಥನವು ಕನ್ನಡಸಾಹಿತ್ಯದಲ್ಲಿ ವಿಶಿಷ್ಟತೆಯನ್ನು ಪಡೆದುಕೊಂಡಿದೆ. ಕೃತಿಗಳ ಶೀರ್ಷಿಕೆಯು ಕೂಡಾ ಜೀವನದ ಅನುಭವಗಳ ಕೈಗನ್ನಡಿಯಂತೆ ಅನುಭಾವ ವಿಚಾರ ಧಾರೆಗಳ ಮೂಲಕ ಲೀಲಾಜಾಲವಾಗಿ ಕಾದಂಬರಿಯಂತೆ ಕಥೆ ಕಟ್ಟಿ ಹೇಳಬಲ್ಲ ಅಪರೂಪದ ಲೇಖಕರು. ಅವರ ಕಥನ ಕಲೆಯು ವಿಶೇಷವಾಗಿದೆ.

ಮಧುರಚೆನ್ನ ನಿರಂತರ ಓದುಗರು ಅವರ ಜ್ಞಾನ ವಿಶ್ವಕೋಶ ಸದೃಶವಾದುದು. ಬದುಕಿನ ಬಗ್ಗೆ ನಡೆಸಿದ ಜಿಜ್ಞಾಸೆಯ ರೂಪದಲ್ಲಿ ವ್ಯಕ್ತವಾಗಿ, ಚಿಂತನಶೀಲತೆ ಬೌದ್ಧಿಕತೆಗೆ ಅಂಟಿಕೊಂಡೆ ಸಾಗುವ ಆಸಕ್ತಿ ಮಧುರಚೆನ್ನರ ಮನೋಧರ್ಮವಾಗಿದೆ. ಇವರಿಗೆ ಅನುಭಾವ ದೊಡ್ಡದು. ಬದುಕನ್ನು ಗಾಢವಾಗಿ ಪ್ರೀತಿಸಿದ್ದಾರೆ. ಇದು ಅವರ ಬದುಕಿನ ಸತ್ಯಮಾರ್ಗವನ್ನು ಅರಿಸುವ ಅನ್ವೇಷಣೆಯ ಫಲ. ಅವರ ಸಾಹಿತ್ಯಿಕ ಆಶಯಗಳಲ್ಲಿ ಒಂದಾಗಿದೆ. ಇವರಿಗೆ ಅಂತರ್‌ಶಕ್ತಿಯಲ್ಲಿ ಅಪಾರವಾದ ವಿಶ್ವಾಸವಿದೆ. ಜಗತ್ತಿನಲ್ಲಿ ಯಾವುದು ಅಸಾಧ್ಯವಿಲ್ಲ. ಪ್ರತಿಯೊಂದನ್ನು ಸಾಧಿಸುವುದಕ್ಕೆ ಹಲವಾರು ಮಾರ್ಗಗಳಿವೆ ಎಂಬ ವೈಚಾರಿಕ ಸತ್ಯದಿಂದಾಗಿ ಮನುಷ್ಯನನ್ನು ಉದ್ದೀಪನಗೊಳಿಸಿ, ಉದಾತ್ತನನ್ನಾಗಿ ಮಾಡಿ ಉನ್ನತಿಗೆ ಏರಿಸುವದೆ ಆಗಿದೆ. ಅನುಭವ ಅರಳುಗಟ್ಟಿದೆ. ಜೀವನದರ್ಶನವಿದೆ. ಉದಾತ್ತ ಬದುಕಿನ ಪ್ರಪಂಚವಿದೆ. ಬದುಕಿನ ಸ್ವರೂಪವನ್ನು ವಿವರಿಸುವ ಮೌಲಿಖ ಸಾಹಿತ್ಯವಿದೆ ತಮ್ಮ ವಿಸ್ಮೃತ ಜೀವನಾನುಭವದ ಅಪಾರ ಲೋಕಾನುಭವದ ಅಧ್ಯಯನವಾಗಿದೆ.

ದೇಶದ ಸ್ಥಿತಿಗತಿಗಳಲ್ಲಿ ತೀವ್ರ ಬದಲಾವಣೆಗಳಾಗುತ್ತಿರುವ ಈ ಸಂದರ್ಭದಲ್ಲಿ ಕನ್ನಡದ ಆತ್ಮಚರಿತ್ರೆಯು ಮತ್ತೆ ಸಂಕ್ರಮಣದ ತಿರುವಿಗೆ ಬಂದಿದೆ. ನಮ್ಮ ದೇಶದ ಬಹುಮುಖಿ ಸಂಸ್ಕೃತಿಯ ತಿಳುವಳಿಕೆ ಭವಿಷ್ಯದ ದಿಕ್ಕನ್ನು ಸೂಚಿಸಬಹುದು. ಅಮಾನವೀಯ ಅಂಶಗಳನ್ನು ನಿಷ್ಕುರವಾಗಿ ತಿರಸ್ಕರಿಸಿ ಮಾನವೀಯತೆಯನ್ನು ಅನುಷ್ಠಾನಗೊಳಿಸಲು ಅನುಭಾವಿಕ ನೆಲೆಯಲ್ಲಿ ದೇಸಿ ಮೂಲದ ಕಡೆಗೆ ಆತ್ಮಚರಿತ್ರೆ ಚಲಿಸುತ್ತಿರುವ ಲಕ್ಷಣ ಕಂಡುಬರುತ್ತದೆ. ಧರ್ಮ ಹಾಗೂ ಅದಕ್ಕೆ ಸಂಬಂಧಿಸಿದ ಆಚರಣೆಗಳನ್ನು ಕುರಿತು ನಿಜವಾದ ಧರ್ಮ ಸ್ವರೂಪವನ್ನು ಕುರಿತು, ವ್ಯಕ್ತಿಗಳ ಧಾರ್ಮಿಕ ಸ್ವಾತಂತ್ರ್ಯವನ್ನು ಕುರಿತು ಆರು ದಶಕಗಳಿಗೂ ಹಿಂದೆ ತಾಳಿದ ಈ ನಿಲುವುಗಳು, ದೇವರು ಹಾಗೂ ಧರ್ಮದ ಹೆಸರಿನಲ್ಲಿ ಪ್ರಚಲಿತವಾಗುತ್ತಿರುವ ತಪ್ಪುತಿಳಿಕೆ ಮತ್ತು

ಅಪವ್ಯಾಖ್ಯಾನಗಳ ಗೊಂದಲದಲ್ಲಿ ಧಾರ್ಮಿಕ ಮೂಲಭೂತ ವಾದಿಗಳಿಂದ ಮನುಷ್ಯತ್ವವೆ ಚೂರುಚೂರಾಗಿ ಒಡೆದು ಹೋಗುತ್ತಿರುವ ಸಂದರ್ಭದಲ್ಲಿ ಎಷ್ಟೊಂದು ಪ್ರಸ್ತುತವೂ ಮಾರ್ಗದರ್ಶಕವೂ ಆಗಿದೆ ಎಂಬುದನ್ನು ಪ್ರತ್ಯೇಕವಾಗಿ ಬೇರೆ ಹೇಳಬೇಕಾಗಿಲ್ಲ.

ಅನುಬಂಧಗಳು

೧ ಮಧುರಚೆನ್ನರ ಸಮಗ್ರ ಸಾಹಿತ್ಯ

೨. ಪಾರಿಭಾಷಿಕ ಪದಕೋಶ

೩. ಪ್ರಾಥಮಿಕ ಆಕರ ಗ್ರಂಥಗಳು

೪. ಪರಾಮರ್ಶನ ಗ್ರಂಥಗಳು

೧. ಮಧುರಚೆನ್ನರ ಸಮಗ್ರ ಸಾಹಿತ್ಯ

ಸ್ವರಚಿತ ಗ್ರಂಥಗಳು

೧.	ನನ್ನನಲ್ಲ	(ಕವನ ಸಂಗ್ರಹ)	ಪ್ರಥಮ ಮುದ್ರಣ	೧೯೩೩
	(ಹೆಚ್ಚಿನ ಕವಿತೆಗಳೊಂದಿಗೆ)	ದ್ವಿತೀಯ	೧೯೫೬	
			ತೃತೀಯ	೧೯೭೦
			ಚತುರ್ಥ	೧೯೭೨
೨.	ಪೂರ್ವರಂಗ	(ಆಧ್ಯಾತ್ಮಿಕ ಆತ್ಮಕಥನ)		೧೯೩೨
೩.	ಕಾಳರಾತ್ರಿ	(ಆಧ್ಯಾತ್ಮಿಕ ಆತ್ಮಕಥನ)		೧೯೩೩
೪.	ಬೆಳಗು	(ಆಧ್ಯಾತ್ಮಿಕ ಆತ್ಮಕಥನ)		೧೯೩೭
೫.	ಆತ್ಮಸಂಶೋಧನೆ	(ಸ್ವಾನುಭವ ಕಥನ)		೧೯೫೪
೬.	ಪೂರ್ಣಯೋಗದ ಪಥದಲ್ಲಿ	(ಅರವಿಂದಯೋಗ ವಿಚಾರಗಳು)		೧೯೬೦
೭.	ಕನ್ನಡಿಗರ ಕುಲಗುರು	ಸಿಂಪಿಲಿಂಗಣ್ಣನವರೊಡನೆ		೧೯೩೬

ಅನುವಾದಿತ ಗ್ರಂಥಗಳು

೧.	ವಿಸರ್ಜನ	(ರವೀಂದ್ರನಾಥ ಠ್ಯಾಗೂರವರ ಬಂಗಾಳಿ ಅನುವಾದ)	೧೯೩೩
೨.	ಪೂರ್ಣಯೋಗ	(ಶ್ರೀ ಅರವಿಂದರ ಯೋಗಿಕ ಸಾಧನೆ)	೧೯೩೫
೩.	ಮಾತೃವಾಣಿ	(ಶ್ರೀಮಾತೆಯವರ ವರ್ಡ್ಸ್ ಆಫ್ ದ ಮದರ್)	೧೯೪೮
೪.	ಬಾಳಿನಲ್ಲಿ ಬೆಳಕು	(ಟಾಲ್‌ಸ್ಟಾಯ್ ಆತ್ಮಕಥನ ಸಿಂಪಿಜೊತೆ)	೧೯೩೫
೫.	ಧರ್ಮಕ್ಷೇತ್ರೆ ಕುರುಕ್ಷೇತ್ರೆ	(ಸಿಂಪಿಯವರೊಡನೆ)	೧೯೪೫-೪೬

ಅಪ್ರಕಟಿತ ಗ್ರಂಥಗಳು

೧.	ವಿನೋದ ಕುಸುಮಾವಳಿ	(ಕಾವ್ಯರೂಪಕ ಉಪಲಬ್ಧ)
೨.	ಕನ್ನಡ ಪ್ರಾಚೀನ ಲಿಪಿ ಬೋಧಿನಿ	(ಲಿಪಿಶಾಸ್ತ್ರ ಉಪಲಬ್ಧ)
೩.	ನನ್ನ ಬಾಳು ಹಾಳು	(ಸಣ್ಣಕಥೆ ಉಪಲಬ್ಧ)
೪.	ತಾಯಿ	(ಶ್ರೀಹರಿದಾಸ ಚೌದರಿಯವರ ಒಂದು ಲೇಖನದ ಅನುವಾದ ಉಪಲಬ್ಧ)
೫.	ಶ್ರೀ ಮಾತೃವಾಣಿ	(ಶ್ರೀಮಾತೆಯವರ ವರ್ಡ್ಸ್ ಆಫ್ ದ ಮದರ್ ದಲ್ಲಿಯ ೬, ೭ನೆ ಅಧ್ಯಾಯಗಳನುವಾದುಪಲಬ್ಧ)

೬. ಸಿರಿಯಾಳ ಸತ್ವ ಪರೀಕ್ಷೆ (ಅನುಪಲಬ್ಧ)

೭. ರಾಕ್ಷಸಿ ಮಹತ್ವಾಕಾಂಕ್ಷೆ (ವಾಮಜೋಶೀ ಕೃತಮರಾಟಿ ಅನುವಾದ ಅನುಪಲಬ್ಧ)

ಬಿಡಿ ಲೇಖನಗಳು

ಸಂಶೋಧನಾತ್ಮಕ

೧.	ಬಾದಾಮಿ ಗುಡಿಗಳ ಜೀರ್ಣೋದ್ಧಾರ	ಜಯಕರ್ನಾಟಕ	೧-೩
೨.	ವಿಜಾಪುರ ಶಾಸನ	ಜಯಕರ್ನಾಟಕ	೧-೭-೩
೩.	ಕೂಡಲಸಂಗಮ ದೇವ	ಜಯಕರ್ನಾಟಕ	೨-೧
೪.	ಅಭಿನವ ಪಂಪ ಬರೆದ ವಿಜಾಪುರ ಶಿಲಾಲಿಪಿ	ಜಯಕರ್ನಾಟಕ	೮-೨-೩
೫.	ಪ್ರಾಚೀನ ಕಾಲದ ಒಬ್ಬ ಶ್ರೇಷ್ಠ ನಟ ಹಾಗೂ ಒಬ್ಬ ಕವಿ	ಜಯಕರ್ನಾಟಕ	೬-೫೬
೬.	ಅರ್ಜುನವಾಡದ ಶಾಸನ	ಶಿವಾನುಭವ	೩-೬
೭.	ಇತಿಹಾಸದ ಕಣಗಳು	ಶಿವಾನುಭವ	೩-೧೧
೮.	ಲಿಂಗ	ಜಯಕರ್ನಾಟಕ	೮-೫
೯.	ಲಿಂಗಿಗಳು	ಜಯಕರ್ನಾಟಕ	೯-೧
೧೦.	ಶ್ರೀಬಸವೇಶ್ವರರು ಹಾಗೂ ಶ್ರೀಚನ್ನಬಸವೇಶ್ವರರ ಪುನರಾಗಮನ ಬಾವನೆ ಅಥವ ಮಧ್ಯಕಾಲದ ಮಹಾಪುರುಷರು.	ಶಿವಾನುಭವ	೨೨-೧೦
೧೧.	ಶರಣ ಚಳುವಳಿಯ ಮುಂದಿನ ಪರಂಪರೆಯ ಇತಿಹಾಸ	ಶಿವಾನುಭವ	೨೫-೪-೫
೧೨.	ಹೊಲಿ ಪಂಚವಣಿಯವ್ಮಠ	ಶಿವಾನುಭವ	೨-೭
೧೩.	ಕಾಳಿದಾಸನ ಕಾಲ ನಿರ್ಣಯ	ಜೀವನ	೯-೯
೧೪.	ಹಲಸಂಗಿಯ ಹಿಂದಿನ ಇತಿಹಾಸ (ಸಂಗ್ರಹ)	ಜಯಕರ್ನಾಟಕ	೨೨-೭

ಸಾಹಿತ್ಯಿಕ

ಜನಪದ ಸಾಹಿತ್ಯ ಕುರಿತು

ಜನಪದ ಸಾಹಿತ್ಯ ಕುರಿತು

೧.	ಹಳ್ಳಿಯ ಹಾಡುಗಳು	ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ	೮-೪
೨.	ಹೆಣ್ಣು ಮಕ್ಕಳ ಹಾಡುಗಳು (ಗಾದೆಗಳು)	ಜಯಕರ್ನಾಟಕ	೧೭-೯
೩.	ರಮ್ಮ ಜೀವನ (ಲಾವಣಿ ಕವಿ ಖಾಜಾಬಾಯಿಯ ಪರಿಚಯ)	ಜಯಕರ್ನಾಟಕ	೧೨-೧

ಜನಪದ ಸಾಹಿತ್ಯ ಕುರಿತು

೧.	ಮಲ್ಲಿಗೆ ದಂಡೆ	ಸಂ. ರೇವಪ್ಪ ಕಾಪಸೆ	ಮುನ್ನುಡಿ ಹಾಗೂ ಟಿಪ್ಪಣಿ	೧೯೩೫
೨.	ಜನಜೀವನ (ನಾಟಕ)	ಸಿಂಪಿ ಲಿಂಗಣ್ಣ	ಮುನ್ನುಡಿ ಹಾಗೂ ಟಿಪ್ಪಣಿ	೧೯೨೯
೩.	ಭಕ್ತಿ ರಹಸ್ಯ (ನಾಟಕ)	ಸಿಂಪಿ ಲಿಂಗಣ್ಣ	ಮುನ್ನುಡಿ ಹಾಗೂ ಟಿಪ್ಪಣಿ	೧೯೨೯
೪.	ಭಕ್ತ ಪ್ರಹ್ಲಾದ (ನಾಟಕ)	ಎ.ಜೆ. ಮಸಳಿ	ಮುನ್ನುಡಿ ಹಾಗೂ ಟಿಪ್ಪಣಿ	೧೯೫೨
೫.	ವೀರ ಪಥಿಕ (ಕವನ ಸಂಗ್ರಹ)	ಪಿ. ದೂಲಾ	ಮುನ್ನುಡಿ ಹಾಗೂ ಟಿಪ್ಪಣಿ	೧೯೩೮
೬.	ಮುಗಿಲು ಜೇನು (ಕ.ಸಂ.)	ಸಿಂಪಿ ಲಿಂಗಣ್ಣ	ಪರಿಚಯ	೧೯೪೫
೭.	ತರಂಗಿಣಿ (ಕ.ಸಂ.)	ಎಸ್.ಡಿ. ಇಂಚಲ	ಮುನ್ನುಡಿ	೧೯೪೯
೮.	ನನ್ನ ಹಾಡು (ಕ.ಸಂ.)	ಬ.ಗಿ. ಯಲ್ಲಡಿ	ಹರಕೆ	೧೯೫೦
೯.	ಪುಷ್ಪಗುಚ್ಚ (ಕ.ಸಂ.)	ಸಂಗಮೇಶ ಹೊಸಮನಿ	ಆನಂದೋದ್ಗಾರ	೧೯೫೨
೧೦.	ಗಾಂಧಿ ಉಪದೇಶಾಮೃತ (ಕ.ಸಂ.)	ಜೀವಣ್ಣ ಮಸಳೇ	ಮುನ್ನುಡಿ	೧೯೫೨
೧೧.	ಸ್ತ್ರೀನೀತಿ ಸುಧಾಕರ (ಪತ್ರ ಸಾಹಿತ್ಯ)	ಗಿರಿಯಪ್ಪಗೌಡ ಓದುಗೌಡರ	ಮುನ್ನುಡಿ	೧೯೫೩

ಸಾಹಿತ್ಯಿಕ ಉಪನ್ಯಾಸಗಳು

೧.	ಬೆಳಗಾವಿ ಜಿಲ್ಲೆಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣ	೧೯೪೭
೨.	ಸೊಲ್ಲಾಪುರದ ಅಖಿಲ ಕರ್ನಾಟಕ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿ ಅಧ್ಯಕ್ಷ ಭಾಷಣ	೧೯೫೦

ಎರಡುಕವಿ ಪರಿಚಯಗಳು

೧.	ದ್ರಷ್ಟಾರ ಕವಿ	ಜಯಕರ್ನಾಟಕ	೧೪-೬
೨.	ಸದ್ಯಕ್ಕೆ ದ್ಯಾಂಪುರವೆಂಬ (ದ್ಯಾಂಪುರ ಚನ್ನಕವಿಗಳ ಅಲ್ಪಪರಿಚಯ)	ಜಯಕರ್ನಾಟಕ	೧೫-೧

ಶ್ರೀ ಅರವಿಂದ ಮತ್ತು ಶರಣ ಸಾಹಿತ್ಯ

೧.	ಗುರು ಅರವಿಂದರ ಗೀತಾ ಪ್ರಬಂಧ	ಜೀವನ ೧-೨
೨.	ಶ್ರೀ ಅರವಿಂದರು ಹೊಸದೇನು ಹೇಳಿದರು	ಜ.ಕ. ೧೨-೯
೩.	ಶ್ರೀ ಅರವಿಂದರು ಯೋಗದಲ್ಲಿ ಹೊಸಮಾತು ಯಾವುದು	ಜ.ಕ. ೧೩-೯
೪.	ಶ್ರೀ ಅರವಿಂದರ ಯೋಗದ ನಿಜ ಸ್ವರೂಪ	ಜ.ಕ. ೧೪-೧೦
೫.	ಸತ್ ಚಿತ್/ಶಿವಶಕ್ತಿಯರು	ಉದಯ ೧೫.೮.೧೯೪೮
		ವಿಶೇಷ ಸಂಚಿಕೆ
೬.	ಪೂರ್ಣಯೋಗದ ಪೂರ್ವ ಸೂಚನೆ	ಶಿವಾನುಭವ ೧೦-೧೦
		ಶಿವಾನುಭವ ೧೧-೧
೭.	ಶ್ರೀಅರವಿಂದ ಯೋಗಿಗಳ ಸಾಧನ ಸೂತ್ರ	ಪರಿಶಿಷ್ಟ ೧೯೩೬
೮.	ಭಾರತೀಯ ನವ ಜನ್ಮ (ಅನು. ದ.ರಾ. ಬೇಂದ್ರೆ)	ಪರಿಶಿಷ್ಟ ೧೯೩೬
೯.	ಬಸವಣ್ಣನ ಭಕ್ತಿ (ಕೆಲವು ವಚನ ಸಂಗ್ರಹ)	ಜಯಕರ್ನಾಟಕ ೮-೭
೧೦.	ಬಸವಣ್ಣನ ಭೋಜನ ಶಾಲೆ	ಜ.ಕ. ೧೩-೧೨
೧೧.	ಪ್ರಕಾಶಮಯ ಜೀವನ	ಶಿವಾನುಭವ ೧೮-೧
೧೨.	ಪ್ರಾಣ ಲಿಂಗಾರ್ಚನೆ	ಶಿವಾನುಭವ ೨೧-೨
೧೩.	ಸುಗುಣ ನಿರ್ಗುಣ ಸಮನ್ವಯ ಶಿವಯೋಗ ರಹಸ್ಯ	ಸುಕುಮಾರ ೨-೧
೧೪.	ಶಿವಯೋಗೀಶ್ವರರ ಶಿವಪೂಜೆ	ಶಿವಾನುಭವ ೨೧-೪
೧೫.	ನಾಲ್ಕು ಶಕ್ತಿಗಳು	ಅರವಿಂದವಾಣಿ ೧-೬
೧೬.	ಗುರುದೇವ	ಅರವಿಂದವಾಣಿ ೧-೯-೧೦

ಭಾಷಾಶಾಸ್ತ್ರ

೧.	ಶಬ್ದ ಸಾಮ್ರಾಜ್ಯದಲ್ಲಿ ಮಂತ್ರ ಶಕ್ತಿಯ ಪುನರುಜ್ಜೀವನ	ಜಯಕರ್ನಾಟಕ ೧೪-೧
೨.	ಆರ್ಯ ದ್ರಾವಿಡ ಭಾಷಾ ಸಮನ್ವಯ	ಜೀವನ ೧೧-೬-೭
೩.	ಬೇಂದ್ರೆಯವರ ಭಾಷಾಶಾಸ್ತ್ರ ವಿಷಯಕ ರೂಪುರೇಷೆ	ನಡೆದುಬಂದ ದಾರಿ ೩

ಇತರ ಲೇಖನಗಳು

೧.	ಬಾಳು	ಜಯಕರ್ನಾಟಕ ೨-೮
೨.	ಬ್ರಾಹ್ಮಣ	ಜ.ಕ. ೪, ೫, ೫
೩.	ಋಷಿಗಳ ಕಾಲದಲ್ಲಿ	ಶಿವಾನುಭವ ೧೫.೯.೧೯೩೦
೪.	ಪಜಯಿ ಪಿಶ್ವಾಮಿತ್ರ	ಜಯಕರ್ನಾಟಕ ೧೪-೫
೫.	ಋಗ್ವೇದದ ಮುಖ್ಯ ಪಂಚದೇವತೆಗಳು ಪಂಚಕ್ಷಿತಿಗಳು	ಜೀವನ ೧೦-೪
೬.	ಭಾರತ ಇತಿಹಾಸ ದರ್ಶನ	ಸಮರ್ಪಣ ೩, ೧೯೫೫
೭.	ಇತಿಹಾಸ	ಸುಳುಹು ಹೊಳಹು ೧೯೫೯
೮.	ಸತ್ಯ	ಜಯಕರ್ನಾಟಕ ೮-೯
೯.	ಸತ್ಯವೊಸಿದ್ದಿಯು	ಶಿವಾನುಭವ ೬-

೧೦. ಸತ್ಯದೃಷ್ಟಿ	ಶಿವಾನುಭವ	೭-೨
೧೧. ವಾಙ್ಮಯ ಪರಿಕ್ಷಣೆ	ಜಯಕರ್ನಾಟಕ	೧-೯
೧೨. ಆಶ್ರಯ ಬೆಳಕಿನ ಹೆಜ್ಜೆ	ಅರಮಿಂದ ಮಂಡಲ	೧೯೬೮
೧೩. ನಡೆದಂತೆ ನುಡಿ (ಜಮಾನಲಾಲ ಹೆಸರಿನಿಂದ)	ಜ.ಕ.	೧-೧೨
೧೪. ಬಾವ ಬಂಧನ (ಜಮನಲಾಲ ಹೆಸರಿನಿಂದ)	ಜ.ಕ.	೨-೧
೧೫. ಕ್ರೈಸ್ತ ವಾಙ್ಮಯ (ಜಮನಲಾಲ ಹೆಸರಿನಿಂದ)	ಜ.ಕ.	೨-೯
೧೬. ಶಿಲ್ಪಿ (ಜಮನಲಾಲ ಹೆಸರಿನಿಂದ)	ಜ.ಕ.	೩-೩
೧೭. ಕುವಿಚಾರ (ಮರಪಂಡಿತ ಹೆಸರಿನಿಂದ)	ಜ.ಕ.	೬-೭
೧೮. ಸುವಿಚಾರ (ಮರಪಂಡಿತ ಹೆಸರಿನಿಂದ)	ಜ.ಕ.	೯-೯
೧೯. ಸುರ್ವಿಚಾರ (ಮರಪಂಡಿತ ಹೆಸರಿನಿಂದ)	ಜ.ಕ.	೧೦-೯
೨೦. ಹರಟೆ (ಮರಪಂಡಿತ ಹೆಸರಿನಿಂದ)	ಜ.ಕ.	೧೧-೧೦
೨೧. ಮರ್ಕಟ ವಿಚಾರಗಳು (ಮರಪಂಡಿತ ಹೆಸರಿನಿಂದ) (ಲೇಖನ ಮಾಲೆ)	ಸ್ವಧರ್ಮ	೧೯೨೮-೨೯

೨. ಪಾರಿಭಾಷಿಕ ಪದಕೋಶ

Mystic experiences	=	ಗೂಡಾನುಭವಗಳು
Occultistis	=	ಗೂಡಾ ವಿದ್ಯಾ ವೇತ್ತರು
Light on yoga	=	ಯೋಗ ಪ್ರದೀಪ
Soul	=	ಹೃತ್ಪುರುಷ
Self	=	ಆಧ್ಯಾತ್ಮ ಪುರುಷ
Spirit	=	ಆತ್ಮ
Sub concient	=	ಅವಚೇತನ
Environmental conciousness	=	ಪರಿಸರ ಚೇತನ
In consient	=	ಅಚೇತನ
Superficial mind	=	ಬಾಹ್ಯ ಮಾನಸ
Psychical mind	=	ಅಂತರ್ಮಾನಸ
Cosmic conciousness	=	ಬ್ರಹ್ಮಸಂಸ್ಪರ್ಶ

೩. ಪ್ರಾಥಮಿಕ ಆಕರ ಗ್ರಂಥಗಳು

೧. ಚನ್ನವೀರಕಣವಿ, ಮಧುರಚೆನ್ನ, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೮೪

೨. ಡಾ. ಗುರುಲಿಂಗಕಾಪಸೆ, ಮಧುರಚೆನ್ನರ ಬದುಕು, ಬರಹ, ಚಿಂತನೆ, ಕನ್ನಡ ಸಾಹಿತ್ಯ ಅಕಾಡೆಮಿ ಬೆಂಗಳೂರು, ೨೦೦೩

೩. ಸಿಂಪಿಲಿಂಗಣ್ಣ, ಮಧುರಚೆನ್ನರ ಸ್ಮೃತಿಗಳು, ಲೋಹಿಯಾ ಪ್ರಕಾಶನ, ಬಳ್ಳಾರಿ, ೨೦೦೦

೪. ಗುರುಲಿಂಗಕಾಪಸೆ, ಮಧುರಚೆನ್ನರ ಜೀವನ ಹಾಗೂ ಕೃತಿ ಸಮೀಕ್ಷೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೬ ಡಿಸೆಂಬರ್

೫. ಶ್ರೀನಿವಾಸ ಹಾವನೂರ, ಹೊಸಗನ್ನಡ ಸಾಹಿತ್ಯ ಅರುಣೋದಯ, ಕರ್ನಾಟಕ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೦

೬. ಗುರುಲಿಂಗಕಾಪಸೆ, ಆತ್ಮಶೋಧ (ಮಧುರಚೆನ್ನರ ಕಾವ್ಯ ಮತ್ತು ಆತ್ಮಕಥೆಗಳ ಸಮಗ್ರ ಸಂಪುಟ) ಚನ್ನಬಸವ ಪ್ರಕಾಶನ ಹಲಸಂಗಿ, ೧೯೯೮

೭. ಕೀರ್ತಿನಾಥ ಕುರ್ತಕೋಟಿ, ನೂರುಮರ ನೂರುಸ್ವರ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೧೯೯೮

೮. ಜಿ.ಎಸ್. ಶಿವರುದ್ರಪ್ಪ, ಮಧುರಚೆನ್ನರ ಆತ್ಮಶೋಧ, ಸಾಹಿತ್ಯ ವಿಮರ್ಶೆ, ೧೯೯೯, ಸಂ. ಪಂಡಿತಾರಾಧ್ಯ, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೧

೯. ಚನ್ನವೀರ ಕಣವಿ, ಮಧುರಚೆನ್ನರ ಅನುಭಾವಕಾವ್ಯ, ಸಾಹಿತ್ಯವಿಮರ್ಶೆ, ೧೯೯೯, ಸಂ. ಪಂಡಿತಾರಾಧ್ಯ, ಕನ್ನಡ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೨೦೦೧

೧೦. ಎಸ್.ಎಸ್. ಪೊಳವಾಡ, ಮಧುರಚೆನ್ನ, ನಡೆದು ಬಂದದಾರಿ ಸಂ.ಜಿ.ಬಿ. ಜೋಶಿ, ಕೆ.ಡಿ. ಕುರ್ತಕೋಟಿ, ಮನೋಹರ ಗ್ರಂಥಮೂಲ ಪ್ರಕಾಶನ, ಧಾರವಾಡ, ೧೯೬೧, ಏಪ್ರಿಲ್.

೧೧. ಮಧುರಚೆನ್ನ, ನಾಳಿನ ಕಾವ್ಯ, ಕನ್ನಡ ಸಾಹಿತ್ಯ ಮೀಮಾಂಸೆ, ಸಂ.ಡಾ. ರಹಮತ್ ತರೀಕೆರೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ೨೦೦೧.

೧೨. ಎಂ.ಎ. ವೆಂಕಟರಾಮನ್, ಕಾಳರಾತ್ರಿ (ವಿಮರ್ಶೆ) ಪ್ರಬುದ್ಧ ಕರ್ನಾಟಕ ೧೪-೪

೪. ಪರಾಮರ್ಶನ ಗ್ರಂಥಗಳು

೧. ಗುರುಲಿಂಗಕಾಪಸೆ, ಮಧುರಚೆನ್ನರು, ವೀರಶೈವ ಅಧ್ಯಯನ ಸಂಸ್ಥೆ, ಗದಗ, ೧೯೭೮

೨. ಗುರುಲಿಂಗಕಾಪಸೆ, ಮಧುರಚೆನ್ನರ ಲೇಖನಗಳು, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ, ೧೯೯೩

೩. ಚೆನ್ನವೀರಕಣವಿ, ಸಾಹಿತ್ಯಚಿಂತನ, ಆನಂದ ಪ್ರಕಾಶಕರು, ಧಾರವಾಡ, ೧೯೬೬

೪. ಡಾ.ಡಿ. ಮಂಗಳಾ ಪ್ರಿಯದರ್ಶಿನಿ, ನವೋದಯ ಕಾವ್ಯದಲ್ಲಿ ಅನುಭಾವದ ಅಂಶಗಳು ಒಂದು ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ೧೮.೧೯೯೪

೫. ಆರ್.ಜಿ. ಕುಲಕರ್ಣಿ, ಚತುರ್ಮುಖ, ಶ್ರೀ ಅರವಿಂದ ಮಂಡಳ ಪ್ರಕಾಶನ, ಬೆಂಗಳೂರು, ೧೯೬೮

೬. ಎಸ್.ಎಸ್. ಮಾಳವಾಡ, ಮಧುರಚೆನ್ನರು, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು, ೧೯೭೨

೭. ಡಾ. ಗುಂಡಪ್ಪ ಕಲಬುರ್ಗಿ, ಕಣವಿ ಮತ್ತು ಆಧುನಿಕ ಕಾವ್ಯ ಪರಂಪರೆ, ಸೌಜನ್ಯ ಪ್ರಕಾಶನ, ೨೦೦೦

೮. ಸಿಂಪಿಲಿಂಗಣ್ಣ, ಮಧುರಚೆನ್ನರ ಜೀವನ ಹಾಗೂ ಕಾರ್ಯ

೯. ಬಿ.ಎಂ. ಪುಟ್ಟಯ್ಯ, ಆತ್ಮಕಥೆಗಳಲ್ಲಿ ಕರ್ನಾಟಕದ ಕಥೆ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ, ೧೯೯೯

೧೦. ತಟ್ಟಿ ಶಾಮರಾಯರು, ಕಾಳರಾತ್ರಿ (ವಿಮರ್ಶೆ) ಜಯಕರ್ನಾಟಕ ೧೪-೪

AKSHARA GRANTHALAYA
ACC.NO. 129753